# ಹೊಸ ಮನುಷ್ಯ

ಸಮಾಜವಾದಿ ಮಾಸಿಕ

ಮೇ, ೨೦೧೩ (‘ನವ **ಮಾನವ** ಮಾಸಿಕ’ದ ನೋಂದಿತ ಆವೃತ್ತಿ) ಸಂಪುಟ: ೨ ಸಂಚಿಕೆ: ೧೦

**ಸಂಪಾದಕ : ಡಿ.ಎಸ್.ನಾಗಭೂಷಣ**

**ಚಂದಾ** ವಾರ್ಷಿಕ: ರೂ.೧೨೫/-(ವ್ಯಕ್ತಿಗಳಿಗೆ) ರೂ.೨೦೦/-(ಸಂಸ್ಥೆ/ಗ್ರಂಥಾಲಯಗಳಿಗೆ) ಬಿಡಿ ಪ್ರತಿ: ರೂ.೧೨/-



**ವಿಳಾಸ:** ಎಚ್.ಐ.ಜಿ-೫, ‘ನುಡಿ’, ಕಲ್ಲಳ್ಳಿ ಬಡಾವಣೆ, ವಿನೋಬ ನಗರ, ಶಿವಮೊಗ್ಗ-೫೭೭ ೨೦೪

**ದೂ:** ೦೮೧೮೨-೨೪೮೫೭೪ **ಸಂಚಾರಿ:** ೯೪೪೯೨ ೪೨೨೮೪ ***ಈ ಮೇಲ್:*** dsnagabhushana@gmail.com


## ಸಂಪಾದಕರ ಟಿಪ್ಪಣಿಗಳು

ಪ್ರಿಯ ಓದುಗರೇ,

**ರಾ**ಜ್ಯ ವಿಧಾನಸಭಾ ಚುನಾವಣೆಗಳು ಮತ್ತೆ ಬಂದಿವೆ. ಕಳೆದ ಐದು ವರ್ಷಗಳಲ್ಲಿ ರಾಜ್ಯ ಕಂಡ ರಾಜಕೀಯ ಗೊಂದಲಗಳು, ಅದಕ್ಕೆ ಕಾರಣವಾದ ರಾಜಕೀಯ ಅನಾಚಾರ ರಾಜ್ಯ ರಾಜಕಾರಣದ ಇತಿಹಾಸದಲ್ಲೇ ಕೇಳರಿಯದಂತಹದು. ಇದರ ಹಿಂದೆ ಇದ್ದುದು ಕಳೆದ ಚುನಾವಣೆಗಳಲ್ಲಿ ಯಾವುದೇ ಒಂದು ಪಕ್ಷಕ್ಕೆ ಸ್ಪಷ್ಟ ಬಹುಮತ ದೊರೆಯದೇ ಹೋದದ್ದು. ಹಾಗಾಗಿ ಈ ಬಾರಿ ಜನತೆ ಯಾವುದಾದರೂ ಒಂದು ಪಕ್ಷಕ್ಕೆ ಸ್ಪಷ್ಟ ಬಹುಮತ ನೀಡಲು ನಿರ್ಧರಿಸಿದರೆ ಆಶ್ಚರ್ಯವಿಲ್ಲ. ಆದರೆ ಇಂದಿನ ಚನಾವಣಾಪೂರ್ವ ಪರಿಸ್ಥಿತಿಯನ್ನು ಅವಲೋಕಿಸಿದರೆ, ಅದು ಕಷ್ಟಸಾಧ್ಯ ಮಾತ್ರ ಎನ್ನಿಸುತ್ತಿದೆ. ಬಹಳ ಕಡೆ ಬಹು ತುರುಸಿನ ಚತುಷ್ಕೋನ ಸ್ಪರ್ಧೆ ಇದ್ದಂತಿದೆ. ಸ್ಥಳೀಯ ಸಂಸ್ಥೆಗಳ ಚುನಾವಣಾ ಫಲಿತಾಂಶಗಳನ್ನು ನೋಡಿದರೆ ಮತ್ತು ಮೇಲ್ಸ್ತರ ಮಟ್ಟದ ಸಾರ್ವಜನಿಕ ಅಭಿಪ್ರಾಯವನ್ನು ಗಮನಿಸಿದರೆ, ಕಾಂಗ್ರೆಸ್ ಪಕ್ಷಕ್ಕೆ ಅನುಕೂಲವಿದ್ದಂತಿದೆ. ಆದರೆ ಆಳದಲ್ಲಿ, ಸ್ಥಳೀಯ ಮಟ್ಟದಲ್ಲಿ ಮತದಾನದ ಹಿಂದಿನ ದಿನದವರೆಗೆ ನಡೆಯುವ ಬೆಳವಣಿಗೆಗಳು ಮತದಾರರ ಒಲವುಗಳಲ್ಲಿ ಉಂಟು ಮಾಡುವ ಬದಲಾವಣೆಗಳು ಯಾರ ಲೆಕ್ಕಾಚಾರಗಳಿಗೂ ನಿಲುಕದಂತಹವು. ಹಾಗಾಗಿ ಈ ದೇಶದಲ್ಲಿ ಫಲಿತಾಂಶದ ಬಗೆಗಿನ ಎಂತಹ ವೈಜ್ಞಾನಿಕ ಸಮೀಕ್ಷೆಗಳೂ ಸುಳ್ಳಾಗಬಲ್ಲವು. ಹಾಗೆ ಆಗಿದೆ ಕೂಡ!

ಅದೇನೇ ಇರಲಿ, ಮೊನ್ನೆ ನನ್ನ ಗೆಳೆಯರೊಬ್ಬರು(ಅವರು ರಾಜ್ಯ ಸರ್ಕಾರದ ನಿವೃತ್ತ ಅಧಿಕಾರಿಯೂ ಹೌದು) ಬೆಂಗಳೂರಿನಿಂದ ದೂರವಾಣಿ ಕರೆ ಮಾಡಿ, ಅಲ್ಲಿ ಅನಂತಮೂರ್ತಿ, ಕಾರ್ನಾಡ್, ಮರುಳಸಿದ್ಧಪ್ಪ, ಎಸ್.ಜಿ. ಸಿದ್ಧರಾಮಯ್ಯ, ಗೋವಿಂದರಾವ್ ಮುಂತಾದ ರಾಜ್ಯದ ಲೇಖಕ-ಬುದ್ಧಿಜೀವಿಗಳ ಸಭೆ ನಡೆದಿದೆಯೆಂದೂ, ಅವರೆಲ್ಲರೂ ಕಾಂಗ್ರೆಸ್ಸನ್ನು ಬೆಂಬಲಿಸಿ ಕರಪತ್ರವೊಂದನ್ನು ಹೊರಡಿಸುತ್ತಿರುವುದಾಗಿಯೂ ಅದಕ್ಕೆ ನನ್ನ ಹೆಸರನ್ನೂ ಸೇರಿಸಲು ನನ್ನ ಒಪ್ಪಿಗೆ ಕೇಳಿದರು. ಇಂದಿನ ಪರಿಸ್ಥಿತಿಯಲ್ಲಿ ನಾನು ಹಾಗೆ ಯಾವುದೇ ಒಂದು ಪಕ್ಷಕ್ಕೆ ಸಾರಾ ಸಗಟಾಗಿ ಬೆಂಬಲ ಘೋಷಿಸಲು ಸಾಧ್ಯವಿಲ್ಲ ಎಂದೆ.

ನಿಜ, ಇಂದಿನ ರಾಜಕೀಯ ಪರಿಸ್ಥಿತಿಯಲ್ಲಿ ಕಾಂಗ್ರೆಸ್, ನಿಜವಾದ ಅರ್ಹತೆಯಿಂದಲ್ಲದಿದ್ದರೂ, ಅನಿವಾರ್ಯ ಆಯ್ಕೆಯಾಗಿ ಉತ್ತಮ ಎನಿಸುತ್ತದೆ. ಏಕೆಂದರೆ ಅದು ಅಧಿಕಾರಕ್ಕೆ ಬಂದರೆ ಮುಖ್ಯ ಮಂತ್ರಿಯಾಗುವ ಸಾಧ್ಯತೆ ಇರುವ ಸಿದ್ಧರಾಮಯ್ಯ, ಪರಮೇಶ್ವರ್ ಮತ್ತು ಖರ್ಗೆ ಇವರಲ್ಲಿ ಪ್ರತಿಯೊಬ್ಬರೂ ಇತರ ಪಕ್ಷಗಳ ಮುಖ್ಯಮಂತ್ರಿ ಅಭ್ಯರ್ಥಿಗಳಿಗಿಂತ ಉತ್ತಮ ಆಡಳಿತ ನೀಡಬಲ್ಲ ದಕ್ಷತೆ ಮತ್ತು ಅನುಭವ ಉಳ್ಳವರು. ಆದರೆ ಈ ಪಕ್ಷವನ್ನು ಸಾರಾಸಗಟಾಗಿ ಬೆಂಬಲಿಸಲು ಇದಷ್ಟೇ ಕಾರಣವಾಗಲಾರದು. ಈ ಪಕ್ಷ ಸಾಕಷ್ಟು ಸಂಖ್ಯೆಯಲ್ಲಿ ಅಯೋಗ್ಯರಿಗೆ, ಭ್ರಷ್ಟರಿಗೆ, ಅಕ್ರಮ ಆಸ್ತಿದಾರರಿಗೆ, ಕುಟುಂಬ ರಾಜಕಾರಣದ ಯಜಮಾನರುಗಳಿಗೆ ಟಿಕೆಟ್ ನೀಡಿ ತಾನು ಸರ್ಕಾರ ರಚಿಸಿದರೂ ಅದು ಸ್ವಚ್ಛ, ದಕ್ಷ, ಜನಹಿತ ಆಡಳಿತ ನೀಡಬಹುದಾದ ದಾರಿಯಲ್ಲಿ ತಾನೇ ಅಡೆತಡೆಗಳನ್ನು ನಿರ್ಮಿಸಿಕೊಂಡಿದೆ. ಈ ಪಕ್ಷ ಕಳೆದ ಚುನಾವಣೆಗಳ ಸೋಲಿನ ಇತಿಹಾಸದಿಂದ ಯಾವುದೇ ಪಾಠ ಕಲಿತಂತಿಲ್ಲ. ಜನತೆಗೆ ಈ ಬಾರಿ ತಮ್ಮ ಪಕ್ಷ ಅನಿವಾರ್ಯ ಆಯ್ಕೆಯಾಗಿದೆ ಎಂದು ಭಾವಿಸಿ ಜನತೆಯ ರಾಜಕೀಯ ಅಸಹಾಯಕತೆಯ ಲಾಭ ಪಡೆಯಲು ಅದು ಹೊರಟಂತಿದೆ. ಹಾಗಾಗಿ ಈ ಪಕ್ಷ ಪ್ರಜ್ಞಾವಂತ ಜನತೆಯ ಸಾರಾಸಗಟು ಬೆಂಬಲಕ್ಕೆ ಅರ್ಹವೇನೂ ಅಲ್ಲ.

ಅಧಿಕಾರ ಪಡೆಯಲು ಕಾಂಗ್ರೆಸ್ ಇದ್ದುದರಲ್ಲಿ ಆಯ್ಕೆಗೆ ಹೆಚ್ಚು ಅರ್ಹ(ರಾಜ್ಯದಲ್ಲಿ ಮಾತ್ರ; ಕೇಂದ್ರದಲ್ಲಿ ಅಲ್ಲ.) ಎಂದು ಹೇಳಿಯೂ ಈ ಮೇಲಿನ ಮಾತುಗಳನ್ನಾಡುತ್ತಿರುವೆ. ಹಾಗೆ ನೋಡಿದರೆ ಇತರ- ಬಿಜೆಪಿ, ಜೆಡಿಎಸ್, ಕೆಜೆಪಿ-ಪಕ್ಷಗಳು ಶುದ್ಧ ಅಯೋಗ್ಯರಿಗೆ, ಭ್ರಷ್ಟರಿಗೆ ಟಿಕೆಟ್ ಕೊಟ್ಟಿಲ್ಲವೆಂದಲ್ಲ. ಈ ವಿಷಯದಲ್ಲಿ ಜೆಡಿಎಸ್ ಅತ್ಯಂತ ನಿರ್ಲಜ್ಜ ಪಕ್ಷವಾಗಿ ಹೊರಹೊಮ್ಮಿದೆ. ಮೊದಲಿಂದಲೂ ತತ್ವಹೀನ ಸಮಯಸಾಧಕತೆ, ಜಾತೀಯತೆ ಮತ್ತು ಕುಟುಂಬ ರಾಜಕಾರಣ ಮಾಡಿಕೊಂಡು ಬರುತ್ತಿರುವ ಈ ಪಕ್ಷ ಈ ಚುನಾವಣೆಯ ಹೊತ್ತಿಗೆ ಅಕ್ಷರಶಃ ದೊಡ್ಡ ತಿಪ್ಪೆಗುಂಡಿಯಂತಾಗಿದೆ. ಎಲ್ಲೆಲ್ಲಿಂದಲೋ ಕೋಟಿ ಕೋಟಿ ಹಣ ಹೊಡೆದು ಬಂದವರನ್ನು, ಯಾವುದಾವುದೋ ಪಕ್ಷದಿಂದ ಟಿಕೆಟ್ ಸಿಗದೆ ಹತಾಶರಾಗಿ ಬಂದ ದುಷ್ಟ-ಭ್ರಷ್ಟರಿಗೆಲ್ಲ ಇಲ್ಲಿ ಯಾವುದೇ ಎಗ್ಗಿಲ್ಲದೆ ಟಿಕೆಟ್ ನೀಡಲಾಗಿದೆ. ಈ ಪಕ್ಷವೇನಾದರೂ' ಅಧಿಕಾರದಲ್ಲಿ ಪಾಲುದಾರನಾದರೆ ಜನತೆ ಎಂತಹ ಆಡಳಿತವನ್ನು ನಿರೀಕ್ಷಿಸಬಹುದೆಂದು ಯೋಚಿಸಿದರೇ ಆತಂಕವಾಗುತ್ತದೆ. ಈ ಪಕ್ಷಕ್ಕೆ ಒಂದು ಪ್ರಮುಖ ಜಾತಿಯ ಬಹು ದೊಡ್ಡ ಭಾಗ ಬೆಂಬಲವಾಗಿ ನಿಂತಿರುವುದು ಮತ್ತು ರಾಜ್ಯದ ಕೆಲವು ಹಿರಿಯ, ಮರ್ಯಾದಸ್ಥರೆನಿಸಿದ ರಾಜಕಾರಣಿಗಳು ಈ ಪಕ್ಷದಲ್ಲಿರುವುದು ಆಶ್ಚರ್ಯಕರವಷ್ಟೇ ಅಲ್ಲ, ದುರಂತವೂ ಹೌದು.

ಇದೇ ಮಾತುಗಳನ್ನು ಸರಿಸುಮಾರಾಗಿ ಹೊಸ ಕೆಜೆಪಿ ಬಗ್ಗೆಯೂ ಹೇಳಬಹುದು. ಯಡ್ಯೂರಪ್ಪನವರ ‘ಅಭಿವೃದ್ಧಿ’ ಮಂತ್ರವನ್ನೇ ತನ್ನ ತತ್ವ ಪ್ರಣಾಲಿ ಮಾಡಿಕೊಂಡಿರುವ ಈ ಪಕ್ಷಕ್ಕೆ ಯಡ್ಯೂರಪ್ಪನವರ ವೈಯುಕ್ತಿಕ ಅಭಿಮಾನಿಗಳು ಮತ್ತು ‘ಫಲಾನುಭವಿ’ಗಳಲ್ಲದೆ, ಇತರೆ ಪಕ್ಷಗಳಲ್ಲಿ ಆಯಕಟ್ಟಿನ ಜಾಗ ಗಿಟ್ಟಿಸಿಕೊಳ್ಳಲು ವಿಫಲರಾದ ಎಲ್ಲ ರೀತಿಯ ಪಾಪಿ-ಪರದೇಶಿಗಳೂ ನುಗ್ಗಿ ಬಂದಿದ್ದಾರೆ. ಮತ್ತೆ ಜೆಡಿಎಸ್‌ನಂತೆ ಒಂದು ನಿರ್ದಿಷ್ಟ ಜಾತಿಯ ಗಣನೀಯ ಭಾಗದ ಬೆಂಬಲ ಮತ್ತು ಯಡ್ಯೂರಪ್ಪನವರು ಸಾಧಿಸಿದ ‘ಅಭಿವೃದ್ಧಿ’ಯ ಹಿಂದೆ ಜಮಾ ಆಗಿರುವ ಹಣದ ರಾಶಿಯನ್ನು ನಂಬಿ ಇವರೆಲ್ಲ ಇಲ್ಲಿ ಜಮಾಯಿಸಿದ್ದಾರೆ. ಇವರಲ್ಲಿ ನಮ್ಮ ಕೆಲವು ‘ಸೋಶಲಿಸ್ಟ್’ ಖಯಾಲಿಯ ಲೇಖಕರೂ, ರಾಜಕಾರಣಿಗಳೂ ಯಡ್ಯೂರಪ್ಪನವರ ಬಿಜೆಪಿ ವಿರೋಧಿ ನಿಲುವನ್ನೂ, ಪ್ರಾದೇಶಿಕ ಪಕ್ಷದ ಕಲ್ಪನೆಯನ್ನೂ ಬೆಂಬಲಿಸಿ ಅಲ್ಲಿಗೆ ಹೋಗಿರುವುದಾಗಿ ಹೇಳಿಕೊಳ್ಳುತ್ತಿದ್ದಾರೆ. ಇವರ ‘ಸೋಶಲಿಶಂ’ಗೆ ಇವುಗಳ ಹೊರತಾಗಿ ಇನ್ನಾವ ಕಾಳಜಿಗಳೂ ಇಲ್ಲದಷ್ಟು

ತತ್ವದರಿದ್ರವಾಗಿದ್ದರೆ ಅವರು ಅಲ್ಲಿಗೆ ಹೋಗಿದ್ದೇ ಒಳ್ಳೆಯದು ಎಂದು ಹೇಳಬೇಕಾಗುತ್ತದೆ. ಹಾಗೇ ಯಡ್ಯೂರಪ್ಪ ಎಂದೂ, ಹೇಳಿದ ಯಾವ ತತ್ವಕ್ಕೂ, ಆಡಿದ ಯಾವ ಮಾತಿಗೂ ಬದ್ಧರಾದವರಲ್ಲ, ಅವರು ಮುಂದೊಂದು ದಿನ ಬಿಜೆಪಿಗೆ ಮರಳುವ ಎಲ್ಲ ಸಾಧ್ಯತೆಗಳಿವೆ ಎಂಬ ಸಾಮಾನ್ಯ ವಿವೇಕವೂ ಇವರಲ್ಲಿ ಕಾಣೆಯಾಗಿದೆ ಎಂದರೆ ಇವರ ರಾಜಕೀಯ ಆಕಾಂಕ್ಷೆ ಯಾವ ಹತಾಶ ಹಂತ ತಲುಪಿರಬಹುದು ಎಂದು ಯೋಚಿಸಿ ಇವರು ಮಾಡಬಹುದಾದ ರಾಜಕಾರಣದ ಬಗ್ಗೆ ಭಯವಾಗುತ್ತದೆ.

ಇನ್ನು ಬಿಜೆಪಿ ಈಗ ರಾಜ್ಯದಲ್ಲಿ ಎಲ್ಲ ರಾಜಕೀಯ ನಂಬಿಕೆ ಕಳೆದುಕೊಂಡು ಅನಾಥವಾಗಿರುವ ಪಕ್ಷ. ಸದ್ಯಕ್ಕೆ ಅಧಿಕಾರದಲ್ಲಿದ್ದೂ ಈ ಚುನಾವಣೆಗಳಲ್ಲಿ ಹಲವು ಕ್ಷೇತ್ರಗಳಲ್ಲಿ ಅದಕ್ಕೆ ಸೂಕ್ತ ಅಭ್ಯರ್ಥಿಗಳೇ ದೊರಕದೇ ಪರದಾಡಬೇಕಾದ ಪರಿಸ್ಥಿತಿ ಬಂದಿತೆಂದರೆ, ಆ ಪಕ್ಷ ಮುಟ್ಟಿರುವ ಹೀನ ಸ್ಥಿತಿಯ ಪರಿಚಯವಾದೀತು. ಸಕಲ ಸದ್ಗುಣ ಸಂಪನ್ನತೆಯ ಸ್ವಯಂ ಘೋಷಣೆಯಲ್ಲಿ ಮೆರೆದು ಹಾಳಾದ ಈ ಪಕ್ಷಕ್ಕೆ ಇರುವ ಏಕೈಕ ಶ್ರೀರಕ್ಷೆ ಎಂದರೆ ಅದರ ಮೂಲ ನಿಷ್ಠಾವಂತ ಕಾರ್ಯಕರ್ತರ ಪಡೆ. ಅದು ತತ್ಕಾಲೀನ ಸೋಲು ಗೆಲುವುಗಳಿಂದ ವಿಚಲಿತವಾಗದೆ ದೀರ್ಘಕಾಲೀನ ದೃಷ್ಟಿಯಿಟ್ಟುಕೊಂಡು ದೃಢ ಮನಸ್ಸಿನಿಂದ ಮುನ್ನಡೆಯುವ ಪಡೆ. ಅದು ಮತ್ತು ಅಧಿಕಾರಾವಧಿಯಲ್ಲಿ ಸಂಗ್ರಹಿಸಿರುವ ಅಪಾರ ಹಣ ಹಾಗೂ ಕೆಲವು ಜಾತಿ ಮಠಗಳ ಗುಪ್ತ ಬೆಂಬಲ ಈ ಬಾರಿ ಈ ಪಕ್ಷದ ಕನಿಷ್ಠ ಮರ್ಯಾದೆಯನ್ನು ಕಾಪಾಡಬಹುದು.

ಕೊನೆಯದಾಗಿ, ಬಿಜೆಪಿಯ ಅಕ್ರಮ ಸಂತಾನವೆನಿಸಿರುವ ಬಿ.ಎಸ್.ಆರ್. ಕಾಂಗ್ರೆಸ್ ಬಗ್ಗೆ. ಏಳೆಂಟು ಕ್ಷೇತ್ರಗಳ ಹೊರತಾಗಿ ರಾಜ್ಯದಲ್ಲಿ ಆಟಕ್ಕುಂಟು ಲೆಕ್ಕಕ್ಕಿಲ್ಲಂದಂತಹ ಪಕ್ಷವಿದು. ಇದರ ಬಗ್ಗೆ ಹೆಚ್ಚು ಬರೆದಷ್ಟೂ ನನ್ನ ನಿಮ್ಮ ಇಬ್ಬರ ಮನಸ್ಸೂ ಹಾಳಾಗುವ ಸಂಭವವಿದೆ.

ಹಾಗಾಗಿ, ಈ ಎಲ್ಲ ಹಿನ್ನೆಲೆಯಲ್ಲಿ ಕಾಂಗ್ರೆಸ್ ಈ ಬಾರಿ ಇದ್ದುದರಲ್ಲಿ ಉತ್ತಮ ಆಯ್ಕೆ ಆಗಬಹುದು ಎಂದರೂ, ಅದಕ್ಕೆ ಸಗಟು ಬೆಂಬಲ ನೀಡಬಾರದೆಂದೂ ಹೇಳಲು ಇನ್ನೊಂದು ಕಾರಣವಿದೆ. ಅದೆಂದರೆ, ಹಲವು ಕ್ಷೇತ್ರಗಳಲ್ಲಿ ಕಾಂಗ್ರೆಸ್ಸಿನವರಿಗಿಂತ ಒಳ್ಳೆಯ ಅಭ್ಯರ್ಥಿಗಳಿದ್ದಾರೆ. ಅವರಿಗೆ ಅನ್ಯಾಯವಾಗಬಾರದು. ಅವರು ಶಾಸನಸಭೆಗೆ ಆರಿಸಿ ಬಂದು ಜನಹಿತ ಆಡಳಿತವನ್ನು ಖಚಿತಪಡಿಸಬೇಕಾಗಿದೆ. ಇನ್ನು ಸರ್ವೋದಯ ಕರ್ನಾಟಕ, ರೈತ ಸಂಘ, ಲೋಕಸತ್ತಾ ಪಕ್ಷಗಳ ಅಭ್ಯರ್ಥಿಗಳು ಎಂದೂ ಇತರ ಪಕ್ಷಗಳ ಅಭ್ಯರ್ಥಿಗಳಿಗಿಂತ ಖಂಡಿತ ಹೆಚ್ಚು ವಿಶ್ವಾಸಾರ್ಹರು. ಹಾಗಾಗಿ ಈ ಎಲ್ಲ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಈ ಬಾರಿ ಬಹು ಎಚ್ಚರಿಕೆಯಿಂದ ಮತದಾನ ಮಾಡುವ ಹೊಣೆ ನಮ್ಮದಾಗಿದೆ.

**–ಸಂಪಾದಕ**

---

# ಕೆಲವು ಸಣ್ಣ ಪುಟ್ಟ ಟಿಪ್ಪಣಿಗಳು

## ರಾಷ್ಟ್ರ ಮರೆತೇ ಹೋದ ಸಿಖ್ ಹತ್ಯಾಕಾಂಡ...

೧೯೮೪ರ ಸಿಖ್ ಹತ್ಯಾಕಾಂಡದ ವಿಚಾರಣೆಗೆ ಮರುಜೀವ ಬಂದಿದೆ. ಕಾಂಗ್ರೆಸ್ ನಾಯಕ ಜಗದೀಶ್ ಟೈಟ್ಲರ್ ವಿರುದ್ಧ ಮರು ವಿಚಾರಣೆಗೆ ಕೆಳ ನ್ಯಾಯಾಲಯವೊಂದು ಈಗ ಆದೇಶಿಸಿದೆ. ಈ ದೇಶ ಆತ್ಮಸಾಕ್ಷಿಯೆಂಬುದನ್ನು ಕಳೆದುಕೊಂಡಿದೆ ಎಂಬುದನ್ನು ಪದೇ ಪದೇ ನೆನಪಿಸುವ ಹತ್ಯಾಕಾಂಡವಿದು. ೩೦ ವರ್ಷಗಳ ಹಿಂದೆ ದೆಹಲಿಯ ಬೀದಿ–ಮನೆಗಳಲ್ಲಿ ಸಾವಿರಾರು ಜನ ಸಿಕ್ಖರ ಬರ್ಬರ ಕೊಲೆಗೆ ಕಾರಣವಾದ–೨೦೦೨ರ ಗುಜರಾತ್ ಹತ್ಯಾಕಾಂಡದಂತೆಯೇ–ಈ ವ್ಯವಸ್ಥಿತ ಘೋರ ಅಪರಾಧವನ್ನು ರಾಷ್ಟ್ರ ಮರೆತೇಬಿಟ್ಟಿದೆ.

ಈ ಸಂದರ್ಭದಲ್ಲಿಯೇ ನನಗೆ ನಮ್ಮ ಉಗ್ರ ಎಡಪಂಥೀಯ ಗೆಳೆಯರ ಕೋಮುವಾದ ವಿರೋಧಿ ಅಥವಾ ಕೋಮು ಸೌಹಾರ್ದ ರಾಜಕಾರಣದ ಉದ್ದೇಶಗಳ ಬಗ್ಗೆ ಅನುಮಾನ ಶುರುವಾಗುವುದು. ಸಂಘ ಪರಿವಾರದ ಪ್ರಭಾವ ಬೆಳೆದರೆ ತಮ್ಮ ರಾಜಕಾರಣದ ಮೂಲೋತ್ಪಾಟನೆಯಾದೀತು ಎಂಬ ಭಯವೇ ಇವರ ಕೋಮುವಾದ ವಿರೋಧಿ ಕಾರ್ಯಕ್ರಮದ ಉದ್ದೇಶವಾಗಿರಬಹುದೇ ಹೊರತು ಅಲ್ಪ ಸಂಖ್ಯಾತರನ್ನು ಕುರಿತ ಕಾಳಜಿಯಾಗಲೀ, ಸಂವಿಧಾನದ ಮೂಲ ಸೆಕ್ಯುಲರ್ ಲಕ್ಷಣವನ್ನು ಕಾಪಾಡುವುದಾಗಲೀ ಅಲ್ಲವೇನೋ ಎಂದು ಅನಿಸತೊಡಗುವುದು. ಗುಜರಾತ್ ಹತ್ಯಾಕಾಂಡದ ಬಗ್ಗೆ ಸಕಾರಣವಾಗಿಯೇ ಪದೇ ಪದೇ ಉಗ್ರವಾಗಿ ಮಾತನಾಡುವ ಇವರು ಸಿಖ್ ಹತ್ಯಾಕಾಂಡಕ್ಕೆ ಬಲಿಯಾದ ಕುಟುಂಬಗಳು ನ್ಯಾಯದಾನದಿಂದ ವಂಚಿತವಾಗಿರುವುದನ್ನು ಏಕೆ ಅಷ್ಟೇ ಉಗ್ರವಾಗಿ ಪ್ರಶ್ನಿಸುತ್ತಿಲ್ಲ?

ಗುಜರಾತ್ ಹತ್ಯಾಕಾಂಡಕ್ಕೆ ಸಂಬಂಧಿಸಿದಂತೆ ಹಲವು ಹಂತದ ವಿಚಾರಣೆಗಳು ನಡೆಯುತ್ತಿದ್ದು, ಈಗಾಗಲೇ ನೂರಾರು ಜನ ವಿವಿಧ ಅವಧಿಗಳ ಸೆರೆಮನೆ ವಾಸದ ಶಿಕ್ಷೆಗೆ ಒಳಗಾಗಿದ್ದಾರೆ. ಆದರೆ ಸಿಖ್ ಹತ್ಯಾಕಾಂಡದ ಮೂಲ ಹೊಣೆಗಾರರನ್ನು ಹುಡುಕಿ ಶಿಕ್ಷೆಗೆ ಗುರಿ ಮಾಡುವ ವಿಚಾರಣೆಗಳನ್ನು, ಕಾಂಗ್ರೆಸ್ ಸರ್ಕಾರ ಏಕೆ ಪದೇ ಪದೇ ಸ್ಥಗಿತಗೊಳಿಸುತ್ತಾ ಸಾಕ್ಷ್ಯ ನಾಶಕ್ಕೆ ಕಾರಣವಾಗುತ್ತಿದೆ? ಆದರೆ ಇದರಿಂದ ಸಂತ್ರಸ್ತ ಸಿಖ್ ಕುಟುಂಬಗಳ ಛಲ ಮಾತ್ರ ಕುಂದಿಲ್ಲ. ಅವರಿಗೆ ಶುಭವಾಗಲಿ!

---

## ನಮ್ಮ ಪಿಬಿಎಸ್ ಚಿರಾಯುವಾಗಲಿ!



**ನ**ಮ್ಮ ನೆಚ್ಚಿನ ಪಿಬಿಎಸ್ ಇನ್ನಿಲ್ಲ. ನಾವೆಲ್ಲ ಹಳ್ಳಿಗಾಡುಗಳಲ್ಲಿ ಬೆಳೆದದ್ದೇ ಅವರ ಗೊಂಬೆಯಾಟವಯ್ಯಾ, ಒಲವಿನ ಪ್ರಿಯಲತೆ, ಬಿಂಕದ ಸಿಂಗಾರಿ, ತುಟಿಯ ಮೇಲೆ ತುಂಟ ಕಿರುನಗೆ, ಕುಲಕುಲವೆಂದು ಹೊಡೆದಾಡದಿರಿ, ಈತನೀಗ ವಾಸುದೇವನು, ಬಾ ತಾಯಿ ಭಾರತಿಯೇ, ಹಾಡೊಂದ ಹಾಡುವೆ, ಮೌನವೇ ಆಭರಣ, ಅಪಾರ ಕೀತಿ ಗಳಿಸಿ ಮೆರೆವ... ಮುಂತಾದ ಮೃದು ಮಧುರ ಹಾಡುಗಳನ್ನು ಕೇಳುತ್ತಾ, ಹಾಡುತ್ತಾ. ಈ ಅರ್ಥದಲ್ಲಿ ಪಿ.ಬಿ.ಶ್ರೀನಿವಾಸ್ ನಮ್ಮ ಸ್ಮೃತಿ, ನಮ್ಮ ವ್ಯಕ್ತಿತ್ವದ ಒಂದು ಭಾಗವಾಗಿಬಿಟ್ಟಿದ್ದಾರೆ. ಹಾಗಾಗಿಯೇ ಅವರು ಅಪೂರ್ವ ಗಾಯಕರೆಂದೇನೂ ಅನಿಸಿಕೊಳ್ಳದಿದ್ದರೂ, ಅವರ ಸಾವು ನಮ್ಮ ವ್ಯಕ್ತಿತ್ವದ ಒಂದು ಬಹು ಮುಖ್ಯಭಾಗವನ್ನು ಕಿತ್ತುಕೊಂಡು ಹೋಗಿದೆ ಎನಿಸತೊಡಗಿದೆ.

ಎತ್ತರಕ್ಕೆ ಏರಿದಾಗ ನಲುಗಿಹೋಗುತ್ತಿದ್ದ ಪಿಬಿಎಸ್ ಕಂಠ ಅಂದಿನ ಕನ್ನಡ ಚಿತ್ರಗಳ ಮೃದು ಲಲಿತ ಗತಿಗೆ ಮತ್ತು ಅದಕ್ಕಿಂತ ಹೆಚ್ಚಾಗಿ ರಾಜ್‌ಕುಮಾರ್‌ರ ಮೃದು ಸುಂದರ ಪಾತ್ರಗಳಿಗೆ ಹೇಳಿ ಮಾಡಿಸಿದ ವಾಣಿಯಾಗಿತ್ತು. ಹಾಗಾಗಿಯೇ ನನಗೆ ಎಷ್ಟೋ ಬಾರಿ ಅನಿಸಿದೆ, ರಾಜ್‌ಕುಮಾರ್ ಕುರಿತ ನಮ್ಮ ಆಳದ ಪ್ರೀತಿಗೆ ಪಿಬಿಎಸ್ ಕೂಡಾ ಬಹು ಮುಖ್ಯ ಕಾರಣ ಎಂದು. ಪಿಬಿಎಸ್‌ರ ಸಾವಿನ ಈ ಸಂದರ್ಭದಲ್ಲಿ ನಮ್ಮ ರಾಜ್‌ಕುಮಾರ್ ನಮ್ಮ ಪಿಬಿಎಸ್‌ಗೆ ಅನ್ಯಾಯ ಮಾಡಿದರೇನೋ ಎಂಬ ನೋವು ಕಾಡದಿರದು. ಪಿಬಿಎಸ್ ಚಿರಾಯುವಾಗಲಿ!

---

## ಇವರೇಕೆ ಹೀಗೆ ಕುಣಿದು ಕುಪ್ಪಳಿಸುವರು?

**ನಾ**ನು ಆಕಸ್ಮಿಕವಾಗಿ ಐಪಿಎಲ್ ಪಂದ್ಯಗಳನ್ನು ನೋಡಿದಾಗಲೆಲ್ಲ ಒಂದು ಪ್ರಶ್ನೆ ನನ್ನ ಮನಸ್ಸಿನಲ್ಲಿ ಏಳುತ್ತದೆ. ಈ ಪಂದ್ಯಗಳನ್ನು ನೋಡಿ, ನೆಗೆದು ಕುಣಿದು ಕುಪ್ಪಳಿಸುತ್ತಿರುವ ಪ್ರೇಕ್ಷಕರ ಹಿಂದಿನ ಸ್ಫೂರ್ತಿಯಾದರೂ ಏನು? ಇವರು ತಮ್ಮ ನೆಚ್ಚಿನ ತಂಡವನ್ನು ಹೇಗೆ ಆಯ್ಕೆ ಮಾಡಿಕೊಂಡು ಹೀಗೆ ಕುಣಿದು ಕುಪ್ಪಳಿಸುತ್ತಾರೇ? ಏಕೆಂದರೆ, ತಂಡಗಳಿಗೆ ಯಾವುದೇ ಸಮಾನ ಆಸಕ್ತಿಗಳ ಆಧಾರವಿಲ್ಲ. ಅವು ಒಂದು ಊರನ್ನಾಗಲೀ ರಾಜ್ಯವನ್ನಾಗಲೀ, ರಾಷ್ಟ್ರವನ್ನಾಗಲೀ ಖಂಡವನ್ನಾಗಲೀ ಪ್ರತಿಧಿಸುವುದಿಲ್ಲ. ಅವುಗಳ ರಚನೆ ನಡೆದಿರುವುದು ಏನಿದ್ದರೂ ಯಾರೋ ಸಾಹುಕಾರ ಕೂಗಿದ ಹರಾಜಿನ ಆಧಾರದ ಮೇಲೆ. ಹೀಗಿರುವಾಗ ತಂಡಕ್ಕೂ ಈ ಪ್ರೇಕ್ಷಕರಿಗೂ ಯಾವ ನೆಲೆಯ ಭಾವ ಸಂಬಂಧ ಏರ್ಪಟ್ಟಿರಬಹುದು? ಕುಣಿಯುವ ಹುಡುಗಿಯರಾದರೋ ಹಣಕ್ಕಾಗಿ ಕುಣಿಯುತ್ತಾರೆ. ಇವರೇಕೆ ಕುಣಿಯುತ್ತಾರೋ ಗೊತ್ತಾಗುತ್ತಿಲ್ಲ! ಗೊತ್ತಿದ್ದರೆ ತಿಳಿಸಿ.

**–ಡಿಎಸ್ಸೆನ್**

## ನಿಮ್ಮ ಮಾತು

ಪ್ರಿಯ ಸಂಪಾದಕರೇ,

ಮಾಧ್ಯಮ ಸಾಂದ್ರತೆಯ ಇಂದಿನ ದಿನಗಳಲ್ಲಿ 'ಹೊಸ ಮನುಷ್ಯ' ಹೊಸ ಮೌಲ್ಯಗಳ ಭರವಸೆಗಳೊಂದಿಗೆ ದಿಟ್ಟ ಹೆಜ್ಜೆಗಳನ್ನಿಡುತ್ತಿರುವುದು ಸ್ವಾಗತಾರ್ಹ.

**–ಎಂ.ಬಿ. ಪಾಟೀಲ್,** ಗುಲ್ಬರ್ಗ

ಏಪ್ರಿಲ್ ವಸಂತದ 'ಹೊಸ ಮನುಷ್ಯ' ವಿಶಿಷ್ಟ ಹಾಗೂ ಸಾಂಸ್ಕೃತಿಕವಾಗಿ ಅರ್ಥಪೂರ್ಣವಾಗಿದೆ. ಸಾಮಾಜಿಕ ಬದಲಾವಣೆಯ ಹರಿಕಾರ ಅಂಬೇಡ್ಕರ್ ಕುರಿತು ಮತ್ತು ಕರ್ನಾಟಕದ ಸಾಂಸ್ಕೃತಿಕ ಭೀಷ್ಮ ಪೂರ್ಣಚಂದ್ರ ತೇಜಸ್ವಿ ಕುರಿತ ಆನಂದ ತೇಲ್ತುಂಬ್ಡೆ ಹಾಗೂ ಕಡಿದಾಳು ಶಾಮಣ್ಣ ಅವರ ಲೇಖನಗಳು ಮೇಲ್ಪಂಕ್ತಿಯಲ್ಲಿ ನಿಲ್ಲುತ್ತವೆ.

ನಮ್ಮೊಳಗಿನ ಅಂಬೇಡ್ಕರ್ ಕಳೆದುಹೋಗುತ್ತಿದ್ದಾರೇನೋ ಎನ್ನಿಸುತ್ತಿರುವಾಗ ಡಿ.ಎಸ್. ನಾಗಭೂಷಣ್ ತಮ್ಮ ಟಿಪ್ಪಣಿಗಳಲ್ಲಿ ಮತ್ತೆ ಅವರನ್ನು ಸಮಕಾಲೀನವಾಗಿ ಹೇಗೆ ನೆನಪಿಸಿಕೊಳ್ಳಬೇಕೆಂದು ಸೂಚಿಸುತ್ತಿರುವಾಗ ವಿಶೇಷ ಸವಲತ್ತುಗಳನ್ನು ಪಡೆದುಕೊಂಡಿರುವ ನಾವು ಬ್ರಾಹ್ಮಣಿಕೆಯ ಸತ್ಯನಾರಾಯಣ ಪೂಜೆ ಇತ್ಯಾದಿ ಮೌಢ್ಯಾಚರಣೆಗಳಿಗೆ ಬಲಿಯಾಗುತ್ತಿರುವುದು ವಿಷಾದನೀಯ ಸಂಗತಿಯಾಗಿದೆ.

**–ಡಾ. ಜಿ. ಸಂಜೀವರಾಯ,** ತುಮಕೂರು

ಏಪ್ರಿಲ್ ಸಂಚಿಕೆಯ ಸಂಪಾದಕೀಯ ಹೊಸ ಒಳನೋಟಗಳಿಂದ ಕೂಡಿದ್ದು, ಜಗತ್ತು ಹೆಚ್ಚು ಹೆಚ್ಚು ಗಂಡಾಗುತ್ತಿರುವುದನ್ನು ಗಮನಿಸಿ ಅದರ ದುಷ್ಪರಿಣಾಮಗಳನ್ನು ಇಂದು ಹೆಚ್ಚುತ್ತಿರುವ ಹೆಣ್ಣಿನ ಮೇಲಿನ ಅತ್ಯಾಚಾರಗಳ ರೂಪದಲ್ಲಿ ಗುರುತಿಸಿರುವುದು ಸಮರ್ಪಕವೇ ಆಗಿದೆ. ಆದರೆ ನಮ್ಮ ಮಾಧ್ಯಮಗಳು ಮತ್ತು ಸರ್ಕಾರಗಳು ಈ ಸೂಕ್ಷ್ಮವನ್ನರಿಯದೇ ನೈತಿಕತೆಯ ಪಾಠ ,ಹೊಸ ಕಾನೂನುಗಳ ರಚನೆ ಇತ್ಯಾದಿ ಮೇಲ್ಮೈ ಕಾರ್ಯಕ್ರಮಗಳಲ್ಲಿ ತೊಡಗಿರುವುದು ದುರದೃಷ್ಟಕರ.

**–ಬಿ.ಎಂ.. ಬಸವರಾಜು,** ಬೆಂಗಳೂರು

ಈ ಸಂಚಿಕೆಯಲ್ಲಿ ವಿಪರೀತ ಮುದ್ರಣ ದೋಷಗಳಿವೆ. ಇದು ಈ ಪತ್ರಿಕೆಗೆ ಸಲ್ಲದು. ದಯವಿಟ್ಟು ಗಮನಿಸಿ.

**–ಎಂ.ಆರ್ ಹಿರೇಮಠ,** ಧಾರವಾಡ

## 'ವಚನ ಸಂಶೋಧನೆ ಎಂಬ ದೊಂಬರಾಟ': ಕೆಲವು ಪ್ರತಿಕ್ರಿಯೆಗಳು

**ಬಾ**ಲು ಪಟಾಲಂ ರೂಪದಲ್ಲಿ ಈಗ ನಮ್ಮ ವಿಶ್ವವಿದ್ಯಾಲಯಗಳ ಮಿದುಳನ್ನು ಆಕ್ರಮಿಸುವ ಹುನ್ನಾರದಲ್ಲಿರುವ ಹೊಸ ವೇಷದ ಮೂಲಭೂತವಾದಿ ಸಂಘ ಪರಿವಾರದ ವೈರಸ್ಸನ್ನು ಮೊದಲಿನಿಂದಲೂ ವೈಯುಕ್ತಿಕ ನೆಲೆಯಲ್ಲಿ ನೀವು ಹತ್ತಿಕ್ಕುತ್ತಿದ್ದೀರಿ. ಅದಕ್ಕಾಗಿ ನಿಮಗೆ ಋಣಿ.

ಪತ್ರಿಕೆಯ ಏಪ್ರಿಲ್ ಸಂಚಿಕೆಯಲ್ಲಿನ ನಿಮ್ಮ ಲೇಖನ ಈ ದುಷ್ಟಕೂಟದ ಫಾರಿನ್ ಫಂಡ್ ಹಿನ್ನೆಲೆಯನ್ನೂ ಅದರ ಸೈದ್ಧಾಂತಿಕ ಹಿನ್ನೆಲೆಯೊಂದಿಗೆ ಬಯಲು ಮಾಡಿದೆ. ಪತ್ರಿಕೆಗಳಲ್ಲಿ 'ದಲಿತ ಮಹಿಳೆಯ ಮೇಲೆ ಅತ್ಯಾಚಾರ' ಎಂಬ ಸುದ್ದಿ ಪ್ರಕಟವಾದರೆ 'ದಲಿತ ಮಹಿಳೆ' ಎಂಬ ಮಾತೇ 'ಕಲೋನಿಯಲ್ ಫ್ಯಾಬ್ರಿಕೇಷನ್'– ಅವಳೂ ಒಬ್ಬ ಮಹಿಳೆ ಅಷ್ಟೆ ಎಂದು ಈ ಮಠದ ಮಾಣಿಗಳು ಎಗ್ಗಿಲ್ಲದೆ ಮಾತಾಡುತ್ತವೆ. ಜಾತಿ ಶ್ರೇಣೀಕರಣದಲ್ಲಿ ತಮ್ಮ ಪಾಲಿನ ಅರಿವಾಗಿ ಅದರಿಂದ ಒಂದಿಷ್ಟು ಪಶ್ಚಾತ್ತಾಪವಾದರೂ ಆಗಿ ಶುದ್ಧಗೊಳ್ಳುತ್ತಿದ್ದ ಮೇಲು ಜಾತಿಯ ಆತ್ಮಸಾಕ್ಷಿಯನ್ನೂ ಈ ದುಷ್ಟಕೂಟ ನಾಶಗೊಳಿಸಿದೆ. ಅದರ ವೇಷವನ್ನು ಬಯಲು ಮಾಡುತ್ತಿರುವ 'ಹೊಸ ಮನುಷ್ಯ'ನಿಗೆ ಧನ್ಯವಾದಗಳು.

**–ರಾಮು**(ಟಿ.ಎಸ್. ರಾಮಸ್ವಾಮಿ), ಮೈಸೂರು

ಏಪ್ರಿಲ್ ಸಂಚಿಕೆಯ 'ವಚನ ಸಂಶೋಧನೆಯೆಂಬ ದೊಂಬರಾಟ' ಓದಿ ಈ ಪ್ರತಿಕ್ರಿಯೆ. ಡಿ ಎಸ್ ನಾಗಭೂಷಣರು ಸರಿಯಾಗಿಯೇ ಗುರುತಿಸಿರುವಂತೆ ಬಾಲಗಂಗಾಧರರ ಮಂಡನೆಗಳು ಹೊಸವೇನೂ ಅಲ್ಲ. ಆದರೆ ಅವನ್ನು ಆಧರಿಸಿ ಸಾಗುತ್ತಿರುವ ಸಂಶೋಧನೆ ಮತ್ತು ಚರ್ಚೆಗಳು ರಾಷ್ಟ್ರೋತ್ಥಾನ ಪರಿಷತ್ತಿನ ಮುಖವಾಣಿಯಂತಾಗುತ್ತಿರುವುದು ಮಾತ್ರ ವಿಷಾದನೀಯ. ವಚನಗಳ ಸಂಶೋಧನಾ ವಿಷಯವಾಗಿ ಹೇಳುವುದಾದರೆ, ವಚನಗಳು ಸಾಹಿತ್ಯಿಕ; ಮೇಲಾಗಿ ಆಧ್ಯಾತ್ಮಿಕ ಪಠ್ಯಗಳಾಗಿದ್ದು, ಅವಕ್ಕೆ ಬೇರೆ ಆಯಾಮಗಳಿರುತ್ತವೆ. ಅವನ್ನು ಸಮಾಜ ವಿಜ್ಞಾನಗಳಿಗೆ ಒಗ್ಗಿಸುವುದು ಸರಿ ಎನ್ನಿಸುವುದಿಲ್ಲ. ಆಲ್ತುಸರ್‌ನಂತಹ ಮಾರ್ಕ್ಸವಾದಿ ತನ್ನ ಓದಿನಲ್ಲಿ ಸಾಹಿತ್ಯದ ಪಠ್ಯಗಳನ್ನು 'ಬೇಸ್' ಆಧಾರದ ಮೇಲೆ ನಿರ್ಣಯಿಸಲಾಗದು ಎನ್ನುವ ತೀರ್ಮಾನಕ್ಕೆ ಬರುತ್ತಾನೆ. ಈ ಅಂಶವನ್ನು ಇಲ್ಲಿ ಗಮನಿಸಬೇಕಿದೆ.

**– ಆರ್.ತಾರಿಣಿ ಶುಭದಾಯಿನಿ,** ಚಿತ್ರದುರ್ಗ

'ವಚನ ಸಾಹಿತ್ಯ ಸಂಶೋಧನೆಯೆಂಬ ದೊಂಬರಾಟ' ಎಂಬ ನಿಮ್ಮ ಲೇಖನ' ಸರಿಯಾಗಿಯೇ ಇದೆ. 'ಪ್ರಜಾವಾಣಿ'ಯಲ್ಲಿ ಎಚ್.ಎಸ್. ಶಿವಪ್ರಕಾಶ್ ಸೀದಾ ಸಾದಾ ಹೇಳದಿದ್ದರ ಫಲವೇ ಈ ದೊಂಬರಾಟ.

ಈ ಸಂಚಿಕೆಯಲ್ಲಿ ಮುದ್ರಣ ದೋಷಗಳು ವಿಪರೀತವಾಗಿವೆ!

**–ಬಿ.ಎನ್. ಶಾಂತಾ,** ಮೈಸೂರು

ಬಾಲಗಂಗಾಧರ, ಡಂಕಿನ್ ಝಳಕಿ ಮೊದಲಾದವರ ವಾದವನ್ನು ಓದುತ್ತಾ ಹೋದಂತೆ ಅಲ್ಲಮನ ಈ ವಚನ ಸಾಲುಗಳು ನೆನಪಾಯಿತು:

**ಅರಿವಿನ ಬಲದಿಂದ ಕೆಲವರು**
**ಅರಿಯದವರ ಗೆಲಬೇಕೆಂದು**
**ಬರು ಮಾತಿನ ಉಯ್ಯಲೆಯನೇರಿ**
**ಒದೆದು ಒರಲಿ ಕೆಡವ ದರಿದ್ರರು**

ಅದೇ ವಚನದಲ್ಲಿ ಅಲ್ಲಮ 'ಸೋಂಕಿನ ಸೋಜಿಗದ ಸಹಜತೆ ಫಲಿಸಬೇಕು' ಅನ್ನುತ್ತಾನೆ. ಸೋಕಿನ ಸಹಜತೆಯಿಂದ ಅಕಡೆಮಿಕ್ ಜ್ಞಾನದ ಬಲದಿಂದ, ತರ್ಕದಿಂದ ಏನನ್ನು ಬೇಕಾದರೂ ಇದೇ ಸತ್ಯವೆಂದು ಸಾಧಿಸಬಹುದು.

**–ಓ.ಎಲ್. ನಾಗಭೂಷಣ ಸ್ವಾಮಿ,** ಮೈಸೂರು

ಭಾರತದ ಜಾತಿ ಇತಿಹಾಸದ ಸೂಕ್ಷ್ಮ ಬಲ್ಲ ಅಂಬೇಡ್ಕರ್, ಲೋಹಿಯಾ, ಗಾಂಧಿ ಇಂದು ಬದುಕಿದ್ದರೆ ಇವರ ವಾದಗಳೆದುರು ಮೂರ್ಛೆ ಹೋಗುತ್ತಿದ್ದರೇನೋ! ವಚನಗಳಲ್ಲಿ ಶೇಕಡಾವಾರು ಹುಡುಕುವಿಕೆಯ ಹಾಸ್ಯಾಸ್ಪದ ನಿಲುವನ್ನು ಸಮರ್ಥಿಸುವ 'ಶಕ್ತಿ'ಗಳು ಮತ್ತೆ ಸಂಘಟಿತಗೊಂಡು ದಮನಿತರ ಮಗ್ಗುಲು ಮುರಿಯುವ ಹೊಸ ಕಾರ್ಯ ಸೂಚಿಯೊಂದು ಸಿದ್ಧಗೊಳ್ಳುತ್ತಿರುವ ಅಪಾಯವನ್ನು ಇದು ಸೂಚಿಸುವಂತಿದೆ. ಜಾತಿ, ಧರ್ಮ, ರಿಲಿಜನ್– ಇವುಗಳನ್ನು ಸೀಳುತ್ತ, ಸೀಳುತ್ತ ಈ ಬಾಲಗಂಗಾಧರರ ಶಿಷ್ಯವೃಂದ ಈಗ ವಚನಗಳಿಗೆ ಕೈ ಹಾಕಿ, ನಾಳೆ ಕೀರ್ತನೆಗಳನ್ನೂ ಜಾಲಾಡಿ, ನಾಡಿದ್ದು ದಲಿತ, ಬಂಡಾಯ ಸಾಹಿತ್ಯದಲ್ಲಿಯೂ 'ಪರ್ಸಂಟೇಜ್' ಲೆಕ್ಕ ಹಾಕಿ ಏನು ಬೇಕಾದರೂ ಹೊಸ ಸಂಶೋಧನೆಯೆಂದು ಹೇಳಿಯಾರು!

ಹಗಲು ದರೋಡೆಯಷ್ಟು ಖಚಿತ ಚಹರೆಗಳುಳ್ಳ ಜಾತಿಯ ಕಟು ಆಚರಣೆಗಳನ್ನು ಕಂಡು ಬೆಚ್ಚಿ ಬಿದ್ದ ಈ ದೇಶದಲ್ಲಿ ಬಾಲಗಂಗಾಧರರು ದೂರದ ಬೆಲ್ಜಿಯಂನಲ್ಲಿ ಅದೆಂತಹ ಪಾಂಡಿತ್ಯವನ್ನು ಮಂಡಿಸಿದ್ದಾರೆಂಬುದನ್ನು ಇದರಿಂದ ಗುರ್ತಿಸಬಹುದು.

**–ಎಂ. ಚಂದ್ರಶೇಖರಯ್ಯ,** ಭದ್ರಾವತಿ

ಸಮಾಜವಾದದ ಬಗ್ಗೆ ಇಷ್ಟೆಲ್ಲ ಮಾತಾಡುವ/ಬದುಕುವ ಡಿ.ಎಸ್. ನಾಗಭೂಷಣ ಆತ್ಮವಂಚನೆಯ ನೆಲೆಯಲ್ಲಿ ಮರಿ ಅನಂತಮೂರ್ತಿ ಆಗಲು ಹೊರಟಿರುವುದು ಅವರು ಬಾಲಗಂಗಾಧಾರರ ವಿಚಾರಧಾರೆಯ ಬಗ್ಗೆ ಬರೆದಿರುವ ಲೇಖನದಿಂದ ಗೊತ್ತಾಗುತ್ತದೆ. ಈ ಲೇಖನ ಸಮಾಜವಾದಿಗಳು ಏಕೆ ವಿಫಲರಾದರೆಂಬುದನ್ನೂ ಸೂಚಿಸುವಂತಿದೆ.

**–ಜ್ಞಾನೇಂದ್ರ ಪ್ರಭು,** ಶಂಕರಘಟ್ಟ

# ನಮ್ಮ ಸಮಾಜವಾದಿಗಳು | ಪ್ರೊ. ಎಂ.ಡಿ. ನಂಜುಂಡಸ್ವಾಮಿ : ಒಂದು ನೆನಪು



ನಾನು ಪ್ರೊ. ನಂಜುಂಡಸ್ವಾಮಿಯವರನ್ನು ಮೊದಲು ಭೇಟಿಯಾದದ್ದು ೧೯೭೭ರಲ್ಲಿ, ಲಂಕೇಶರ ಮನೆಯಲ್ಲಿ. ಆಗ ನಾನು ದೆಹಲಿಯಲ್ಲಿ ಕೆಲಸ ಮಾಡುತ್ತಿದ್ದು, ತುರ್ತು ಪರಿಸ್ಥಿತಿ ಸಮಯದಲ್ಲಿ ಮೈಸೂರಿನಿಂದ ರಾಜಶೇಖರ ಕೋಟಿಯವರು ಹೊರತರುತ್ತಿದ್ದ 'ಆಂದೋಲನ' ವಾರಪತ್ರಿಕೆಗೆ ಲೇಖನ-ಪತ್ರಗಳನ್ನು ಬರೆಯುತ್ತಿದ್ದೆ. ಅವುಗಳಲ್ಲಿ ಗಾಂಧೀ ಕುರಿತ ಒಂದು ಪತ್ರ ಲಂಕೇಶರಿಗೆ ಇಷ್ಟವಾಗಿ ಅವರು ನನ್ನನ್ನು ಕಾಣಲು ಬಯಸಿದ್ದಾರೆಂದು ಗೆಳೆಯರೊಬ್ಬರು(ಬಹುಶಃ ನೆಲಮನೆ ದೇವೇಗೌಡರು) ತಿಳಿಸಿದ್ದರಿಂದಾಗ ನಾನು ಲಂಕೇಶರ ಮನೆಗೆ ಹೋಗಿದ್ದೆ. ಅಲ್ಲಿ ಲಂಕೇಶ್ ಇಬ್ಬರು ವ್ಯಕ್ತಿಗಳ ಜೊತೆ ಕೂತು ಮಾತನಾಡುತ್ತಿದ್ದರು. ಅವರಲ್ಲಿ ಒಬ್ಬರನ್ನು ಲಂಕೇಶ್ ಎಂ.ಡಿ. ನಂಜುಂಡಸ್ವಾಮಿ ಎಂದು ಪರಿಚಯಿಸಿದಾಗ(ಇನ್ನೊಬ್ಬರು ಖ್ಯಾತ ಪೆರಿಯಾರ್‌ವಾದಿ ಪ್ರೊ. ಧರ್ಮಲಿಂಗಂ) ನಾನು ದಂಗಾಗಿ ಹೋದೆ. ನಾನು ದಂಗಾಗಲು ಇದ್ದ ಕಾರಣ ಕೇಳಿ ಲಂಕೇಶರು ತಮ್ಮ ಕಿಕ್ಕೀಕೀ ಶೈಲಿಯಲ್ಲಿ ಬಿದ್ದು ಬಿದ್ದು ನಗಲಾರಂಭಿಸಿದರು.

ಆ ನನ್ನ ಕಾರಣ ಹೀಗಿತ್ತು: ಹಿಂದಿನ ವಾರ ತಾನೇ ನಂಜುಂಡಸ್ವಾಮಿಯವರು 'ಆಂದೋಲನ'ದಲ್ಲಿ ಖಾದಿ ವಸ್ತ್ರ ಧಾರಣೆಯನ್ನು ರಾಷ್ಟ್ರಾದ್ಯಂತ ಕಡ್ಡಾಯ ಮಾಡಬೇಕೆಂದು ಲೇಖನ ಬರೆದಿದ್ದರು. ಇಲ್ಲಿ ನೋಡಿದರೆ ಅವರನ್ನು ಕುರಿತ ನನ್ನ ಕಲ್ಪನೆಯೇ ತಲೆಕೆಳಗಾಗುವಂತೆ ತ್ರೀ ಪೀಸ್ ಸೂಟ್‌ಧಾರಿಯಾಗಿ ಬೋ ಟೈ ಕಟ್ಟಿ ಠಾಕೂಠೀಕಾಗಿ ಕೂತಿದ್ದಾರೆ! ಲಂಕೇಶರ ಅಸ್ಖಲಿತ ನಗುವಿನಿಂದ ಅಪ್ರತಿಭರಾದ ನಂಜುಂಡಸ್ವಾಮಿಯವರು' ಅದು ಸರ್ಕಾರಕ್ಕೆ ನನ್ನ ಸಲಹೆ. ಅದನ್ನು ಸರ್ಕಾರ ಮಾನ್ಯ ಮಾಡಿದ ಮರುದಿನವೇ ನಾನು ಸಂಪೂರ್ಣ ಖಾದಿಧಾರಿಯಾಗುವೆ. ಸಂದೇಹ ಬೇಡ' ಎಂದು ನನಗೆ ತಮ್ಮ ನಿಲುವನ್ನು ವಿವರಿಸಿದರು. ಅದು ಅವರ-ನನ್ನ ಮೊದಲ ಭೇಟಿಯಾದುದರಿಂದ ಆ ಮಾತು ಅಲ್ಲಿಗೇ ನಿಂತಿತು. ಆದರೆ ಮುಂದೆ ಹಲವು ಏರಿಳಿತಗಳನ್ನು ಕಂಡ ನನ್ನ ಮತ್ತು ನಂಜುಂಡಸ್ವಾಮಿಯವರ ಸ್ನೇಹ ಅಲ್ಲಿ ಆಗ ಸ್ಥಾಪಿತವಾಯಿತು.

ಎಂಡಿಎನ್ ಯುವಜನರನ್ನು ಸೆಳೆಯುವುದರಲ್ಲಿ ನಿಸ್ಸೀಮರಾಗಿದ್ದರು. ಅವರು ಆಗಲೇ ಕರ್ನಾಟಕದ ಯುವಜನರ ಪಾಲಿಗೆ ಸೂಜಿಗಲ್ಲಾಗಿದ್ದರು. ಮೈಸೂರಿನ ಪ್ರತಿಷ್ಠಿತ ವಕೀಲರೂ, ಜಮೀನ್ದಾರರೂ ಮತ್ತು ಮೈಸೂರು ಸಂಸ್ಥಾನದ ಪ್ರಜಾ ಪ್ರತಿನಿಧಿ ಸಭೆಯ ಸದಸ್ಯರೂ ಆಗಿದ್ದ ಮಹಂತದೇವರು ಅವರ ಮಗನಾಗಿದ್ದ ಎಂ..ಡಿ. ನಂಜುಂಡಸ್ವಾಮಿ ಅರವತ್ತರ ದಶಕದ ಆರಂಭದ ವರ್ಷಗಳಲ್ಲಿ ಜರ್ಮನಿಯಲ್ಲಿ ಉನ್ನತ ಕಾನೂನು ಶಿಕ್ಷಣವನ್ನು ಪೂರ್ತಿಯೋ ಅರ್ಧವೋ ಮುಗಿಸಿ ಅಲ್ಲಿನ ಸಮಾಜವಾದಿ ಚಳುವಳಿಯಿಂದ ಪ್ರಭಾವಿತರಾಗಿ ಮೈಸೂರಿಗೆ ಬಂದು ಯುವ ಸಮಾಜವಾದಿಗಳ ಮಧ್ಯೆ ತಮ್ಮ ಕಾನೂನು ತಿಳುವಳಿಕೆ ಮತ್ತು ಕ್ರಿಯಾಶೀಲತೆಗಳ ಮೂಲಕ ಎಲ್ಲರ ಗಮನ ಸೆಳೆದಿದ್ದರು. ಲಂಕೇಶ್, ತೇಜಸ್ವಿ, ಚಂಪಾ, ಮಹಾದೇವ, ಶ್ರೀಕೃಷ್ಣ ಆಲನಹಳ್ಳಿ, ಬೆಸಗರಹಳ್ಳಿ ರಾಮಣ್ಣ, ಕಾಳೇಗೌಡ ನಾಗವಾರ ಇತ್ಯಾದಿ ಆ ಕಾಲದ ಘಟಾನುಘಟಿ ಲೇಖಕರಲ್ಲದೆ, ಪ. ಮಲ್ಲೇಶ್, ಕೆ. ರಾಮದಾಸ್, ಬಿ.ಎನ್. ಶ್ರೀರಾಂ ಮುಂತಾದ ಚಳುವಳಿಕಾರರೂ ಅವರ ಗರಡಿ ಸೇರಿದ್ದರು. ಅವರು ಅಧಿಕೃತ ಸಮಾಜವಾದಿ ಪಕ್ಷದ ಹಿರಿಯರ ಜಡತೆಯ ವಿರುದ್ಧ ಸಮಾಜವಾದಿ ಯುವಜನ ಸಭಾ ಮೂಲಕ ಬಂಡಾಯ ಸಾರಿದ್ದರು. ಸಮಾಜವಾದಿಗಳಿಗೆ ಸಿದ್ಧಾಂತವೇ ನಾಯಕ; ಯಾವುದೇ ವ್ಯಕ್ತಿಯಲ್ಲ ಎಂದು ಸಾರಿ ಗೋಪಾಲಗೌಡರನ್ನೂ ರೇಗಿಸಿದ್ದರು. ಅವರು ತೇಜಸ್ವಿಯವರೊಡಗೂಡಿ ಸಿದ್ಧಪಡಿಸಿದ್ದ 'ಲೋಹಿಯಾ ಕೆಂಪು ಪುಸ್ತಕ' ಯುವಜನರಲ್ಲಿ ಹೊಸ ವಿಚಾರ ತರಂಗಗಳನ್ನೇ ಎಬ್ಬಿಸಿತ್ತು.

ತಮ್ಮ ಈ ಪಟಾಲಂ ಕಟ್ಟಿಕೊಂಡು ನಂಜುಂಡಸ್ವಾಮಿಯವರು ಮೈಸೂರಿನಲ್ಲಿ ಬ್ರಿಟಿಷ್ ಆಳ್ವಿಕೆಯ ಪಳೆಯುಳಿಕೆಗಳಂತಿದ್ದ ಬ್ರಿಟಿಷ್ ಅಧಿಕಾರಿಗಳ ಪ್ರತಿಮೆಗಳನ್ನು ಉರುಳಿಸುವುದು, ಪ್ರತಿಷ್ಠಿತ ಹೋಟೆಲುಗಳಿಗೆ ಹೋಗಿ ಬೇಕಾದ್ದನ್ನು ತಿಂದು ಸಾಮಾನ್ಯ ಹೋಟೆಲಿನ ಬೆಲೆಯಷ್ಟನ್ನೇ ನೀಡುವ ಹಠ ಮಾಡಿ ಅವುಗಳ ಪ್ರತಿಷ್ಠೆಯನ್ನು ಧಿಕ್ಕರಿಸುವುದು ಬೆಂಗಳೂರಿನಲ್ಲಿ ಮೊದಲ ವೀರಶೈವ ಸಮ್ಮೇಳನ ನಡೆದಾಗ ಅದರ ವಿರುದ್ಧ ಪ್ರತಿಭಟನೆ ನಡೆಸುವುದು(ಈ ಪಟಾಲಂನಲ್ಲಿ ಜಿಎಸ್ಸೆಸ್, ಚಿದಾನಂದಮೂರ್ತಿ ಮುಂತಾದವರೂ ಸೇರಿದ್ದರು), ಪ್ರಧಾನಿ ಇಂದಿರಾ ಗಾಂಧಿ ಬೆಂಗಳೂರಿಗೆ ಬಂದಾಗ ಅವರ ಭದ್ರತೆಯನ್ನೂ ಭೇದಿಸಿ ಅವರ ಆಡಳಿತ ನೀತಿ ವಿರುದ್ಧ ಯುವಜನರಿಂದ ಘೋಷಣೆ ಕೂಗಿಸುವುದು, ಘಟಿಕೋತ್ಸವದಲ್ಲಿ ಪಾಶ್ಚಿಮಾತ್ಯ ದಿರಿಸುಗಳ ವಿರುದ್ಧ ಪ್ರತಿಭಟಿಸುವುದು, ಕ್ಷಾಮ ಪರಿಹಾರ ಕಾರ್ಯಕ್ರಮಗಳು ಸರಿಯಾಗಿ ನಡೆಯುತ್ತಿಲ್ಲವೆಂದು ವಿಧಾನಸಭೆಯಲ್ಲಿ ಕರಪತ್ರ ತೂರುವುದು, ಕ್ಷಾಮ ಪರಿಹಾರ ನಿಧಿ ಕೂಡಿಸಲು ಬೆಂಗಳೂರಿನ ಕೆಂಪೇಗೌಡ ರಸ್ತೆಯಲ್ಲಿ ಬೂಟ್ ಪಾಲಿಷ್ ಮಾಡಿ ಹಣ ಸಂಗ್ರಹಿಸುವುದು, ಕೊನೆಗೆ ನವ ನಿರ್ಮಾಣ ಕ್ರಾಂತಿ ಸಮಿತಿಯ ಮೂಲಕ ತಮ್ಮ ಪಟಾಲಮ್ಮನ್ನು ಜೆಪಿ ಚಳುವಳಿಯಲ್ಲಿ ತೊಡಗಿಸಿದ್ದು ಇತ್ಯಾದಿ ಚಟುವಟಿಕೆಗಳ ಮೂಲಕ ವಿದ್ಯಾರ್ಥಿ ದೆಸೆಯಲ್ಲೇ ನನ್ನ ಕುತೂಹಲಕ್ಕೆ ಕಾರಣರಾಗಿದ್ದರು. ಇದಲ್ಲದೆ ಬೂಸಾ ಚಳುವಳಿ, ಜಾತಿ ವಿನಾಶ ಸಮ್ಮೇಳನ ಮತ್ತು ನವ್ಯ ಸಾಹಿತ್ಯ ಚಳುವಳಿಯು ವೈದಿಕ ರಾಜಕಾರಣದ ಮುಖವಾಣಿ ಎಂದು ವಿಶ್ಲೇಷಿಸಿ ಅದರ ವಿರುದ್ಧ ದೊಡ್ಡ ಬಂಡಾಯವನ್ನೇ ಸಾರಿದ ಅಖಿಲ ಕರ್ನಾಟಕ ಲೇಖಕರ ಮತ್ತು ಕಲಾವಿದರ ಒಕ್ಕೂಟದ ಮೊದಲ ಸಮ್ಮೇಳನದ ರೂವಾರಿ ಆಗಿದ್ದರೆಂಬ ಸಂಗತಿ ಮತ್ತು ಸ್ವತಃ ಅವರು ಮೇಲ್ಜಾತಿಗೆ ಸೇರಿದ್ದರೂ, ಹಾವನೂರರ ಮಿತ್ರರಾಗಿ ಅವರ ಆಯೋಗದ ವರದಿಯ ಹಿಂದಿನ ಸ್ಫೂರ್ತಿಯಾಗಿದ್ದುದರ ಮೂಲಕ ಸಾಮಾಜಿಕ ನ್ಯಾಯ ಕುರಿತು ಅವರು ತೋರಿದ್ದ ಕಾಳಜಿ ಅವರದು ಬರಿ ತಂಟೆಕೋರ ವ್ಯಕ್ತಿತ್ವವಲ್ಲ, ಅವರ ಕಾರ್ಯಕ್ರಮಗಳ ಹಿಂದೆ ಒಂದು ಗಾಢವಾದ ತತ್ವಚಿಂತನೆಯೂ ಇದೆ ಎಂಬ ಅರಿವಾಗಿ ಅವರ ಬಗ್ಗೆ ಗೌರವವೂ ಮೂಡಿತ್ತು.

ನನ್ನ ವಿದ್ಯಾರ್ಥಿ ದೆಸೆಯಲ್ಲಿ ಮನೆಯವರ ದಿಗ್ಬಂಧನಗಳಿಂದಾಗಿ ಈ ಚಟುವಟಿಕೆಗಳ ಮೂಕ ಪ್ರೇಕ್ಷಕ ಮಾತ್ರನಾಗಿದ್ದ ನಾನು ಈಗ ಈ ಎಲ್ಲ ದಿಗ್ಬಂಧನಗಳಿಂದ ಮುಕ್ತನಾಗಿದ್ದುದರಿಂದ ಬಹು ಬೇಗನೆ ಅವರ ಅನುಯಾಯಿಯಾದೆ. ಅಷ್ಟೇಕೆ, ಅವರ ಆಪ್ತ ಬಳಗಕ್ಕೂ ಸೇರಿದವನಾದೆ. ನಾನು ಬೆಂಗಳೂರಿಗೆ ಬಂದಾಗಲೆಲ್ಲ ಅವರು ಊಟ-ತಿಂಡಿ-ಬೀರ್‌ಗಳೊಡನೆ ಆತ್ಮೀಯತೆಯಿಂದ ನನ್ನನ್ನು ಉಪಚರಿಸುತ್ತಿದ್ದರು. ಒಮ್ಮೆ ಹೈದರಾಬಾದ್‌ನಲ್ಲಿ ಪ್ರೊ॥ ಕೇಶವರಾವ್ ಜಾಧವ್ ಅವರು ಆಯೋಜಿಸಿದ್ದ 'ಲೋಹಿಯಾ ವಿಚಾರ ಮಂಚ್'ನ ಸಮಾವೇಶದಲ್ಲಿ ಒಟ್ಟಿಗೆ ಎರಡು ಮೂರು ದಿನ ಇದ್ದಾಗ(ಅಲ್ಲಿಗೆ ಕಿಷನ್ ಪಟ್ನಾಯಕ್, ರವಿವರ್ಮ ಕುಮಾರ್, ಕೆ.ಟಿ.ಶಿವಪ್ರಸಾದ್ ಕೂಡ ಬಂದಿದ್ದರು) ಅವರು ನನ್ನನ್ನು ಲೋಹಿಯಾರ ಪೋಷಕರಲ್ಲೊಬ್ಬರಾಗಿದ್ದ ಬದ್ರಿ ವಿಶಾಲ್ ಪಿಟ್ಟಿ ಅವರ ಅಂಗಡಿಗೆ ಕರೆದುಕೊಂಡು ಹೋಗಿ ಹಳೆಯ 'ಮ್ಯಾನ್‌ಕೈಂಡ್' ಸಂಪುಟಗಳನ್ನು ನನಗೆ ಕೊಡಿಸಿದರು. ಅವು ಮತ್ತು ಅದಕ್ಕಿಂತ ಹೆಚ್ಚಾಗಿ ಅವರು ಮುಂದೊಂದು ದಿನ ತಮ್ಮ ಹಸ್ತಾಕ್ಷರಗಳೊಂದಿಗೆ ನೀಡಿದ 'ಲೋಹಿಯಾ ಅಂಡ್ ಅಮೆರಿಕಾ ಮೀಟ್' ಪುಸ್ತಕ ಅವರ ನೆನಪಿನಲ್ಲಿ ಭದ್ರವಾಗಿ ನನ್ನ ಬಳಿ ಇದೆ.

ಈ ಸಂಬಂಧ ಇದ್ದಕ್ಕಿದ್ದಂತೆ ಕಡಿದುಹೋದದ್ದು ೧೯೭೭ರ ಜೆಪಿಯವರ 'ಜನತಾ ಪಕ್ಷದ ಪ್ರಯೋಗ ವಿಫಲವಾಗಿ ಕಿಷನ್ ಪಟ್ನಾಯಕರ

ಮುಂದಾಳತ್ವದಲ್ಲಿ ೧೯೮೦ರಲ್ಲಿ ಹೊಸದೊಂದು ಸಮಾಜವಾದಿ ಪಕ್ಷ ಕಟ್ಟಲು ಬೆಂಗಳೂರಿನಲ್ಲಿ ನಾವೆಲ್ಲ ಸೇರಿ ಸಂಘಟಿಸಿದ್ದ ಸಮತಾ ಸಮ್ಮೇಳನದ ಸಂದರ್ಭದಲ್ಲಿ. ಸಮ್ಮೇಳನದ ಕೊನೆಯಲ್ಲಿ ಹೊಸ ಪಕ್ಷದ ಸಂಘಟನೆಗಾಗಿ ರಾಜ್ಯ ಸಂಚಾಲಕರನ್ನು ನೇಮಿಸುವ ವಿಷಯ ಬಂದಾಗ ನಾನು ನನ್ನೆಲ್ಲ ಯುವ ಗೆಳೆಯರೊಂದಿಗೆ ಸಮಾಲೋಚಿಸಿ ರವಿವರ್ಮ ಕುಮಾರ್‌ರ ಹೆಸರನ್ನು ಸೂಚಿಸಿದೆ. ಇದು ನನ್ನ ನಿರೀಕ್ಷೆಗೆ ವಿರುದ್ಧವಾಗಿ ಎಂಡಿಎನ್‌ರನ್ನು ಎಷ್ಟು ಸಿಟ್ಟಿಗೆಬ್ಬಿಸಿತೆಂದರೆ, ಸಮ್ಮೇಳನನ ಮುಕ್ತಾಯ ಕಂಡು ನಾನು ಅಲ್ಲಿಂದ ಹೊರಡುವ ಮುನ್ನ ಅವರಿಗೆ ವಿದಾಯ ಹೇಳಲು ಹೋದರೆ ಅವರು ನನ್ನನ್ನು ದೂರ ತಳ್ಳಿ, 'ನನ್ನ ನಿಮ್ಮ ಸಂಬಂಧ ಇಲ್ಲಿಗೆ ಮುಗಿಯಿತು' ಎಂದು ಘೋಷಿಸಿಬಿಟ್ಟರು. ಆಘಾತಗೊಂಡು ಪೆಚ್ಚಾದ ನಾನು ಮತ್ತೆ ಅವರ ಸುದ್ದಿಗೆ ಹೋಗಲಿಲ್ಲ. ಅವರೂ ನಂತರ ಸಮಾಜವಾದಿ ಚಳುವಳಿಯ ಸುದ್ದಿಯನ್ನು ಬಿಟ್ಟು ರೈತ ಚಳುವಳಿಯ ಕಡೆ ಗಮನ ಹರಿಸಿದರು. ಅದನ್ನೇ ಸಮಾಜವಾದಿ ಚಳುವಳಿಯಾಗಿ ಬೆಳೆಸುವುದಾಗಿ ಹೇಳಿಕೊಂಡು ನನ್ನ ಕೆಲ ಯುವ ಸಮಾಜವಾದಿ ಗೆಳೆಯರನ್ನೂ ಅತ್ತ ಕಡೆ ಸೆಳೆದುಕೊಂಡರು.

ನಂಜುಂಡಸ್ವಾಮಿ ಯುವಜನರನ್ನು ಆಕರ್ಷಿಸಿ ಪ್ರೀತಿಯಿಂದ ಬೆಳೆಸುವರು ಎಂಬ ಪ್ರತೀತಿ ಇದ್ದಂತೆಯೇ ಅವರು ತಮ್ಮನ್ನು ಪ್ರಶ್ನಿಸುವ, ಮೀರಿ ಬೆಳೆಯುವ ಸೂಚನೆ ತೋರಿದವರನ್ನು ಅಷ್ಟೇ ಕಠೋರವಾಗಿ ಹತ್ತಿಕ್ಕುವರೆಂಬ ಪ್ರತೀತಿಯೂ ಇತ್ತು.. ಆದರೆ ನನ್ನನ್ನು ಹಾಗೆ ಹತ್ತಿಕ್ಕಲು ಅವರಿಗೆ ಅವಕಾಶವೇ ಕೊಡದಂತೆ ನಾನು ಅವರಿಂದ ದೂರ ಸರಿದೆ. ಅವರ ಈ ಪ್ರವೃತ್ತಿಯನ್ನು ನಾನು ಅವರು ನಡೆಸಿದ್ದ ಸಮಾಜವಾದಿ ಅಧ್ಯಯನ ಶಿಬಿರಗಳಲ್ಲೂ ನೋಡಿದ್ದೆ. ಪ್ರಶ್ನೆ ಕೇಳಿದವರಿಗೆ ಅಸಂಬದ್ಧ ಮರುಪ್ರಶ್ನೆ ಹಾಕಿ ಅವರು ಉತ್ತರಿಸಲಾಗದೆ ತಡವರಿಸುವಂತೆ ಮಾಡಿ ಕೂರಿಸುತ್ತಿದ್ದರು. ಹೊಸಬರನೇಕರು ಇವರ ಸಹವಾಸವೇ ಬೇಡವೆಂದು ಚಳುವಳಿಯನ್ನೇ ಬಿಟ್ಟುಹೋಗುತ್ತಿದ್ದರು. ಇದು ರೈತ ಅಧ್ಯಯನ ಶಿಬಿರಗಳಲ್ಲಿಯೂ ಮುಂದುವರೆಯಿತೆಂದೂ ಕೇಳಿರುವೆ.

ಆದರೆ ಅಲ್ಲಿ ಪ್ರತಿಭಟಿಸುವವರು ಕಡಿಮೆ ಇದ್ದರು. ರೈತರು ತೀರಾ ಸಂಕಷ್ಟದಲ್ಲಿದ್ದುದರಿಂದ ಮತ್ತು ಎಂಡಿಎನ್ ತಮ್ಮ ಸಮಾಜವಾದಿ ಸಾಹಸ ಅಪೂರ್ಣವಾದುದರ ಅತೃಪ್ತಿಯಿಂದಲೋ ಅರ್ಪಣಾ ಮನೋಭಾವದಿಂದ ಸಂಘಟನೆಗಾಗಿ ದುಡಿಯತೊಡಗಿದ್ದರಿಂದ ರೈತರು ಅವರ ವ್ಯಕ್ತಿತ್ವದಲ್ಲಿಯೇ ಅಡಕವಾಗಿದ್ದ ಕಠೋರತೆಯನ್ನು ಸಹಿಸಿದರು. ನಾನೊಮ್ಮೆ ಅವರ ರೈತ ಅಧ್ಯಯನ ಶಿಬಿರಕ್ಕೆ 'ಲಂಕೇಶ್ ಪತ್ರಿಕೆ'ಯ ಪರವಾಗಿ ವರದಿ ಮಾಡಲು ಹೋಗಿ ಅವರ ಕಠೋರತೆ ಇನ್ನೂ ತೀವ್ರವಾಗಿರುವುದನ್ನು ಖಚಿತಪಡಿಸಿಕೊಂಡು ಬಂದಿದ್ದೆ. ಅಂದು ಸುಂದರೇಶರು ಮಧ್ಯೆ ಪ್ರವೇಶಿಸದಿದ್ದಲ್ಲಿ ನಂಜುಂಡಸ್ವಾಮಿಯವರ ಪ್ರಚೋದನೆಯಿಂದ ರೈತರು ನನ್ನ ಮೇಲೆ ದೈಹಿಕ ದಾಳಿಯನ್ನೇ ನಡೆಸುತ್ತಿದ್ದರೇನೋ! ಅವರ ಅರ್ಧ ಕೋಪ ನನ್ನ ಮೇಲಿದ್ದರೆ ಇನ್ನರ್ಧ ಕೋಪ ಲಂಕೇಶರ ಮೇಲೆ ಇತ್ತು! ಪತ್ರಿಕೆ ರೈತ ಚಳುವಳಿಯ ಬಗ್ಗೆ ಸಲ್ಲದ ಅಪಪ್ರಚಾರ ಮಾಡುತ್ತಿದೆಯೆಂಬುದು ಅವರ ಈ ಕ್ರೋಧಕ್ಕೆ ಕಾರಣವಾಗಿತ್ತು.ಇದಕ್ಕೆ ಪ್ರತಿಯಾಗಿ ರೈತಸಂಘದಿಂದಲೇ 'ನಮ್ಮ ನಾಡು 'ಎಂಬ ಪತ್ರಿಕೆ ಆರಂಭಿಸಿದ ಅವರು ಅದರ ಹಣದ ಲೆಕ್ಕದ ಗೋಜಲಿನಲ್ಲಿ ಸಿಕ್ಕಿಹಾಕಿಕೊಂಡು ಅದನ್ನು ನಿಲ್ಲಿಸಬೇಕಾಯಿತು

ಆದರೆ ಆಶ್ಚರ್ಯವೆಂದರೆ ಇದೆಲ್ಲ ಆದ ನಂತರ ಒಮ್ಮೆ ೧೯೮೧ರಲ್ಲಿ ಅವರು ಸುಂದರೇಶರೊಂದಿಗೆ ಯಾವುದೋ ಮಾತುಕತೆಗೆಂದು ದೆಹಲಿಗೆ ಬಂದಾಗ ನನಗೆ ಕರೆ ಕಳಿಸಿದರು! ನಾನೂ ಲಂಕೇಶರೊಂದಿಗೆ ಬಾಳಲಾರದವನಾಗಿ ದೆಹಲಿ ಆಕಾಶವಾಣಿ ಹುದ್ದೆಗೆ ವಾಪಸಾಗಿದ್ದ ಕಾರಣದಿಂದಲೋ ಏನೋ ನನ್ನ ಮೇಲಿನ ಸಿಟ್ಟು ಇಳಿದಿತ್ತು. ಕರ್ನಾಟಕ ಭವನದಲ್ಲಿ ಅವರ ಸುಖ ವಾಸ. ದಿನವೂ ಕೋಳಿಯ ಊಟ! ಸವಿ ಮಾತುಕತೆ, ಶತ್ರುಗಳ ಮೇಲೆ ಕಟು ವ್ಯಂಗ್ಯ ಬಾಣಗಳ ಪ್ರಯೋಗ! ಮತ್ತೆ ನನಗೆ ಅವರ ಆ ಹಳೆಯ ಉಪಚಾರದ ದಿನಗಳು ನೆನಪಿಗೆ ಬಂದವು. ಆದರೆ ಅದೇ ಒಂದು ದಿನ ದುದ್ದದಲ್ಲಿ ರೈತರ ಪ್ರತಿಭಟನೆಯ ಮೇಲೆ ಗುಂಡೂರಾಯರ ಸರ್ಕಾರ ಗೋಲೀಬಾರ್ ಮಾಡಿ ಇಬ್ಬರೋ ಮೂವ್ವರೋ ರೈತರನ್ನು ಕೊಂದಿತ್ತು. ಆ ಸುದ್ದಿಯನ್ನು ನಾನೇ ಅಂದು ಮಧ್ಯಾಹ್ನದ ವಾರ್ತೆಗಳಲ್ಲಿ ಬಿತ್ತರಿಸಿ ಬಂದು ಇವರಿಗೂ ಹೇಳಿದೆ. ಸುಂದರೇಶ್ ಗೋಳೋ ಎಂದು ಅಳಲು ಶುರು ಮಾಡಿದರೆ ಎಂಡಿಎನ್ ತಲೆ ತಗ್ಗಿಸಿ ಯೋಚನಾಮಗ್ನರಾಗಿದ್ದರು. ಇದ್ದಕ್ಕಿದ್ದಂತೆ ಯಾರೊಂದಿಗೋ ಮಾತನಾಡಿ ಬಟ್ಟಬರೆ ಕಟ್ಟಿಕೊಂಡು ಬೆಂಗಳೂರ ಕಡೆ ಹೊರಟೇಬಿಟ್ಟರು.

ಇದಾದ ನಂತರದಲ್ಲೇ ನಾನು ಕರ್ನಾಟಕಕ್ಕೆ ಬಂದೆ. ಕಾರ್ಯ ಹುದ್ದೆ ಭದ್ರಾವತಿಯಲ್ಲಿದ್ದುದರಿಂದ ರೈತ ಸಂಘದ ಕ್ರಿಯಾಕೇಂದ್ರಕ್ಕೆ ಹತ್ತಿರವಾಗಿ ಅದನ್ನು ಆಸಕ್ತಿ-ಕುತೂಹಲಗಳಿಂದ ಗಮನಿಸುತ್ತಿದ್ದೆ. ಸಂಘಟನೆ ಬೆಳೆಯುತ್ತಿದ್ದಂತೆ, ಅದು ಸರ್ಕಾರಕ್ಕೆ ಸವಾಲು ಹಾಕುವ ತಾಕತ್ತು ಗಳಿಸಿಕೊಳ್ಳುತ್ತಿದ್ದಂತೆ, ಎಂಡಿಎನ್ ಅವರಲ್ಲಿದ್ದ ಮಾನವತೆಯ ತೇವಾಂಶ ಒಣಗಿ ಹೋಗತೊಡಗಿತ್ತು. ಆಗಲೇ ರೈತ ಸಂಘದಲ್ಲಿ ಒಡಕುಗಳು ಕಾಣತೊಡಗಿ, ಅದು ತೋರಿಕೆಗಾಗಿಯಾದರೂ ಇದ್ದ ತನ್ನ ಸಮಾಜವಾದಿ ದೃಷ್ಟಿ ಕೇಂದ್ರವನ್ನು ಕಳೆದುಕೊಂಡು ನಂಜುಂಡಸ್ವಾಮಿಯವರ ವೈಯುಕ್ತಿಕ ಸಂಘಟನೆಯಾಗತೊಡಗಿತ್ತು. ನಂಜುಂಡಸ್ವಾಮಿಯವರಿಗೆ ರೈತಸಂಘವನ್ನು ಒಂದು ಸಮಾಜವಾದಿ ಸಂಘಟನೆಯಾಗಿ, ಸಮಾನತೆಗೆ ತುಡಿವ ಜಾತ್ಯತೀತ ಕಾರ್ಯಪಡೆಯನ್ನಾಗಿ ರೂಪಿಸುವ ಉದ್ದೇಶವಿದ್ದಿರಬಹುದು. ಆದರೆ ರೈತ ಸಂಘದ ನಾಯಕರಾದ ಮೇಲೆ ಅವರು ತಮ್ಮ ಆಧುನಿಕ ಉಡುಪು ಬದಲಿಸಿ ಹೊರನೋಟಕ್ಕೆ ದೇಸಿಯಾದರಾದರೂ, ಒಳಗೆ ಎಲ್ಲ ದೃಷ್ಟಿಗಳಿಂದಲೂ ಆಧುನಿಕರಾಗಿದ್ದ ಕಾರಣ ಅವರು ರೈತ ಸಮುದಾಯವನ್ನು ಸಹಾನುಭೂತಿಯಿಂದ ಅರ್ಥ ಮಾಡಿಕೊಳ್ಳುವಲ್ಲಿ ಸೋತರೆಂದೇ ಹೇಳಬೇಕು.

ನಿಜ ಅವರ ನೇತೃತ್ವದಲ್ಲಿ ರಾಜ್ಯ ಸ್ವಾತಂತ್ರ್ಯೋತ್ತರ ಭಾರತದಲ್ಲಿ ಕಂಡರಿಯದಂತಹ ಲೋಕಶಕ್ತಿಯ ಪ್ರದರ್ಶನ, ಸರ್ಕಾರಕ್ಕೆ ಸವಾಲು, ಪ್ರತಿಭಟನೆ, ಪ್ರತಿ-ಕಾರ್ಯಕ್ರಮಗಳನ್ನು ಕಂಡಿತು. ಕರ್ನಾಟಕದಲ್ಲಿ ಸಮಾಜವಾದಿ ಕ್ರಾಂತಿಯಗುವ ಕಾಲ ದೂರವಿಲ್ಲ ಎನ್ನಿಸಿಯೂ ಬಿಟ್ಟಿತ್ತು. ಹಾಗಾಗಿಯೇ ನಾವು ಕೆಲವು ಗೆಳೆಯರು ದಲಿತ ಚಳುವಳಿ ಮತ್ತು ರೈತ ಚಳುವಳಿಯ ನಾಯಕರನ್ನು ಒಟ್ಟುಗೂಡಿಸಿ ಒಂದು ಐಕ್ಯ ರಾಜಕೀಯ ಶಕ್ತಿಯ ಉದಯದ ಪ್ರಯತ್ನ ಮಾಡಿದೆವು. ಆದರೆ ಎಂಡಿಎನ್ ಆ ಹೊತ್ತಿಗೆ ಯಾರನ್ನೂ ನಂಬದ ಆಕ್ರಾಂತ ಸ್ಥಿತಿ ತಲುಪಿದ್ದರು. ಅವರು ವಿಶ್ವ ರೈತನಾಯಕರಾಗುವ ಹವಣಿಕೆಯಲ್ಲಿದ್ದರು. ಇದರ ಅಂತಿಮ ಪರಿಣಾಮವಾಗಿಯೇ ರೈತ ಸಂಘ ಒಡೆಯಿತು. ಅವರ ಅನುಯಾಯಿಗಳನೇಕರು ಭ್ರಮನಿರಸನ ಹೊಂದಿದ್ದರು ಅಥವಾ ದೂರ ಸರಿದಿದ್ದರು. ನಂಜುಂಡ ಸ್ವಾಮಿ ಒಂಟಿಯಾಗಿದ್ದರು.

ಆ ನಂತರದ ಸ್ವಲ್ಪ ಕಾಲದಲ್ಲೇ-೧೯೯೯ರಲ್ಲಿ-ನಾನು ಅವರನ್ನು ನಾನಿದ್ದ ಬೆಂಗಳೂರು ಆಕಾಶವಾಣಿಗಾಗಿ ಸಂವಿಧಾನ ಕುರಿತ ಭಾಷಣ ಮಾಲಿಕೆಗಾಗಿ ಆಹ್ವಾನಿಸಿದೆ. ಅವರು ಬಂದರು. ಆದರೆ ಸುಸ್ತಾಗಿದ್ದರು. ಮತ್ತೆ ಅದೇ ಪ್ರೀತಿಯಿಂದ ಮಾತಾಡಿದರು. ಪಕ್ಕದ ಪರಾಗ್ ಹೋಟೆಲ್ಲಿಗೆ ಕರೆದುಕೊಂಡು ಹೋಗಿ ನೆನಪಿಟ್ಟು ನನಗಿಷ್ಟವಾದ ರವೆ ಇಡ್ಲಿ ಕೊಡಿಸಿದರು. ನಮ್ಮ ನಿಲಯ ನಿರ್ದೇಶಕರನ್ನು ಭೇಟಿಯಾಗಿ ನನ್ನ ಬಗ್ಗೆ ನಾಲ್ಕು ಒಳ್ಳೆಯ ಮಾತನಾಡಿದರು! ಲಂಕೇಶರನ್ನು ಶಪಿಸಿದರು. ಪತ್ನಿ ಸಮೇತ ಮನೆಗೆ ಬರುವಂತೆ ಆಹ್ವಾನಿಸಿದರು. ಅದೇ ನನ್ನ ಅವರ ಕೊನೆಯ ಭೇಟಿ.

ನಂತರ ಅವರನ್ನು ನೋಡಿದ್ದು ಶವವಾಗಿ, ೨೦೦೪ರಲ್ಲಿ. ಅಂತಿಮ ಯಾತ್ರೆಯ ಭಾಗವಾಗಿ ಅದು ಮೈಸೂರಿಗೆ ಬಂದಾಗ. ನಾನೂ ನನ್ನ ಪತ್ನಿ ರಾಜಶೇಖರ ಕೋಟಿಯವರ ಜೊತೆ ಹೋಗಿ ಚಾಮರಾಜನಗರ ಸಮೀಪದಲ್ಲಿನ ಭವಿಷ್ಯದ ಅಂತಾರಾಷ್ಟ್ರೀಯ ಕೃಷಿ ಕ್ಷೇತ್ರವೆಂದು ಹೇಳಲಾದ 'ಅಮೃತಭೂಮಿ'ಯಲ್ಲಿ ನಡೆದ ಅಂತಿಮ ಸಂಸ್ಕಾರದಲ್ಲಿ ಭಾಗವಹಿಸಿ ಬಂದೆವು.

ಮತ್ತೆ ಮೊನ್ನೆ ತಾನೇ ನಾವು ಕೆಲವು ಗೆಳೆಯರು ನಮ್ಮ ಕುಟುಂಬಗಳೊಂದಿಗೆ ಚಾಮರಾಜನಗರದ ಕಡೆ ಹೋಗಿದ್ದಾಗ ನೆನಪಿಟ್ಟು ಅಮೃತಭೂಮಿಗೆ ಹೋಗಿ ಅವರ ಸಮಾಧಿಗೆ ಗೌರವ ಸಲ್ಲಿಸಿ ಬಂದೆವು. ಒಂದು ಕ್ಷಣ ತೀವ್ರ ಬೇಸರವೂ ಅನಿಸಿತು. ಯಾವಾಗಲೂ ಜನಮಧ್ಯವಿದ್ದ ಎಂಡಿಎನ್ ಇಲ್ಲೇಕೆ ಜನಸಂಪರ್ಕವೇ ಇಲ್ಲದ ದೂರದ ಈ ವಿಶಾಲ ಬಿಸಿಲು ಬಯಲಲ್ಲಿ ತಲೆ ಮೇಲೆ ಸೂರಿಲ್ಲದೆ ಒಂಟಿಯಾಗಿ ಅನಾಥರಂತೆ ಮಲಗಿದ್ದಾರೆ ಎಂದು. ವಿಶ್ವ ರೈತ ನಾಯಕರಾಗುವ ಹಂಬಲವೇ ಅವರನ್ನು ದಾರಿ ತಪ್ಪಿಸಿತೇ? ಗೊತ್ತಿದ್ದವರು ಹೇಳಬೇಕು.

**-ಡಿ.ಎಸ್.ನಾಗಭೂಷಣ**

# ಪ್ರೊ. ಬಿ. ಕೃಷ್ಣಪ್ಪ ನೆನೆಪಿನ ಮಾಲೆ-೬

-ಇಂದಿರಾ ಬಿ. ಕೃಷ್ಣಪ್ಪ

## ಮರೆಯಲಾಗದ ಆ ಮದುವೆ!

ನಮ್ಮ ಮದುವೆಯ ಸ್ಫೂರ್ತಿಯಿಂದ ಹಾಗೂ ಕಾನೂನಿನ ಅರಿವಿನಿಂದ ಮತ್ತಷ್ಟು ಜಾತ್ಯಾತೀತ - ಧರ್ಮಾತೀತ ಮದುವೆಗಳು ನಡೆಯಲಾರಂಭಿಸಿದ್ದವು. ಕೆಲವು ಕೃಷ್ಣಪ್ಪನವರ ಸಹಕಾರದಿಂದ ನಡೆದರೆ, ಮತ್ತೆ ಹಲವು ಯಾರ ನೆರವಿಲ್ಲದೆಯೇ ನಡೆಯುತ್ತಿದ್ದುವು. ಅದು ಯಾವುದೇ ರೀತಿಯಲಿ ಆದರೂ ಇಂಥ ಮದುವೆಗಳಿಗೆ ಕೃಷ್ಣಪ್ಪನವರೇ ಕಾರಣ, ಅವನು ಬ್ರಾಹ್ಮಣಶಾಹಿ ವಿರೋಧಿ, ಎಲ್ಲರನ್ನೂ ಜಾತಿಭ್ರಷ್ಟರನ್ನಾಗಿಸಲು ಹೊರಟಿದ್ದಾನೆಂಬ ಪುಕಾರುಗಳು ಹಬ್ಬಿತ್ತು.

ಇದೇ ಸಂದರ್ಭದಲ್ಲಿ ಶಿವಪ್ರಸಾದ್ ಎಂಬ ಹುಡುಗ ತನ್ನ ಒಲವಿನ ಕಥೆಯನ್ನು ಹೇಳಿಕೊಂಡು ತನ್ನ ಮದುವೆ ಮಾಡಿಸಬೇಕೆಂಬ ಪ್ರಸ್ತಾಪ ಕೃಷ್ಣಪ್ಪನವರ ಮುಂದಿಟ್ಟ. ಆಕೆ ಶಾರದ, ಅವನ ಎದುರುಗಡೆ ಮನೆ ಹುಡುಗಿ. ಇವರಿಬ್ಬರ ಒಡನಾಟ, ಹೇಗೋ ತಿಳಿದ ಆಕೆಯ ತಂದೆ ತಾಯಿಗಳು ಆಕೆಗೆ ತುರ್ತಾಗಿ ಅವರ ಜಾತಿಯ ವರನನ್ನು ಹುಡುಕಿ ಮದುವೆ ಮಾಡಲು ತಯಾರಿ ನಡೆಸಿದ್ದರು. ಸಮಾಜವಾದಿ ಗೆಳೆಯರೆಲ್ಲಾ ಸೇರಿ, ಮೂಡಿಗೆರೆಯ ಉಪನೋಂದಣಾಧಿಕಾರಿಗಳವರಲ್ಲಿ ವಿವಾಹ ನೋಂದಣಿ ಮಾಡಿಸುವುದೆಂದು ಇತ್ಯರ್ಥ ಮಾಡಿದರು.

ಮರುದಿನ ಕೃಷ್ಣಪ್ಪ - ನಾನು, ಶಿವಪ್ರಸಾದ್-ಶಾರದ, ಮುನೀರ್ ಬಾಷಾ, ಸಿದ್ದಪ್ಪ, ರಾಜಾರಾವ್ ಮೂಡಿಗೆರೆಗೆ ಹೊರಟೆವು. ಅಲ್ಲಿ ಐ.ಬಿ.ನಲ್ಲಿ ಪ್ರೊ.ಎಂ.ಡಿ. ನಂಜುಂಡಸ್ವಾಮಿ, ತೇಜಸ್ವಿ, ಲಂಕೇಶ್, ಕಡಿದಾಳು ಶಾಮಣ್ಣ, ಸುಂದರೇಶ್‌ರವರು ಸೇರಿದ್ದರು. ನನಗೆ ಅವರೆಲ್ಲರನ್ನು ಮೊತ್ತ ಮೊದಲ ಬಾರಿಗೆ ಕಂಡು ಬಹಳ ಸಂತೋಷವಾಯಿತು. ಕೃಷ್ಣಪ್ಪ ನನ್ನನ್ನೂ, ಶಾರದಾ-ಶಿವಪ್ರಸಾದ್ ಹಾಗೂ ಮಿಕ್ಕೆಲ್ಲ ಗೆಳೆಯರನ್ನು ಪರಿಚಯಿಸಿದರು. ನಂತರ ಒಂದು ಸುತ್ತು ಸಮಾಜವಾದಿ ಹೋರಾಟದ ಚರ್ಚೆಗಳು ಮತ್ತು ಇವರಿಬ್ಬರ ಮದುವೆಯ ವಿಚಾರಗಳು ನಡೆದವು. ನಂತರ ಸೀದಾ ಸಬ್ ರಿಜಿಸ್ಟ್ರಾರ್ ಕಚೇರಿಗೆ ತೆರಳಿ ಅವರ ವಿವಾಹ ನೋಂದಣಿ ಮಾಡಿಸಿದೆವು. ಮರಳಿ ಐ.ಬಿ.ಗೆ ಬಂದ ನಂತರ ಊಟ. ತದನಂತರ ಚರ್ಚೆಗಳು ಪ್ರಾರಂಭವಾದುವು.

ಸಂಜೆ ಸುಮಾರು ೪.೩೦ ಗಂಟೆಯ ಆಸುಪಾಸು ಇರಬಹುದು, ಟೀ ಕುಡಿಯಲು ಎಲ್ರೂ ಹೊರಗಡೆ ಹೋಗುವುದೆಂದು ತೀರ್ಮಾನಿಸಿ ಹೊರಟೆವು. ಐ.ಬಿ. ಮುಂದೆ ಮೂಡಿಗೆರೆಯ ಮುಖ್ಯರಸ್ತೆ. ಅಲ್ಲೇ ದೊಡ್ಡ ಸರ್ಕಲ್, ಅದರಾಚೆಯೇ ಹೋಟೆಲ್ ಹಾಗೂ ಅಂಗಡಿ ಸಾಲು. ಟೀ ಕುಡಿದ ನಂತರ ಗುಂಪು ಗುಂಪಾಗಿ ನಾವೆಲ್ಲರೂ ರಸ್ತೆ ದಾಟಿ ಐಬಿ ಕಡೆ ನಡೆದಿದ್ದೆವು. ಆಗ ನಡೆದ ಘಟನೆಯು ನನ್ನ ಕಣ್ಣಲ್ಲಿ ಸ್ತಬ್ಧ ಚಿತ್ರದಂತ ಈಗಲೂ ನಿಂತಿದೆ.

ಪ್ರೊ. ಎಂ.ಡಿ.ಎನ್., ತೇಜಸ್ವಿ, ಲಂಕೇಶ್‌ರವರುಗಳು ರಸ್ತೆ ದಾಟಿ ಮುಂದೆ ಹೋಗಿದ್ದರು. ಕಡಿದಾಳು ಶಾಮಣ್ಣ, ಸುಂದರೇಶ್, ಇತರರು ರಸ್ತೆ ದಾಟಿದ್ದರು. ನಾನು ಕೃಷ್ಣಪ್ಪ, ಶಿವಪ್ರಸಾದ್-ಶಾರದ, ಮುನೀರ್ ಬಾಷಾ ಮತ್ತೆಲ್ಲ ಗೆಳೆಯರು ರಸ್ತೆ ದಾಟಲು ಹೆಜ್ಜೆ ಇಡುತ್ತಿದ್ದೆವು. ಆಗ ಗಕ್ಕನೆ ಎರಡು ಕಾರುಗಳು ನಮ್ಮ ಮುಂದೆ ನಿಂತವು. ಧಡಬಡ ಎಂದು ಕಾರಿನಿಂದಿಳಿದ ಜನ ನಮ್ಮನ್ನು ಸುತ್ತುವರಿದರು. ಒಂದಿಬ್ಬರು ಶಾರದಾಳನ್ನು ಎಳೆಯ ತೊಡಗಿದರು. ನಾನು ಅವಳ ಕೈ ಹಿಡಿದು ಎಳೆದುಕೊಳ್ಳುತ್ತಿದ್ದೆ.. ಕೃಷ್ಣಪ್ಪ, "ಯಾರೋ ನೀವು, ಗೂಂಡಾಗಳನ್ನು ಕರಕೊಂಡು ಬಂದಿದ್ದೀರಾ ? ಬಿಡ್ರೋ ನಮ್ಮ ಹುಡುಗೀನ" ಅಂತ ಕೂಗಾಡ್ತಾ ಅವರೆಲ್ಲರನ್ನೂ ಆಚೀಚೆ ನೂಕತೊಡಗಿದರು. ಶಿವಪ್ರಸಾದ್‌ನನ್ನು ಐಬಿಗೆ ಹೋಗಿ ಸೇರಿಕೊಳ್ಳಲು ಕಳುಹಿಸಲಾಯಿತು. ರಸ್ತೆ ಆಚೆ ದಾಟಿದ್ದ ಶಾಮಣ್ಣ, ಸುಂದರೇಶ್‌ರವರು ತಕ್ಷಣ ಧಾವಿಸಿ ಕಾರಿನ ಬಳಿಗೆ ಬಂದಿದ್ದರು. ಸಮಯ ಪ್ರಜ್ಞೆಯಿಂದ ಸುಂದರೇಶ್‌ರವರು



ಶಿವಪ್ರಸಾದ್-ಶಾರದಾ ದಂಪತಿಗಳ ಜೊತೆ ಎಂಡಿಎನ್, ಲಂಕೇಶ್, ಬಿ.ಕೃಷ್ಣಪ್ಪ-ಇಂದಿರಾರ ಜೊತೆಯಲ್ಲಿ ಇತರ ಸಮಾಜವಾದಿ ಗೆಳೆಯರು.

ತಮ್ಮ ಬೆಲ್ಟನ್ನು ಬಿಚ್ಚಿಕೊಂಡು - "ಬಿಡ್ರೋ ಆಕೆನಾ ಇನ್ನೊಂದು ಹೆಜ್ಜೆ ಮುಂದಿಟ್ರೆ, ಬಾರಿಸಿ ಚಚ್ಚಾಕ್ತಿನಿ" ಎಂದು ರೌದ್ರಾವತಾರ ತಾಳಿಯೇ ಬಿಟ್ಟರು. ಆಗ ಆ ಅಪರಿಚಿತರು ಆಕೆಯ ಕೈ ಬಿಟ್ಟರು. ಬಹಳ ಮುಂದೆ ಹೋಗಿದ್ದ ಎಂ.ಡಿ.ಎನ್. ತೇಜಸ್ವಿ, ಎಲ್ಲರೂ ಅಲ್ಲಿಗೆ ದೌಡಾಯಿಸಿ ಬಂದಿದ್ದರು. ಹೆದರಿ ಹರಿಣಿಯಂತೆ ಶಾರದಾ ನನ್ನನ್ನು ಬಿಗಿಹಿಡಿದಿದ್ದಳು

ಅಷ್ಟರಲ್ಲಾಗಲೇ ಜನ ಜಮಾಯಿಸಿದ್ದರು. ಪರಿಸ್ಥಿತಿಯನ್ನು ಅರಿತ ಪ್ರೊಫೆಸರ್ ಅವರನ್ನೆಲ್ಲಾ - "ಐಬಿಗೆ ಬನ್ನಿ ರಸ್ತೆಯಲ್ಲಿ ನಿಂತು ಮಾತನಾಡುವುದು ಬೇಡ" ಎಂದು ಕರೆದರು. ಮುಸ್ಸಂಜೆ ಹೊತ್ತು, ಎಲ್ಲರೂ ಐ.ಬಿ.ನಲ್ಲಿ ಕುಳಿತೆವು. ಎಲ್ಲರ ಪರಿಚಯವಾಯಿತು ಅವರೆಲ್ಲ ಶಾರದೆಯ ತಂದೆ, ಬಂಧುಗಳು, ಮಿತ್ರರು ಎಂಬುದು ತಿಳಿಯಿತು. ಅರೆಕ್ಷಣ ಮೌನ ಕವಿಯಿತು. ವಿಷಯವನ್ನು ಪ್ರಸ್ತಾಪ ಮಾಡುತ್ತಾ, ಕೃಷ್ಣಪ್ಪ, "ಶಿವಪ್ರಸಾದ್ ವಿದ್ಯಾವಂತ; ಉದ್ಯೋಗ ಇದೆ; ನೋಡಲೂ ಚೆನ್ನಾಗಿದ್ದಾನೆ, ಒಳ್ಳೆ ಹುಡುಗ, ನಿಮ್ಮ ಮಗಳನ್ನು ಚೆನ್ನಾಗಿ ನೋಡ್ಕೊತಾನೆ; ಇವರಿಗೆ ಆಶೀರ್ವಾದ ಮಾಡಿ. ಈಗ ರಿಜಿಸ್ಟ್ರೇಷನ್ ಆಗಿದೆ. ನಾಳೆ ಮಂತ್ರ ಮಾಂಗಲ್ಯ ಇದೆ. ನೀವೂ ಬನ್ನಿ", ಎಂದು ಸಮಾಧಾನ ಚಿತ್ತದಿಂಲೇ ಹೇಳಿದರು. ಇದ್ಯಾವುದನ್ನೂ ಕೇಳದೆ ಅವರು ಶಾರದೆಯನ್ನು ಶಿವಪ್ರಸಾದನನ್ನು ಹಾಗೂ ಕೃಷ್ಣಪ್ಪನವರನ್ನು ಮನಸೋ ಇಚ್ಛೆ ಬೈಯ್ಯಲಾರಂಭಿಸಿದರು. ಹಾಗೆಲ್ಲ ಬಯ್ದಾಡಬೇಡಿ ಎಂದೂ, ಮಕ್ಕಳನ್ನು ಪ್ರೀತಿಯಿಂದ ಮದುವೆ ಮಾಡಬೇಕೆಂದೂ, ಅಂತರ್ಜಾತೀಯ ವಿವಾಹದ ಮಹತ್ವವನ್ನು ಎಲ್ಲರೂ ಪರಿಪರಿಯಾಗಿ ಹೇಳಿದರೂ ಅವರ್‍ಯಾರಿಗೂ ಕೇಳುವ ತಾಳ್ಮೆಯಿರಲಿಲ್ಲ.

ಅವರಿಗೆ ಒಂದೇ ಹಠ, ಶಾರದೆಯನ್ನು ಮರಳಿ ಕರೆದುಕೊಂಡು ಹೋಗಬೇಕೆಂಬುದು. ಕಡೆಗೆ ಎಂಡಿಎನ್‌ರವರು "ಇಷ್ಟರ ಮೇಲೂ ನಿಮಗೆ ಮಗಳನ್ನು ಕರೆದುಕೊಂಡು ಹೋಗಲೇಬೇಕು ಅಂತ ಇದ್ರೆ, ಅವಳನ್ನೇ ಕೇಳಿ, ಆಕೆ ಶಿವಪ್ರಸಾದ್ ಬಿಟ್ಟು ನಿಮ್ಮೊಡನೆ ಬರಲು ಒಪ್ಪಿದರೆ ನಮ್ಮದೇನೂ ಅಭ್ಯಂತರವಿಲ್ಲ. ಕರೆದುಕೊಂಡು ಹೋಗಬಹುದು." ಎಂದರು. ಅವರ ತಂದೆ ಈ ಸಲಹೆಯನ್ನು ಮಗಳತ್ತ ಮಮತೆಯ ಬಾಣ ಹೂಡಲು ಬಳಸಿಕೊಂಡರು. ಅವರು ಶಾರದೆಯನ್ನು ಕುರಿತು, "ನಿಮ್ಮ ತಾಯಿ ವಿಷದ ಬಟ್ಟಲಿಡಿದು ಕೂತಿದ್ದಾಳೆ. ನೀನು ಬಾರದೆ ಇದ್ರೆ, ನಾವಿಬ್ರೂ ವಿಷ ಕುಡಿತೀವಿ, ನೀನು ಬಾರಮ್ಮ, ಒಳ್ಳೆ ಕಡೆ ನೋಡಿ ಮದುವೆ ಮಾಡ್ತೀವಿ." ಎಂದರು.

ಹಿಂದೆ ನಿಂತು ಗಳಗಳ ಕಣ್ಣೀರು ಸುರಿಸುತ್ತಿದ್ದ ಶಾರದಾಳನ್ನು ಕೈ ಹಿಡಿದು ಕರೆತಂದು ಮುಂದಿನ ಕುರ್ಚಿಯಲ್ಲಿ ಕೂರಿಸಿದೆ. ನಾನು ಪಕ್ಕದಲ್ಲೇ ಕುಳಿತು, ಸಮಾಧಾನಪಡಿಸುತ್ತಲೇ, 'ಶಾರದಾ, ನೀನು ಈಗ

ಮಾತನಾಡಲೇಬೇಕು, ಧೈರ್ಯವಾಗಿ ಹೇಳು ನಾವಿದ್ದೇವೆ' ಎಂದು ಕಿವಿಯಲ್ಲಿ ಪಿಸುಗುಟ್ಟಿದೆ. ಆದರೂ, ಅವರ ಮಾತಿಗೆ ಕರಗಿ ಆಕೆ ಅವರೊಡನೆ ಹೋಗಲು ಒಪ್ಪಿದರೆ ಮುಂದೇನು? ಎಂದು ಎದೆ ಢವಗುಡುತ್ತಿತ್ತು. ಎಲ್ಲರೂ ಮೌನವಾದರು. ಸೂಜಿ ಬಿದ್ದರೂ ಕೇಳುವಷ್ಟು ನಿಶ್ಯಬ್ದ. ಸುತ್ತಲಿನ ತಂಪಾದ ಗಾಳಿ ಒಳನುಸುಳಿ ಮನವನ್ನು ತಣಿಸುತ್ತಿತ್ತು. ಆದರೂ ಎಲ್ಲರ ಮುಖದಲ್ಲಿ ಆತಂಕ ಮನೆ ಮಾಡಿತ್ತು. ಆ ಸಂದಿಗ್ಧ ಸಮಯದಲ್ಲಿ ಕೃಷ್ಣಪ್ಪ, ಶಿವಪ್ರಸಾದ್‌ನನ್ನು ಕೈ ಹಿಡಿದು ನಿಲ್ಲಿಸಿಕೊಂಡು, ಶಾರದೆಯನ್ನು ಕುರಿತು, "ಶಾರದ, ನಿಂಗೇನು ಇಲ್ಲಿ ಭಯವಿಲ್ಲ; ನಿರ್ಭಯವಾಗಿ ನಿನ್ನ ಮನಸ್ಸಿನ ಮಾತನ್ನು ಹೇಳು, ನಿನ್ನೊಂದಿಗೆ, ಶಿವಪ್ರಸಾದ್ ಸದಾ ಇದ್ದಾನೆ ಮತ್ತೆ ನಾವೆಲ್ಲರೂ ಇದ್ದೇವೆ, ಎಂದು ಧೈರ್ಯ ತುಂಬಿದರು.

ಅವರ ತಂದೆ 'ನಮ್ಮೊಂದಿಗೆ ಬಾರಮ್ಮ, ನಿಮ್ಮ ತಾಯಿ ಅನ್ನ ನೀರು ಬಿಟ್ಟು ನಿನ್ನನ್ನೇ ಕಾಯ್ತಿದ್ದಾರೆ, ನಾವೇನು ಮಾಡಲ್ಲ ನಿಂಗೆ' ಎಂದರು. ತಲೆತಗ್ಗಿಸಿಕೊಂಡು ಕಣ್ಣುಮುಚ್ಚಿಕೊಂಡು, ಒಂದು ಕೈಯಲ್ಲಿ ನನ್ನ ಕೈಯನ್ನು ಹಿಡಿದಿದ್ದ ಶಾರದ "ಇಲ್ಲ ನಾನು ಬರಲ್ಲ, ನಾನು ಶಿವಪ್ರಸಾದ್‌ರೊಡನೆ ಇರ್ತೇನೆ" ಎಂದು ಗದ್ಗದಿತ ಕಂಠದಲ್ಲಿ ಹೇಳಿದಳು.

ನಮಗೆ ಮನಸ್ಸು ನಿರಾಳವಾದರೂ, ಅವರ ತಂದೆ ಹಾಗೂ ಅವರೆಲ್ಲರ ಬೈಗುಳಗಳು ಸಹಿಸಲಸದಳವಾಗಿತ್ತು. ಬೈದಾಡುತ್ತಲೇ ಅವರೆಲ್ಲಾ ಎದ್ದು ಹೋದರು. ಘಟನೆಯ ಪೂರ್ವಾಪರಗಳ ಚರ್ಚೆ ಆ ಐ.ಬಿ. ಹಾಲ್‌ನಲ್ಲಿ ತುಂಬಿಕೊಂಡಿತ್ತು. ನಮ್ಮ ಮನೆಯಲ್ಲಿ ನಮ್ಮೊಡನೆ ವಾಸಿಸುತ್ತಿದ್ದ ಚೆನ್ನಿಗರಾಮಯ್ಯನನ್ನು ಅವರೆಲ್ಲಾ ಕಾರಿನಲ್ಲಿ ಹಾಕಿಕೊಂಡು ಬಂದಿದ್ದರು. ಅಲ್ಲೇ ಉಳಿದ ಚೆನ್ನಿಗನನ್ನು ಕೃಷ್ಣಪ್ಪ,–' ನೀನ್ಯಾಕೋ, ನಾವೆಲ್ಲ ಇಲ್ಲಿದ್ದೀವಿ ಅಂತ ಹೇಳಿ ಕರಕೊಂಡು ಬಂದೆ?' ಎಂದು ಸಿಟ್ಟಿನಿಂದ ಕೇಳಿದರು.. ಚೆನ್ನಿಗ ತೆಳ್ಳಗಿನ, ಇದೀಗ ತಾನೆ ಪಟ್ನ ಸೇರಿದ ಹಳ್ಳಿ ಹುಡುಗನ ತರ ಇದ್ದಾತ. ನಾಗಮಂಗಲದ ಕಡೆಯ ಸಣ್ಣ ಗ್ರಾಮದ ಚೆನ್ನಿಗ ಹೇಳಿದ್ದೇನು ಗೊತ್ತೆ? "ಎಲ್ರೂ ಮನೆಗೆ ನುಗ್ಗಿ ಕೊರಳುಪಟ್ಟಿ ಹಿಡ್ಕೊಂಡು ಬಾರಿಸಿದ್ರೆ, ನಾನ್ಯಾವ ಮಹಾ ಗಂಡಸು ಸಾರ್!" ಅವನು ಹೇಳಿದ್ದನ್ನ ಕೇಳಿ ಎಲ್ರೂ ಹೊಟ್ಟೆ ಹುಣ್ಣಾಗುವಂತೆ ನಗಲಾರಂಭಿಸಿದರು. ಬಿಕ್ಕಟ್ಟಿನ ವಾತಾವರಣ ತಿಳಿಗೊಂಡಿತ್ತು.

ಮರುದಿನ ಬೆಳಿಗ್ಗೆ ಮೂಡಿಗೆರೆಯಲ್ಲಿನ ಸರ್ಕಾರಿ ಶಾಲಾ ಆವರಣದಲ್ಲಿ, ಚಂದ್ರೇಗೌಡ ಎಂಬುವವರ ಮಂತ್ರ ಮಾಂಗಲ್ಯ ಸಮಾರಂಭ ಇದ್ದಿತ್ತು. ಅದೇ ವೇದಿಕೆಯಲ್ಲಿಯೇ, ಶಿವಪ್ರಸಾದ್ ಶಾರದರವರ ಮಂತ್ರ ಮಾಂಗಲ್ಯ ಕಾರ್ಯ ನೆರವೇರಿಸಲಾಯಿತು. ಸುಖಾಂತ್ಯಗೊಂಡ ಖುಷಿಯಲ್ಲಿ ನಾವೆಲ್ಲ ಊರ ದಾರಿ ಹಿಡಿದಿದ್ದೆವು. ಶಿವಪ್ರಸಾದ್–ಶಾರದಅವರದ್ದು ಈಗ ಮೂರು ಮಕ್ಕಳ ಸುಖೀ ಕುಟುಂಬ. ಒಲವಿನ ಜೋಡಿಯಾಗಿ ಬೆಂಗಳೂರಿನಲ್ಲೀ ನೆಲಸಿದ್ದಾರೆ. ಆಗ ಇವರ ಮೇಲೆ ಕೈಎತ್ತಿದವರೇ, ಈಗ ಇವರೊಡನೆ ಕೈ ಜೋಡಿಸಿದ್ದಾರೆ. ಅದಲ್ಲವೇ ಜೀವನ!

* * *

ಇದಾದ ಒಂದು ತಿಂಗಳೊಳಗೆ ಕಾಲೇಜು ಪ್ರಾರಂಭವಾಗಿತ್ತು. ಹೊರಗಿನ ಹಸಿಬಿಸಿ, ಹುಸಿ ಸುದ್ದಿಗಳು ಕಾಲೇಜೆಂಬ ಬಾಣಲೆಯಲ್ಲಿ ಚಟಪಟ ಸಿಡಿಯಲಾರಂಭಿಸಿದವು. ಕೃಷ್ಣಪ್ಪನ ಅಂತರ್ಜಾತೀಯ ವಿವಾಹ, ಸಮಾಜವಾದಿ ಚಿಂತನೆಗಳು, ಜಾತ್ಯಾತೀತ ನಿಲುವುಗಳು, ಪುರೋಹಿತ ಶಾಹಿಯ ನಿದ್ದೆಗೆಡಿಸಿದ್ದವು. ಇದೇ ಸಂದರ್ಭದಲ್ಲಿ ಭದ್ರಾ ಆಡಳಿತ ಮುಂಡಳಿಯು ಕಾಲೇಜನ್ನು ನಡೆಸಲು ಸಾಧ್ಯವಿಲ್ಲದ ಪರಿಸ್ಥಿತಿ ಬಂದಿತ್ತು. ಕಾಲೇಜನ್ನು 'ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕು ಕಾರ್ಖಾನೆ'ಯ (ವಿಐಎಸ್‌ಎಲ್) ಆಡಳಿತಕ್ಕೆ ಒಳಪಡಿಸುವ ಮಾತುಕತೆಗಳು ನಡೆದವು.

ವಿಐಎಸ್‌ಎಲ್ ಆಡಳಿತ ಮಂಡಳಿ, ಕಾಲೇಜನ್ನು ಹಸ್ತಾಂತರಿಸಿಕೊಳ್ಳುವ ಸಂದರ್ಭದಲ್ಲಿ ಸ್ಕ್ರೀನಿಂಗ್ ಕಮಿಟಿ ಮುಂದೆ ಕಾಲೇಜು ಸಿಬ್ಬಂದಿಯವರು ಹಾಜರಾಗಬೇಕೆಂದೂ ಅಲ್ಲಿ ಬೋಧಕ ಸಿಬ್ಬಂದಿಯನ್ನು ಆಯ್ಕೆ ಮಾಡಿಕೊಳ್ಳಲಾಗುವುದೆಂದು ಷರತ್ತನ್ನು ವಿಧಿಸಿತ್ತು. ಈ ಸಂದರ್ಭವನ್ನು ಉಪಯೋಗಿಸಿಕೊಂಡು ಕೃಷ್ಣಪ್ಪನನ್ನು ಈ ಕಾಲೇಜಿನಿಂದ ಹೊರಹಾಕಬೇಕೆಂದು ಭದ್ರಾ ಆಡಳಿತ ಮಂಡಳಿಯ ಕೆಲವು ಸದಸ್ಯರು ಹಾಗೂ ಒಂದಿಬ್ಬರು ಕೃಷ್ಣಪ್ಪನ ಸಹೋದ್ಯೋಗಿಗಳು ಮತ್ತು ಬ್ರಾಹ್ಮಣಶಾಹಿ ಮನಸ್ಸಿನ ರಾಜಕೀಯ ಮುಖಂಡರು ಷಡ್ಯಂತ್ರಗಳನ್ನು ಹೆಣೆದಿದ್ದರು. ಆದರೆ ನಾನೊಂದು ನೆನೆದರೆ ದೈವವೊಂದು ಬಗೆಯಿತು! ಎಂಬ ರೂಢಿ ಮಾತಿನಂತೆ ಕೃಷ್ಣಪ್ಪ ಸ್ಕ್ರೀನಿಂಗ್ ಕಮಿಟಿಯಿಂದ ಯಶಸ್ವಿಯಾಗಿ ಹೊರಬಂದು, ವಿಐಎಸ್‌ಎಲ್ ಕಾಲೇಜಿನಲ್ಲಿ ಅಧ್ಯಾಪಕರಾಗಿ ಸೇರ್ಪಡೆಯಾದರು. ಕೃಷ್ಣಪ್ಪನ ವಿರುದ್ಧ ಷಡ್ಯಂತ್ರ ಹೂಡಿದ್ದ ಅಧ್ಯಾಪಕನನ್ನೇ ಸ್ಕ್ರೀನಿಂಗ ಕಮಿಟಿ ಅನುತ್ತೀರ್ಣಗೊಳಿಸಿ ಕಾಲೇಜಿನಿಂದ ಹೊರಹಾಕಿತ್ತು. ಇದೊಂದು ಸಾಮಾಜಿಕ ನ್ಯಾಯದ ಪಾಠವೇನೋ ಅನಿಸುತ್ತದೆ.

ಹೀಗಿದ್ದೂ ತಮ್ಮ ವಿರುದ್ಧ ಪಿತೂರಿ ಮಾಡಿದ್ದವರ(ಅವರ ಹೆಸರು ಇಲ್ಲಿ ಬೇಡ) ಪಿಂಚಣಿ ಮತ್ತು ಇತರ ನಿವೃತ್ತಿ ನಂತರದ ಸೌಲಭ್ಯಗಳನ್ನು ಕೃಷ್ಣಪ್ಪ ಕಾಲೇಜಿನ ಪ್ರಾಂಶುಪಾಲರಾಗಿದ್ದಾಗ ನಿಗಾ ವಹಿಸಿ, ತಮ್ಮ ಕಾಲೇಜಿನ ಮೂಲಕವೇ ಮಾಡಿಸಿಕೊಡಲು ಕ್ರಮ ಕೈಗೊಂಡರು. ನಾನು ಬೆಂಗಳೂರಿಗೆ ಬಂದ ನಂತರ, ಗೆಳತಿ ಗಾಯಿತ್ರಿಯೊಂದಿಗೆ ಅವರ ಮನೆ ಹುಡುಕಿಕೊಂಡು ಹೋಗಿ, ಕ್ಷೇಮ ಸಮಾಚಾರ ವಿಚಾರಿಸಿಕೊಂಡು ಬಂದಿದ್ದೆ. ಆಗ ಅವರು ಕೃಷ್ಣಪ್ಪನನ್ನು ಬಹಳವಾಗಿ ನೆನಪಿಸಿಕೊಂಡು ಪಶ್ಚಾತ್ತಾಪಪಟ್ಟರು.

**(ಮುಂದುವರೆಯುವುದು)**

# ಇದು ಚುನಾವಣೆ! ಇದು ಚುನಾವಣೆ!!

**ಈ** ಬಾರಿಯ ರಾಜ್ಯ ವಿಧಾನಸಭಾ ಚುನಾವಣೆಗಳಲ್ಲಿ ಐದು ಪ್ರಮುಖ ಪಕ್ಷಗಳಿಂದ( ಕಾಂಗ್ರೆಸ್ ಬಿಜೆಪಿ, ಜೆಡಿಎಸ್, ಕೆಜೆಪಿ, ಬಿಎಸ್‌ಆರ್ ಕಾಂಗ್ರೆಸ್) ನಂತಿರುವ ಅಭ್ಯರ್ಥಿಗಳ ಪೈಕಿ ಮೂರನೇ ಒಂದು ಭಾಗದಷ್ಟು ಜನ ಕೋಟ್ಯಾಧೀಶ್ವರರು! ಅರ್ಧದಷ್ಟು ಜನರ ತಲಾ ಆಸ್ತಿಯ ಸರಾಸರಿ ಐದು ಕೋಟಿ ರೂಪಾಯಿಗಳಿಗೂ ಜಾಸ್ತಿ!

ಪುನಾರಾಯ್ಕೆ ಬಯಸಿ ಈ ಬಾರಿ ಸ್ಪರ್ಧಿಸಿರುವ ಶಾಸಕರ ಆಸ್ತಿ ಅವರ ಸದ್ಯದ ಚಾಲ್ತಿ ಅವಧಿಯಲ್ಲಿ ಸರಾಸರಿ ಒಂಭತ್ತು ಕೋಟಿಗೂ ಹೆಚ್ಚು ಪ್ರಮಾಣದಲ್ಲಿ(ಅಂದರೆ ಶೇ. ೮೮ರಷ್ಟು) ಏರಿಕೆ ಕಂಡಿದೆ!

ಮಾಜಿ ಮುಖ್ಯಮಂತ್ರಿ ಯಡ್ಯೂರಪ್ಪನವರ ಘೋಷಿತ ಆಸ್ತಿ ಆರು ಕೋಟಿ ರೂಪಾಯಿಗಳು ಮಾತ್ರ! ಆದರೆ ಅವರು ಮುಖ್ಯಂತ್ರಿಯಾಗಿದ್ದಾಗ ಅವರ ಆಪ್ತಸಹಾಯಕನಾಗಿದ್ದ ಮತ್ತು ಆ ಮುಂಚೆ ಸುತ್ತೂರು ಮಠದಲ್ಲಿ ಅಡುಗೆ ಸಹಾಯಕನಾಗಿದ್ದ ಮತ್ತು ಈಗ ವರುಣಾ ಕ್ಷೇತ್ರದಲ್ಲಿ ಸಿದ್ಧರಾಮಯ್ಯನವರ ವಿರುದ್ಧ ಕೆಜಿಪಿ ಅಭ್ಯರ್ಥಿಯಾಗಿ ನಂತಿರುವ ಕಾಪು ಸಿದ್ಧಲಿಂಗ ಸ್ವಾಮಿಯವರ ಘೋಷಿತ ಆಸ್ತಿ ೫ ಕೋಟಿ ೬೫ ಲಕ್ಷ ರೂಪಾಯಿಗಳು!

ಆಗ ಬಿಜೆಪಿ ಗೆಲ್ಲುವ ಕುದುರೆಯಾಗಿತ್ತು. ಹಾಗಾಗಿ ಬಿಜೆಪಿ ಸೇರಿದೆ. ಈಗ ಗೆಲ್ಲುವ ಕುದುರೆ ಕಾಂಗ್ರೆಸ್. ಆದ್ದರಿಂದ ಈಗ ಕಾಂಗ್ರೆಸ್ ಸೇರಿರುವೆ.

**–ಪ್ರತಾಪಗೌಡ ಪಾಟೀಲ**(ಹಾಲಿ ಮಸ್ಕಿ ಶಾಸಕ)

–ಈ ಲಜ್ಜಗೇಡಿಗೆ ಕಾಂಗ್ರೆಸ್ ಟಿಕೆಟ್ ನೀಡಿದೆ!

ಕಾಂಗ್ರೆಸ್ ಅಭ್ಯರ್ಥಿಯಾಗಿರುವ ನನ್ನ ಭಾವಮೈದುನ ಕೈಲಾಸನಾಥ ಪಾಟೀಲನ ಪರವಾಗಿ ಪ್ರಚಾರ ಮಾಡಬೇಕಾಗಿರುವುದರಿಂದ ನಾನು ಬಿಜೆಪಿ ತೊರೆಯುತ್ತಿರುವೆ.

**–ಬಿ.ಜಿ. ಜವಳಿ**(ಬಿಜೆಪಿಯ ಮಾಜಿ ಎಂ.ಪಿ.)

–ಆಹಾ! ವೀರೇಂದ್ರ ಪಾಟೀಲರ ಈ ಅಳಿಯ ಎಂತಹ ಮರ್ಯಾದಸ್ಥ!

ಯಡ್ಯೂರಪ್ಪನವರನ್ನು ಭೇಟಿ ಮಾಡಿ ಅವರು ಸಂಘ ಪರಿವಾರದೊಂದಿಗೆ ಯಾವುದೇ ಸಂಬಂಧವಿರಿಸಿಕೊಂಡಿಲ್ಲ ಎಂದು ಖಚಿತಪಡಿಸಿಕೊಂಡು ನಾನು ಕೆಜಿಪಿ ಸೇರಿರುವೆ. **–ಚಂಪಾ(ಸಾಹಿತಿ)**

–ಹಾಗಲ ಕಾಯಿಗೆ ಬೇವಿನ ಕಾಯಿ ಸಾಕ್ಷಿ!

ನಾನು ಎಲ್ಲರಿಂದ ಮೋಸ ಹೋದ ಪೆದ್ದ..

**–ಬಿ.ಎಸ್. ಯಡ್ಯೂರಪ್ಪ**

–ಹಾಗಿದ್ದಲ್ಲಿ ಖಂಡಿತ ನೀವು ಮತ್ತೆ ಮುಖ್ಯಮಂತ್ರಿಯಾಗುವುದು ಬೇಡ!

–ಅಥವಾ ಇದು ಚಂಪಾ ಹೇಳಿಕೆಗೆ ಮುಂಗಡ ಪ್ರತಿಕ್ರಿಯೆಯೋ!

# ಅರೇಬಿಯಾದ ಸಕಲ ಪರಿಮಳಗಳಲ್ಲಿ ಮಿಂದು ಬಂದರೂ......





**ಗುಜರಾತ್ 'ಅಭಿವೃದ್ಧಿ'ಯ ವಿಷಯದಲ್ಲಿ ದಾಪುಗಾಲಿಟ್ಟು ಮುನ್ನಡೆಯುತ್ತಿದ್ದು ಅಲ್ಲಿ ಸುಖ-ಸಂಪತ್ತುಗಳ ಹಾಲಿನ ಹೊಳೆಯೇ ಹರಿಯುತ್ತಿದೆ ಎಂದು ಬಿಜೆಪಿ ಥಾಣಾ ಡಂಗೂರ ಹೊಡೆಯುತ್ತಾ ಆ ರಾಜ್ಯದ ಮುಖ್ಯಮಂತ್ರಿ ನರೇಂದ್ರ ಮೋದಿಯವರನ್ನು ರಾಷ್ಟ್ರದ ಮುಂದಿನ ಅತ್ಯುತ್ತಮ ಪ್ರಧಾನ ಮಂತ್ರಿ ಅಭ್ಯರ್ಥಿ ಎಂದು ಪ್ರಸ್ತುತಪಡಿಸುವ ಪ್ರಯತ್ನಗಳನ್ನು ಮಾಡುತ್ತಿದೆ. ಇದಕ್ಕೆ ಬಿಜೆಪಿಯೊಳಗೇ ವಿರೋಧ ಹೊಗೆಯಾಡುತ್ತಿದೆಯಾದರೂ, ನರೇಂದ್ರ ಮೋದಿ ಅಭ್ಯರ್ಥಿತನನವನ್ನು ನೇರವಾಗಿ, ಬಹಿರಂಗವಾಗಿ ಮತ್ತು ತಾತ್ವಿಕ ನೆಲೆಯಲ್ಲಿ ವಿರೋಧಿಸುತ್ತಿರುವ ದಿಟ್ಟ ಧ್ವನಿಯೆಂದರೆ, ಜೆಡಿ(ಯು) ಪಕ್ಷದ್ದು. ಇದು ಮಾಜಿ ಸಮಾಜವಾದಿಗಳ ಪಕ್ಷವಾಗಿದ್ದು, ಅದರ ನಾಯಕರೂ ಮತ್ತು ಬಿಹಾರದ ಮುಖ್ಯಮಂತ್ರಿಯೂ ಆಗಿರುವ ನಿತೀಶ್ ಕುಮಾರ್, ಪ್ರಧಾನ ಮಂತ್ರಿ ಹುದ್ದೆ ರಾಷ್ಟ್ರೀಯ ಹೊಣೆಗಾರಿಕೆಯ ಹುದ್ದೆಯಾಗಿದ್ದು, ಅದಕ್ಕೆ ಅಭ್ಯರ್ಥಿಯಾಗಲು ರಾಷ್ಟ್ರದ ಸಕಲ ಜನ ಸಮುದಾಯಗಳಿಗೆ ಒಪ್ಪಿಗೆಯಾಗುವ ಅರ್ಹತೆ ಪಡೆದಿರಬೇಕೆಂದೂ, ಕೋಮು ಹತ್ಯಾಕಾಂಡವೊಂದರ ಕಳಂಕ ಹೊತ್ತ ವ್ಯಕ್ತಿ ಆ ಸ್ಥಾನಕ್ಕೆ ಅರ್ಹರಲ್ಲವೆಂದೂ ಮಿತ್ರ ಪಕ್ಷ ಬಿಜೆಪಿಗೆ ಎಚ್ಚರಿಕೆ ನೀಡಿದ್ದಾರೆ. ಆ ಮೂಲಕ ಮೋದಿ ರಥದ ಮುನ್ನಡೆಗೆ ದೊಡ್ಡ ತಡೆಯೊಡ್ಡಿ ರಾಷ್ಟ್ರದ ಎಲ್ಲ ಜಾತ್ಯತೀತ ಶಕ್ತಿಗಳ ಅಭಿನಂದನೆಗೆ ಪಾತ್ರರಾಗಿದ್ದಾರೆ.**

**ಹಾಗೆ ನೋಡಿದರೆ, ನಿತೀಶ್‌ಗೆ ಮೋದಿಯವರ ಅಭ್ಯರ್ಥಿತತನವನ್ನು ವಿರೋಧಿಸುವ ಎಲ್ಲ ಅರ್ಹತೆಗಳಿವೆ. ಪಾರಂಪರಿಕವಾಗಿ ರಾಷ್ಟ್ರದ ಅತ್ಯಂತ ಜಾತಿಗ್ರಸ್ತ ಮತ್ತು ಆ ಕಾರಣದಿಂದಾಗಿಯೇ ಅತಿ ಹಿಂದುಳಿದ ರಾಜ್ಯವಾಗಿದ್ದ ಬಿಹಾರವನ್ನು ಇಂದು ಅತ್ಯಂತ ಪ್ರಗತಿಪರವಾದ ರಾಜ್ಯವನ್ನಾಗಿ ಅವರು ಮುನ್ನಡೆಸಿದ್ದಾರೆ. ನಿಜ ಸಂಗತಿಯೆಂದರೆ ಅವರ ನೇತೃತ್ವದಲ್ಲಿ ಬಿಹಾರ ಪ್ರಗತಿಯಲ್ಲಿ ಈಗ ಗುಜರಾತನ್ನೂ ಹಿಂದಿಕ್ಕಿದೆ ಎಂದು ಅಧಿಕೃತ ಅಂಕಿ ಅಂಶಗಳೇ ಹೇಳುತ್ತಿವೆ. ಕಳೆದ ವರ್ಷ ಗುಜರಾತ್‌ನ ಪ್ರಗತಿ ದರ ಶೇ.೯.೩ ಆಗಿದ್ದರೆ, ಬಿಹಾರದ್ದು ಶೇ. ೧೦.೭. ಗುಜರಾತ್ ಹಸಿವಿನ ಸೂಚ್ಯಂಕ ಶ್ರೇಣಿಯಲ್ಲಿ ೧೫ನೇ ಸ್ಥಾನದಲ್ಲಿದ್ದರೆ ಬಿಹಾರ ೧೩ನೇ ಸ್ಥಾನದಲ್ಲಿದ್ದು, ಎರಡು ಸ್ಥಾನಗಳಷ್ಟು ಮೇಲಿದೆ. ಇದಕ್ಕಿಂತ ಮುಖ್ಯವಾಗಿ ಗುಜರಾತ್‌ನ ಪಾರಂಪರಿಕ ಸಂಪದಭಿವೃದ್ಧಿಯ ಪ್ರಜಾಸತ್ತಾತ್ಮಕ ಗುಣಮಟ್ಟವನ್ನು ನಾವು ನೋಡಿದರೆ ಗಾಬರಿಯಾಗುತ್ತದೆ. ಅಲ್ಲಿನ ಶೇ ೯೦ರಷ್ಟು ದೇವಾಲಯಗಳಿಗೆ ಅಸ್ಪೃಶ್ಯರಿಗಿನ್ನೂ ಪ್ರವೇಶಾಕಾಶ ಸಾಧ್ಯವಾಗಿಲ್ಲ. ಆ ರಾಜ್ಯದ ಶೇ. ೬೬ ಹಳ್ಳಿಗಳಲ್ಲಿ ಅಸ್ಪೃಶ್ಯತೆಯ ಬಹಿರಂಗ ಆಚರಣೆ ಜಾರಿಯಲ್ಲಿದೆ. ಶೇ. ೫೫ರಷ್ಟು ಶಾಲೆಗಳಲ್ಲಿ ಅಸ್ಪೃಶ್ಯ ಮಕ್ಕಳನ್ನು ಪ್ರತ್ಯೇಕ ಕೂರಿಸಿ ಮಧ್ಯಾಹ್ನದ ಊಟ ಕೊಡುವರು. ಇದು ಮೋದಿಯವರ 'ಅಭಿವೃದ್ಧಿ'ಯ ಇನ್ನೊಂದು ಮುಖ!**

**ನಿತೀಶ್ ಕುಮಾರ್ ಮತ್ತು ಅವರ ಸಮಾಜವಾದಿ ಗೆಳೆಯರನ್ನು ಬಿಜೆಪಿಯೊಂದಿಗಿನ ಮೈತ್ರಿಗಾಗಿ ದೂಷಿಸುವ 'ಪ್ರಗತಿಪರ'ರಿದ್ದಾರೆ. ಆದರೆ ನಿತೀಶರನ್ನು ಈ ಮೈತ್ರಿಗೆ ತಳ್ಳಿದ ರಾಜಕೀಯ ಪರಿಸ್ಥಿತಿಗಳನ್ನೂ ನಾವು ಅರ್ಥ ಮಾಡಿಕೊಳ್ಳಬೇಕಿದೆ. ಕಾಂಗ್ರೆಸ್ಸಿನ ಸಮಯಸಾಧಕ ಕೋಮುವಾದಿ ರಾಜಕಾರಣ ಮತ್ತು ಪರಮ ಭ್ರಷ್ಟತೆ ಮತ್ತು ಲಾಲೂ ಹಾಗೂ ಮುಲಾಯಂರ ಪರಮ ಜಾತೀಯತೆ, ಕುಟುಂಬ ರಾಜಕಾರಣ ಹಾಗೂ ಭ್ರಷ್ಟತೆಗಳು ಈ ಸಮಾಜವಾದಿಗಳನ್ನು ಬಿಜೆಪಿಯ ಕೋಮುವಾದವನ್ನು ಹತೋಟಿಯಲ್ಲಿಟ್ಟುಕೊಂಡು ಅವರೊಂದಿಗೆ ರಾಜಕಾರಣ ಮಾಡುವುದೇ ಲೇಸೆಂಬ ತೀರ್ಮಾನಕ್ಕೆ ದೂಡಿರಬಹುದು. ಅದು ಬಿಹಾರದಲ್ಲಿ ಯಶಸ್ವಿಯಾಗಿ ಪ್ರಯೋಗವಾಗಿದ್ದು, ಇದೀಗ ರಾಷ್ಟ್ರ ಮಟ್ಟದ ಪ್ರಯೋಗಕ್ಕೆ ಪ್ರಯತ್ನಗಳು ನಡೆದಿವೆ.**

**ಅದೇನೇ ಇರಲಿ, ನಿರ್ಭಿಡೆ, ನಿರ್ಭೀತ ಮತ್ತು ವಸ್ತುನಿಷ್ಠ ನುಡಿಗಳಿಗೆ ಹೆಸರಾದ ಈಗ ಭಾರತದ ಪತ್ರಿಕಾ ಮಂಡಳಿಯ ಅಧ್ಯಕ್ಷರೂ ಸರ್ವೋಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಮೂರ್ತಿಗಳೂ ಆದ ಮಾರ್ಕಂಡೇಯ ಕಟ್ಜು ಅವರು ನರೇಂದ್ರ ಮೋದಿಯವರ ಪ್ರಧಾನ ಮಂತ್ರಿ ಅಭ್ಯರ್ಥಿತನದ ಅಪಾಯಗಳ ಬಗ್ಗೆ ಬರೆದಿರುವ ಲೇಖನವೊಂದನ್ನು ಇಲ್ಲಿ ನಿಮ್ಮ ಅವಗಾಹನೆಗಾಗಿ ನೀಡುತ್ತಿದ್ದೇವೆ. ಓದಿ ಅಭಿಪ್ರಾಯ ಬರೆಯಿರಿ**-ಸಂಪಾದಕ

ಇಂಡಿಯಾದ ಬಹುತೇಕ ಜನ ನರೇಂದ್ರ ಮೋದಿಯನ್ನು ಒಬ್ಬ ದೊಡ್ಡ ಅವತಾರ ಪುರುಷ ಎಂಬಂತೆ ಹೊಗಳುತ್ತಿದ್ದಾರೆ. ನಮ್ಮ ದೇಶದ ಎಲ್ಲ ಭೀಕರ ಸಮಸ್ಯೆಗಳಿಗೆ ಈತನನ್ನು ಸಂಜೀವಿನಿಯೆಂಬಂತೆ ತೋರಿಸುತ್ತ ಭವ್ಯ ಭಾರತದ ಮುಂದಿನ ಪ್ರಧಾನಿ ಯಾರಾದರೂ ಆಗುವುದಾದರೆ ಈತನಿಗಿಂತ ಸಮರ್ಥರು ಯಾರೂ ಇಲ್ಲವೆಂದು ಸಾರುತ್ತಿದ್ದಾರೆ. ಇದನ್ನು ಹೇಳುತ್ತಿರುವುದು ಕೇವಲ ಭಾರತೀಯ ಜನತಾಪಕ್ಷ ಅಥವಾ ಆರ್‌ಎಸ್‌ಎಸ್‌ನವರಲ್ಲ. ಭಾರತದ ಶಿಕ್ಷಿತ ಸಮುದಾಯದ ಒಂದು ಬಹುದೊಡ್ಡ ವರ್ಗ, ಅದರಲ್ಲೂ ಮುಖ್ಯವಾಗಿ ಯುವಕರು, 'ಮೋದಿ ಮಂತ್ರ' ಪಠನೆಯಲ್ಲಿ ತೊಡಗಿದ್ದಾರೆ.

ನಾನು ಇತ್ತೀಚೆಗೆ ದೆಹಲಿಯಿಂದ ಭೋಪಾಲಕ್ಕೆ ವಿಮಾನದಲ್ಲಿ ಪ್ರಯಾಣಿಸುತ್ತಿದ್ದೆ. ಪಕ್ಕದಲ್ಲಿ ಗುಜರಾತಿನ ಉದ್ಯಮಿಯೊಬ್ಬರು ಕುಳಿತಿದ್ದರು. ಮೋದಿಯನ್ನು ಕುರಿತು ಅವರ ಅಭಿಪ್ರಾಯವೇನು ಎಂದು ನಾನು ಕೇಳಿದೆ. ಅವರು ಮೋದಿ ಮಂತ್ರ ಪಠನ ಶುರುಮಾಡಿದರು. ನಾನು ಅವರನ್ನು ಮಧ್ಯೆ ತಡೆದು, ೨೦೦೨ ರಲ್ಲಿ ೨೦೦೦ ಜನ ಮುಸ್ಲಿಮರ ಹತ್ಯೆಯ ಬಗ್ಗೆ ಕೇಳಿದೆ. ಅವರ ಪ್ರಕಾರ ಈ ಮುಸ್ಲಿಮರು ತಂಟೆಕೋರರಾಗಿದ್ದು ೨೦೦೨ರ ನಂತರ ತೆಪ್ಪಗಾಗಿದ್ದಾರೆ. ಅದಕ್ಕೆ ನಾನು ಈಗ ಗುಜರಾತಿನಲ್ಲಿ ನೆಲೆಸಿರುವುದು ಸ್ಮಶಾನ ಶಾಂತಿ. ಅಲ್ಲಿನ ಜನಕ್ಕೆ ನ್ಯಾಯ ದೊರಕುವವರೆಗೆ ಅಲ್ಲಿ ನಿಜವಾದ ನೆಮ್ಮದಿ ನೆಲೆಸುವ ಸೂಚನೆಗಳಿಲ್ಲ ಎಂದು ಹೇಳಿದೆ. ನನ್ನ ಮಾತು ಕೇಳಿ ಸಿಟ್ಟಾದಂತೆ ಕಂಡ ಅವರು ನನ್ನ ಪಕ್ಕದ ಸೀಟಿನಿಂದ ಎದ್ದು ಬೇರೆ ಕಡೆ ಕುಳಿತರು.

ನಿಜ ಸಂಗತಿಯೇನೆಂದರೆ: ಇಂದು ಗುಜರಾತಿನ ಮುಸ್ಲಿಮರು ೨೦೦೨ರ ಭೀಕರ ಹತ್ಯೆಗಳ ಬಗ್ಗೆ ಮಾತಾಡಲು ಹೆದರುತ್ತಾರೆ. ಮಾತಾಡಿದರೆ ಮತ್ತೆ ತಾವು ಅದೇ ಬಗೆಯ ಹಲ್ಲೆ-ಹತ್ಯೆಗಳಿಗೆ ಗುರಿಯಾಗಬಹುದು ಎಂಬ ಆತಂಕದಲ್ಲಿ ಇದ್ದಾರೆ. ಇಡೀ ಭಾರತದಲ್ಲಿರುವ (೨೦ಕೋಟಿ) ಮುಸ್ಲಿಮರು ಮೋದಿಯ ವಿರುದ್ಧವಿದ್ದರೆ, ಇನ್ನು ಎಲ್ಲೋ ಕೆಲವರು ಮಾತ್ರ ತಮ್ಮದೇ ಕಾರಣಗಳಿಗಾಗಿ ಅವರನ್ನು ಹೊಗಳುತ್ತಿದ್ದಾರೆ.

ಗೋಧ್ರಾದಲ್ಲಿ ನಡೆದ ೫೯ ಜನ ಹಿಂದೂಗಳ ಹತ್ಯೆಗೆ ಪ್ರತೀಕಾರವಾಗಿ ಜನ ನೀಡಿದ 'ಸಹಜ ಪ್ರತಿಕ್ರಿಯೆ'ಯ ಫಲವಾಗಿ ಗುಜರಾತಿನಲ್ಲಿ ನಡೆದ ಹತ್ಯೆಗಳು ನಡೆದವು ಎಂದು ಮೋದಿ ಮಂತ್ರ ಪಠನಕಾರರು ನಮ್ಮನ್ನು ನಂಬಿಸಲು ಪ್ರಯತ್ನಿಸುತ್ತಾರೆ. ನಾನು ಇದನ್ನೆಲ್ಲ ನಂಬುವುದಿಲ್ಲ. ಇಂದಿಗೂ ಗೋಧ್ರಾದಲ್ಲಿ ಏನು ನಡೆಯಿತು ಎಂಬುದು ಸ್ಪಷ್ಟವಾಗಿಲ್ಲ. ಎರಡನೆಯದಾಗಿ, ಗೋಧ್ರಾ ಹತ್ಯಾಕಾಂಡಕ್ಕೆ ಕಾರಣವಾದವರನ್ನು ಹಿಡಿದು ಕಠಿಣ ಶಿಕ್ಷೆ ನೀಡಬೇಕೇ ಹೊರತು ಅದಕ್ಕೆ ಬದಲಾಗಿ ಇಡೀ ಸಮುದಾಯವನ್ನು ಹೊಣೆಗಾರರನ್ನಾಗಿ ಮಾಡುವುದು ಎಷ್ಟು ಸರಿ?

೨೦೦೨ರಲ್ಲಿ ಮುಸ್ಲಿಮರ ವಿರುದ್ಧ ನಡೆದ ದಂಗೆಯನ್ನು 'ಸಹಜ ಪ್ರತಿಕ್ರಿಯೆ' ಎಂದು ಹೇಳುವವುದನ್ನು ನೋಡಿದರೆ, ೧೯೩೮ರಲ್ಲಿ ಜರ್ಮನಿಯ ಜ್ಯೂ ಸಮುದಾಯದ ವಿರುದ್ಧ ನಡೆದ ಘಟನೆಗಳು ನೆನಪಾಗುತ್ತವೆ. ಆಗ ಅವರ ಇಡೀ ಸಮುದಾಯದ ವಿರುದ್ಧ ವ್ಯವಸ್ಥಿತ ಹತ್ಯಾಕಾಂಡ ಜರುಗಿತು. ಜ್ಯೂ ಸಮುದಾಯಕ್ಕೆ ಸೇರಿದ ಯುವಕನೊಬ್ಬ

ತನ್ನ ಕುಟುಂಬವನ್ನು ವಿನಾಕಾರಣ ಹಿಂಸಿಸಿದ್ದಕ್ಕೆ ವಿರುದ್ಧವಾಗಿ ಜರ್ಮನ್ ರಾಯಭಾರಿಯೊಬ್ಬನನ್ನು ಪ್ಯಾರಿಸ್‌ನಲ್ಲಿ ಕೊಂದು ಹಾಕಿದ. ಇದಕ್ಕೆ ಪ್ರತೀಕಾರವಾಗಿ ನಾಜಿಗಳು ಎಷ್ಟೋ ಜನ ಅಮಾಯಕ ಜ್ಯೂಗಳನ್ನು ಕೊಂದರು. ಅವರ ಮನೆ, ಅಂಗಡಿಗಳನ್ನು ಲೂಟಿಮಾಡಿ, ಚರ್ಚುಗಳನ್ನು ಸುಟ್ಟುಹಾಕಿದರು. ಆಗಲೂ ಸಹ ಅದನ್ನು 'ಸಹಜ ಪ್ರತಿಕ್ರಿಯೆ'ಎಂದು ಬಣ್ಣಿಸಲಾಯಿತು. ಅದರೆ ಅದು ನಿಜವಾಗಿ ನಾಜಿ ಸರ್ಕಾರ ವಿವೇಚನೆಯಿಲ್ಲದ ಮತಾಂಧ ಅಧಿಕಾರಿಗಳನ್ನು ಬಳಸಿಕೊಂಡು ಮಾಡಿದ ವ್ಯವಸ್ಥಿತ ಹತ್ಯಾಕಾಂಡವಾಗಿತ್ತು.

ಐತಿಹಾಸಿಕವಾಗಿ ನೋಡಿದರೆ, ಭಾರತ ನಿಜವಾಗಿ ಒಂದು ವಲಸಿಗರ ದೇಶವಾಗಿ ಕಾಣುತ್ತದೆ. ಇದರ ಪರಿಣಾಮವಾಗಿ ಎಲ್ಲ ಕಾಲ, ಸಂದರ್ಭಗಳಲ್ಲಿ ಯಥೇಚ್ಛವಾದ ವೈವಿಧ್ಯತೆಯನ್ನು ಕಾಣಬಹುದು. ಇಂತಹ ಅಪಾರ ವೈವಿಧ್ಯತೆಯನ್ನೊಳಗೊಂಡ ದೇಶದಲ್ಲಿ ಎಲ್ಲ ಸಮುದಾಯಗಳನ್ನು ಒಳಗೊಳ್ಳುವ, ಸಮಾನವಾಗಿ ಗೌರವಿಸುವ ತತ್ವವೊಂದಿದ್ದರೆ ಅದು ಜಾತ್ಯತೀತತೆಯೊಂದೇ ಆಗಿದೆ. ಮೊಘಲ್ ಚಕ್ರವರ್ತಿ ಅಕ್ಬರ್ ಈ ತತ್ವವನ್ನು ಪರಿಪಾಲಿಸಿದ. ಪಂಡಿತ್ ನೆಹರೂ, ಅಂಬೇಡ್ಕರ್ ಮತ್ತು ಅವರ ಸಮಕಾಲೀನರು ಇದೇ ತತ್ವವನ್ನು ಆಧರಿಸಿ ನಮ್ಮ ಸಂವಿಧಾನವನ್ನು ರಚಿಸಿದರು. ಈ ತತ್ವವನ್ನು ನಾವು ಅನುಸರಿಸದೇ ಹೋಗಿದ್ದರೆ, ಇಷ್ಟೊಂದು ಧರ್ಮ, ಜಾತಿ, ಭಾಷೆ, ಸಮುದಾಯಗಳನ್ನು ಒಳಗೊಂಡ ಭಾರತದಂಥ ವೈವಿಧ್ಯಮಯ ದೇಶ ಅಸ್ತಿತ್ವದಲ್ಲಿರಲು ಸಾಧ್ಯವಾಗುತ್ತಿರಲಿಲ್ಲ.

ಈ ಕಾರಣಕ್ಕಾಗಿಯೇ ಭಾರತ ಬರೀ ಹಿಂದೂಗಳ ದೇಶವಲ್ಲ. ಅದು ಮುಸ್ಲಿಮರು, ಕ್ರಿಶ್ಚಿಯನ್ನರು, ಪಾರಸಿಗಳು, ಜೈನರು ಎಲ್ಲರನ್ನು ಒಳಗೊಂಡಿದೆ. ಭಾರತದಲ್ಲಿ ಕೇವಲ ಹಿಂದುಗಳು ಮಾತ್ರ ಪ್ರಥಮ ದರ್ಜೆಯ ಪ್ರಜೆಗಳಾಗಿ ಉಳಿದವರು ಎರಡನೆಯ–ಮೂರನೆಯ ದರ್ಜೆಯ ಪ್ರಜೆಗಳಾಗಿ ಬದುಕುವ ಸ್ಥಿತಿ ಇಲ್ಲ. ಎಲ್ಲರೂ ಸಮಾನ ಹಕ್ಕುಗಳನ್ನುಳ್ಳವರೇ ಆಗಿದ್ದಾರೆ. ಆದ್ದರಿಂದಲೇ ೨೦೦೨ರಲ್ಲಿ ಗುಜರಾತಿನ ಸಾವಿರಾರು ಮುಸ್ಲಿಮರು ಭೀಕರ ಹತ್ಯೆ–ಲೂಟಿ–ಅತ್ಯಾಚಾರಗಳಿಗೆ ಬಲಿಯಾಗಿದ್ದು ಎಲ್ಲರೂ ತಲೆತಗ್ಗಿಸುವ ಸಂಗತಿಯಾಗಿದೆ. ಶೇಕ್ಸ್‌ಪಿಯರ ನಾಟಕದಲ್ಲಿ ಬರುವ ಸಾಲಿನಂತೆ ಇಂಥ ರಕ್ತಪಾತಕ್ಕೆ ಕಾರಣವಾದ ನರೇಂದ್ರ ಮೋದಿ ಅರೇಬಿಯಾದ ಸಕಲ ಪರಿಮಳಗಳಲ್ಲಿ ಮುಳುಗೆದ್ದು ಬಂದರೂ ತನಗೆ ಅಂಟಿಕೊಂಡಿರುವ ನೆತ್ತರ ಕಲೆಗಳಿಂದ ಬಿಡುಗಡೆ ಪಡೆಯಲು ಸಾಧ್ಯವಿಲ್ಲ.

ಆದರೆ, ಮೋದಿ ಮಂತ್ರ ಪಠನ ಮಾಡುವವರು ಈ ಹತ್ಯಾಕಾಂಡದಲ್ಲಿ ಮೋದಿಯವರ ಪಾತ್ರ ಏನೂ ಇಲ್ಲ ಎಂದು ಹೇಳುತ್ತಾರೆ. ಆ ಕಾರಣಕ್ಕಾಗಿಯೇ ನ್ಯಾಯಾಲಯಕ್ಕೂ ಸಹ ಮೋದಿಯನ್ನು ತಪ್ಪಿತಸ್ಥ ಎಂದು ನಿರ್ಧರಿಸಲು ಸಾಧ್ಯವಾಗಿಲ್ಲ ಎನ್ನುತ್ತಾರೆ. ನ್ಯಾಯಾಲಯದ ನಿರ್ಣಯದ ಕುರಿತು ನಾನು ಏನನ್ನೂ ಹೇಳಬಯಸುವುದಿಲ್ಲ. ಆದರೆ ೨೦೦೨ರ ಹತ್ಯಾಕಾಂಡದಲ್ಲಿ ಮೋದಿಯವರ ಪಾತ್ರ ಏನೂ ಇಲ್ಲ ಎಂದು ಹೇಳಿದರೆ ಅದನ್ನು ನಾನು ನಂಬಲು ತಯಾರಿಲ್ಲ. ಗಲಭೆಗಳು ನಡೆಯುತ್ತಿದ್ದಾಗ ಅವರು ಗುಜರಾತಿನ ಮುಖ್ಯಮಂತ್ರಿಯಾಗಿದ್ದರು. ರಾಜ್ಯದ ಎಲ್ಲ ಆಗುಹೋಗುಗಳ ಹೊಣೆ ಹೊತ್ತ ವ್ಯಕ್ತಿಯೊಬ್ಬ ಇಂಥ ಘಟನೆಗಳು ನಡೆಯುವಾಗ ಕಣ್ಣುಮುಚ್ಚಿ ಕೂರಲು ಹೇಗೆ ಸಾಧ್ಯ? ಇಂಥ ವ್ಯಕ್ತಿ ಜನಗಳ ಮಾರಣಹೋಮದಲ್ಲಿ ನನ್ನ ಪಾತ್ರವೇನೂ ಇಲ್ಲ ಎಂದರೆ ನಾನಂತೂ ನಂಬುವುದಿಲ್ಲ.

ಇದಕ್ಕೆ ಪೂರಕವಾಗಿ ಒಂದು ಉದಾಹರಣೆ. ಎಹ್‌ಸಾನ್ ಜಾಫ್ರಿ ಎಂಬುವವರು ಗುಜರಾತಿನ ಅಹಮದಾಬಾದಿನ ಚಮನ್‌ಪುರ ಬಡಾವಣೆಯ ಹಿರಿಯ, ಗೌರವಾನ್ವಿತ ಸಂಸದರಾಗಿದ್ದರು. ಅವರು ಮುಸ್ಲಿಮರೇ ಹೆಚ್ಚಾಗಿ ವಾಸಿಸುವ ಗುಲ್‌ಬರ್ಗ್ ಹೌಸಿಂಗ್ ಸೊಸೈಟಿಯಲ್ಲಿ ವಾಸವಾಗಿದ್ದರು. ಅವರ ಪತ್ನಿ ಝಕಿಯಾ ಅವರ ಲಿಖಿತ ವಿವರಣೆಯಂತೆ ಫೆಬ್ರವರಿ ೨೮, ೨೦೦೨ ರಂದು ಅವರು ವಾಸಿಸುತ್ತಿದ್ದ ಹೌಸಿಂಗ್ ಸೊಸೈಟಿಯ ಗೋಡೆಯನ್ನು ಮತಾಂಧರ ಗುಂಪೊಂದು ಗ್ಯಾಸ್ ಸಿಲಿಂಡರುಗಳನ್ನು ಬಳಸಿ ಧ್ವಂಸಮಾಡಿತು. ಅವರು ಎಹ್‌ಸಾನ್ ಜಾಫ್ರಿಯವರನ್ನು ಹೊರಗೆ ಎಳೆದು, ಬಟ್ಟೆ ಬಿಚ್ಚಿ ಕೈಕಾಲುಗಳನ್ನು ಕತ್ತಿಯಿಂದ ಕೊಚ್ಚಿ ಜೀವಂತವಾಗಿ ಸುಟ್ಟು ಹಾಕಿದರು.

ಇಷ್ಟಲ್ಲದೆ ಅಂದು ಬಹಳಷ್ಟು ಮುಸ್ಲಿಮರನ್ನು ಕೊಂದು ಅವರ ಮನೆಗಳಿಗೆ ಬೆಂಕಿ ಹಚ್ಚಿದರು. ಚಮನ್‌ಪುರ ಬಡಾವಣೆಯು ಪೊಲೀಸ್ ಠಾಣೆಯಿಂದ ಒಂದು ಕಿಲೋಮೀಟರ್ ದೂರದಲ್ಲಿದ್ದರೆ, ಅಹಮದಾಬಾದ್ ಪೊಲೀಸ್ ಆಯುಕ್ತರ ಕಛೇರಿ ಅಲ್ಲಿಂದ ಕೇವಲ ಎರಡು ಕಿಲೋಮೀಟರ್ ದೂರದಲ್ಲಿದೆ. ಇಷ್ಟೆಲ್ಲ ನಡೆಯುತ್ತಿರುವಾಗ ಇದು ರಾಜ್ಯವನ್ನಾಳುವ ಮುಖ್ಯಮಂತ್ರಿಯೊಬ್ಬನಿಗೆ ಗೊತ್ತಿಲ್ಲ ಎಂದರೆ ಹೇಗೆ ನಂಬಲು ಸಾಧ್ಯ ನೀವೇ ಹೇಳಿ? ಝಕಿಯಾ ಜಾಫ್ರಿಯವರು ಅಂದಿನಿಂದ ಇಂದಿನವರೆಗೆ ತನ್ನ ಗಂಡನನ್ನು ಹತ್ಯೆಗೈದ ಪಾತಕಿಗಳಿಗೆ ಶಿಕ್ಷೆ ಕೊಡಿಸಲು ಬೀದಿ ಬೀದಿ ಅಲೆಯುತ್ತಿದ್ದಾರೆ. ಅವರು ಮೋದಿಯ ವಿರುದ್ಧ ದಾಖಲಿಸಿದ ಕ್ರಿಮಿನಲ್ ಮೊಕದ್ದಮೆಯನ್ನು ಜಿಲ್ಲಾ ನ್ಯಾಯಾಲಯವು ತಿರಸ್ಕರಿಸಿತು. ಏಕೆಂದರೆ ಸರ್ವೋಚ್ಚ ನ್ಯಾಯಾಲಯ ನೇಮಿಸಿದ್ದ ವಿಶೇಷ ತನಿಖಾ ತಂಡ(ಎಸ್.ಐ.ಟಿ)ಗೆ ಮೋದಿಯ ವಿರುದ್ಧ ಯಾವುದೇ ಸಾಕ್ಷ್ಯಾಧಾರಗಳನ್ನು ನೀಡಲು ಸಾಧ್ಯವಾಗಲಿಲ್ಲ. ಹಾಗಾಗಿ ಅದು ತನ್ನ ಅಂತಿಮ ವರದಿಯನ್ನು ಸಲ್ಲಿಸಿತ್ತು. ಆದರೆ ಹತ್ತು ವರ್ಷಗಳ ದೀರ್ಘ ಅವಧಿಯ ನಂತರ ಸರ್ವೋಚ್ಚ ನ್ಯಾಯಾಲಯ ಕೆಳ ನ್ಯಾಯಾಲಯದ ನಿರ್ಣಯವನ್ನು ತಳ್ಳಿಹಾಕಿ ಝಕಿಯಾ ಅವರ ಮೇಲ್ಮನವಿಯನ್ನು ಅಂಗೀಕರಿಸಿದೆ. ಸದ್ಯ ಈ ವಿಷಯ ನ್ಯಾಯಾಲಯದಲ್ಲಿ ಇರುವುದರಿಂದ ಈ ಕುರಿತು ನಾನು ಹೆಚ್ಚು ಹೇಳಲು ಸಾಧ್ಯವಿಲ್ಲ.

ಗುಜರಾತನ್ನು ನಾನು ಅಭಿವೃದ್ಧಿಯ ಪಥದ ಕಡೆ ಕೊಂಡೊಯ್ದಿದ್ದೇನೆ ಎಂದು ಮೋದಿ ಪ್ರತಿಪಾದಿಸುತ್ತಿದ್ದಾರೆ. ಹಾಗಾಗಿ ಅವರು ಹೇಳುತ್ತಿರುವ 'ಅಭಿವೃದ್ಧಿ' ಯಾವ ಬಗೆಯದು ಎಂಬುದನ್ನು ನಾವು ವಿಶ್ಲೇಷಿಸಬೇಕಾಗಿದೆ. ನನ್ನ ಅಭಿಪ್ರಾಯದಲ್ಲಿ ಅಭಿವೃದ್ಧಿ ಎಂದರೆ ಸಾಮಾನ್ಯ ಜನರ ಜೀವನ ಮಟ್ಟವನ್ನು ಸುಧಾರಿಸುವುದೇ ಆಗಿದೆ. ಭಾರೀ ಕೈಗಾರಿಕೆಗಳಿಗೆ ಸಹಾಯ ಧನ ನೀಡುವುದು, ರಿಯಾಯ್ತಿ ದರದಲ್ಲಿ ಭೂಮಿ ಮತ್ತು ವಿದ್ಯುತ್ತನ್ನು ನೀಡುವುದು– ಇವುಗಳನ್ನೆಲ್ಲ ಅಭಿವೃದ್ಧಿ ಎಂದು ಕರೆಯಲು ಸಾಧ್ಯವಿಲ್ಲ. ಇದು ಜನರ ಜೀವನ ಮಟ್ಟವನ್ನು ಸುಧಾರಿಸುವಲ್ಲಿ ಯಾವ ಪಾತ್ರವನ್ನೂ ವಹಿಸುವುದಿಲ್ಲ.

ಗುಜರಾತಿನಲ್ಲಿ ಇಂದು ಶೇಕಡಾ ೪೮ ಮಂದಿ ಮಕ್ಕಳು ಅಪೌಷ್ಟಿಕತೆಯಿಂದ ನರಳುತ್ತಿದ್ದಾರೆ. ಈ ಪ್ರಮಾಣ ಇಡೀ ರಾಷ್ಟ್ರದಲ್ಲಿ ಅಪೌಷ್ಟಿಕತೆಯಿಂದ ನರಳುತ್ತಿರುವ ಮಕ್ಕಳ ಪ್ರಮಾಣಕ್ಕಿಂತ ಹೆಚ್ಚಾಗಿದೆ. ಇನ್ನು ಮಕ್ಕಳ ಮರಣದ ಪ್ರಮಾಣ ಅತಿ ಹೆಚ್ಚಾಗಿದೆ. ಬಾಣಂತಿ ಹೆಂಗಸರ ಮರಣದ ಪ್ರಮಾಣವೂ ಅತಿ ಹೆಚ್ಚಾಗಿದೆ. ಬುಡಕಟ್ಟು ಪ್ರದೇಶದಲ್ಲಿ ಹಾಗೂ  ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಲ್ಲಿ ಬಡತನದ ಪ್ರಮಾಣ ಶೇಕಡಾ ೫೭ ರಷ್ಟಿದೆ. ಫೆಬ್ರವರಿ ೮ ರಂದು 'ದಿ ಹಿಂದೂ' ಪತ್ರಿಕೆಯಲ್ಲಿ ರಾಮಚಂದ್ರ ಗುಹಾ ಅವರು ಬರೆದ ಲೇಖನದ ಪ್ರಕಾರ ಗುಜರಾತಿನಲ್ಲಿ ಪ್ರಾಕೃತಿಕ ಸಂಪತ್ತಿನ ನಾಶದ ಪ್ರಮಾಣ ಆತಂಕ ಹುಟ್ಟಿಸುವಂತಿದೆ. ಅಲ್ಲಿ ಶಿಕ್ಷಣದ ಮಟ್ಟ ಕುಸಿದಿದೆ, ೨೦೧೦ರ ಯು.ಎನ್.ಡಿ.ಪಿ.(ವಿಶ್ವಸಂಸ್ಥೆಯ ಅಭಿವೃದ್ಧಿ ಕಾರ್ಯಕ್ರಮ) ವರದಿಯ ಪ್ರಕಾರ ಗುಜರಾತ್ ರಾಜ್ಯವು ಆರೋಗ್ಯ, ಶಿಕ್ಷಣ, ಆರ್ಥಿಕತೆ ಮುಂತಾದ ವಿಷಯಗಳಲ್ಲಿ ಇತರ ರಾಜ್ಯಗಳಿಗೆ ಹೋಲಿಸಿದರೆ ಎಂಟನೇ ಸ್ಥಾನದಲ್ಲಿದೆ.

ಉದ್ಯಮಿಗಳಂತೂ ನರೇಂದ್ರ ಮೋದಿಯವರನ್ನು ಗುಜರಾತಿನಲ್ಲಿ ಉದ್ಯಮಶೀಲ ವಾತಾವರಣ ನಿರ್ಮಿಸಿದ್ದಕ್ಕಾಗಿ ಅವರನ್ನು ಹಾಡಿ ಹೊಗಳುತ್ತಿದ್ದಾರೆ. ಆದರೆ ದೇಶದ ಪ್ರಜೆಗಳು ಅಂದರೆ ಇಂತಹ ಉದ್ಯಮಿಗಳು ಮಾತ್ರ ಎನ್ನಬೇಕೆ?

ದೇಶದ ಮುಂದಿನ ಭವಿಷ್ಯದಲ್ಲಿ ನಂಬಿಕೆಯಿಟ್ಟಿರುವ ಪ್ರಜೆಗಳೆಲ್ಲ ಈ ಕುರಿತು ಆಳವಾಗಿ ಚಿಂತಿಸಬೇಕೆಂದು ಈ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ. ೧೯೩೩ರಲ್ಲಿ ಜರ್ಮನಿಯ ಪ್ರಜೆಗಳು ಮಾಡಿದ ತಪ್ಪನ್ನೇ ನಾವು ಮತ್ತೊಮ್ಮೆ ಮಾಡಬಾರದೆಂಬುದೇ ನನ್ನ ಕಳಕಳಿಯ ಮನವಿ.

**–ನ್ಯಾ॥ ಮಾರ್ಕಂಡೇಯ ಕಟ್ಜು**

**(ಕನ್ನಡಕ್ಕೆ: ಎಸ್. ಸಿರಾಜ್ ಅಹಮದ್)**

# ಸಮಕಾಲೀನ | ಬುದ್ಧ ಮತ್ತು ನಮ್ಮ ಆಧುನಿಕ ಬದುಕು



ಬುದ್ಧನ ಬಗ್ಗೆ ಮಾತನಾಡುವುದು ಇಂದು ಒಂದು ಜನಪ್ರಿಯ ಗೀಳಾಗಿಬಿಟ್ಟಿದೆ. ಆತನನ್ನು ಶಾಂತಿದೂತನೆಂದು ಶಾಂತಿವಾದಿಗಳೂ, ಮಹಾ ಬಂಡಾಯುಗಾರನೆಂದು ನಮ್ಮ ನಡುವಿನ ಹಲವು ಹಿನ್ನೆಲೆಗಳ ಹೋರಾಟಗಾರರು ತಮ್ಮ ಧ್ವಸಯನ್ನಾಗಿ ಮಾಡಿಕೊಳ್ಳಲು ಹೊರಟಿದ್ದಾರೆ.. ಆದರೆ ನಿಜವಾಗಿ ಇವಾವೂ ಆಗದೆ ನಿಜವಾದ ಸಮತ್ವದ ಸಾಧಕನಾದ ಬುದ್ಧ, ಬಹುಶಃ ಜಗತ್ತಿನ ಮೊದಲ ಮನಃಶಾಸ್ತ್ರಜ್ಞ ಹಾಗೂ ಮನೋಚಿಕಿತ್ಸಕನೂ ಆಗಿದ್ದನೆಂದು ಹೇಳುವುದು ಹೆಚ್ಚು ಉಚಿತವಾದೀತು. ಆತ್ಮವೆಂಬ ಪರಿಕಲ್ಪನೆಯನ್ನು ವೈಯುಕ್ತಿಕಗೊಳಿಸಿ ಆ ವೈಯುಕ್ತಿಕ ಆತ್ಮದ ಸುತ್ತ ಜಗತ್ತಿನ ಪರಿಭ್ರಮಣೆಯನ್ನು ಕಲ್ಪಿಸಿಕೊಂಡು ಅದರಿಂದ ಹುಟ್ಟಿಕೊಂಡ ಪಾಪ–ಪುಣ್ಯ, ಸ್ವರ್ಗ–ನರಕ, ಹುಟ್ಟು–ಸಾವು ಇತ್ಯಾದಿ ಹಲವು ಮಾನಸಿಕ ಕೋಲಾಹಲಗಳಿಗೆ ಸಿಕ್ಕ ಮನುಷ್ಯನಗೆ ನಿರ್ವಾಣವೆಂಬ ಇದ್ದೂ ಇಲ್ಲದಂತಹ ಅನಿರ್ವಚನೀಯ ನೆಲೆಯೊಂದನ್ನು ಕಲ್ಪಿಸಿ ಆತನನ್ನು ಪರಿಭ್ರಮಿತವಾದ ಜಗತ್ತಿನ ಎಲ್ಲ ಸಂಕೋಲೆಗಳಿಂದ ಮುಕ್ತಗೊಳ್ಳುವ ಮಾರ್ಗವನ್ನು ತೆರೆದು ತೋರಿದ ಮಹಾಜ್ಞಾನಿ ಬುದ್ಧ. ಈ ನಿರ್ವಾಣ, ಲೋಕದ ಕ್ಷಣ ಭಂಗುರತೆಯನ್ನು ಒಂದು ಸ್ಥಿರ ಸತ್ಯವನ್ನಾಗಿ ಪರಿಗ್ರಹಿಸದೆ, ಅದು ಒಂದು ಮಾನಸಿಕ ರಚನೆ ಮಾತ್ರವೆಂದು ಪ್ರತಿಪಾದಿಸುತ್ತಾ ಅದನ್ನು ರೂಕ್ಷ ವೈರಾಗ್ಯವೂ ಅಲ್ಲದ, ರೂಕ್ಷ ಭೋಗವೂ ಅಲ್ಲದ ಮಧ್ಯಮ ಮಾರ್ಗವೊಂದರ ಮೂಲಕ ನಿರಚಿಸಿಕೊಳ್ಳಬಹುದೆಂದು ಹೇಳಿದ ಮಹಾ ಲೋಕಜ್ಞಾನಿ.

ಈ ಮಧ್ಯಮ ಮಾರ್ಗವನ್ನು ಕಂಡುಕೊಳ್ಳುವ ಕೌಶಲ್ಯಕ್ಕೆ ಮೂಲ ಅಗತ್ಯವಾದದ್ದು ಕರುಣಾ. ಬುದ್ಧನ ಈ ಕರುಣಾ, ಆತ ಕಂಡುಕೊಂಡ ಧರ್ಮದ ಕೇಂದ್ರ. ಆದರೆ ಈ ಕರುಣಾ ಯಾವುದರ ನಿರಸನದಿಂದ ಹುಟ್ಟಬಲ್ಲುದೆಂದು ಬುದ್ಧ ಹೇಳಿದನೋ ಆ ಅಹಂಕಾರದ ಪ್ರದರ್ಶನದ ಭಾಗವಾಗಿ ನಡೆಯುವ ಧರ್ಮ ಪ್ರಚಾರ ಮತ್ತು ರಾಜಕಾರಣಕ್ಕಾಗಿ ಇಂದು ಬುದ್ಧನ ಹೆಸರನ್ನು ಬಳಸಿಕೊಳ್ಳುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಇದರ ಮೂಲದಲ್ಲಿರುವುದು ಬುದ್ಧ ಮತ್ತು ಆತನ ಧರ್ಮವನ್ನು ಕುರಿತ ಜನಪ್ರಿಯ ಕಥೆ, ನಂಬಿಕೆ ಮತ್ತು ಪುರಾಣಗಳು. ಇದರಾಚೆಗೆ ಇರುವ ಬುದ್ಧನನ್ನು ನೋಡುವ ಪ್ರಯತ್ನವೊಂದು ಇಲ್ಲಿದೆ. ಈ ಲೇಖನ ಈ ಹಿಂದೆ ನಾನು 'ವಿಕ್ರಾಂತ ಕರ್ನಾಟಕ'ಕ್ಕಾಗಿ ಬರೆಯುತ್ತಿದ್ದ 'ವಾರದ ಒಳನೋಟ' ಅಂಕಣದಲ್ಲಿ ಪ್ರಕಟವಾಗಿ ನನ್ನ 'ವಸಿಷ್ಠರು ಮತ್ತು ವಾಲ್ಮೀಕಿಯರು' ಸಂಗ್ರಹದಲ್ಲಿ ಸೇರಿರುವ ಬರಹದ ವಿಸ್ತೃತ ರೂಪವಾಗಿದೆ–ಸಂಪಾದಕ

## ಬುದ್ಧನ ನೆನಪಲ್ಲಿ ಕೆಲವು ಸತ್ಯಗಳನ್ನು ಧ್ಯಾನಿಸುತ್ತಾ...

–ಡಿ.ಎಸ್. ನಾಗಭೂಷಣ

ಕೆಲವು ವರ್ಷಗಳ ಹಿಂದೆ ನನ್ನ ವಿಚಾರವಾದಿ ಗೆಳೆಯರ ಗುಂಪೊಂದು ಬುದ್ಧ ಹೇಳಿದ್ದ ಪ್ರಾಥಮಿಕ ಸತ್ಯವೆಂದು ಅವರು ನಂಬಿದ್ದ 'ಆಸೆಯೇ ದುಃಖಕ್ಕೆ ಕಾರಣ' ಎಂಬ ಹೇಳಿಕೆ ಬಗ್ಗೆ ಚರ್ಚೆ ನಡೆಸಿದ್ದರು. ಅವರಲ್ಲೊಬ್ಬರು ಆಸೆ ಇಲ್ಲದೆ ಬದುಕಲು ಹೇಗೆ ಸಾಧ್ಯ ಎಂದು ಕೇಳಿದ ಪ್ರಶ್ನೆಯೇ ಈ ಚರ್ಚೆಗೆ ಕಾರಣವಾಗಿತ್ತು! ಇದಕ್ಕೆ ಗುಂಪಿನ ನಾಯಕ ಆಸೆ ಎಂಬ ಶಬ್ದವನ್ನು ಬುದ್ಧ ದುರಾಸೆ ಅನ್ನುವ ಅರ್ಥದಲ್ಲಿ ಬಳಸಿದ್ದಾನೆ ಎಂಬ ಸಮಝಾಯಿಷಿ ನೀಡಿದಾಗ ಮತ್ತೊಬ್ಬರು ಎದ್ದು ನಿಂತು, ಇದು ನಿಜವಾಗಿದ್ದರೆ ಬುದ್ಧನಿಗೆ ಭಾಷಾ ಬಡತನವಿತ್ತೆಂದು ಹೇಳಬೇಕಾಗುತ್ತದೆ ಎಂದರು. ಹಾಗಿಲ್ಲದಿದ್ದರೆ, ಬುದ್ಧ ಆಸೆ ಎಂಬ ಶಬ್ದದ ಬದಲಾಗಿ ದುರಾಸೆ ಎಂಬ ಶಬ್ದವನ್ನೇ ಬಳಸುತ್ತಿದ್ದ ಎಂಬುದು ಅವರ ವಾದ! ಈ ವಾದ–ವಿವಾದ ಬಿಸಿ ಬಿಸಿ ಚರ್ಚೆಗೆ ಕಾರಣವಾಗುತ್ತಿದ್ದಂತೆ, ಇದು ಬುದ್ಧನ ಶಾಂತಿ–ಸಮಾಧಾನಗಳ ವ್ಯಕ್ತಿತ್ವಕ್ಕೆ ಒಗ್ಗುವುದಿಲ್ಲವೆಂದು ನಾನು ಎದ್ದು ನಂತು ಎರಡು ವಿಷಯಗಳನ್ನು ಸ್ಪಷ್ಟಪಡಿಸಬೇಕಾಯಿತು. ಒಂದು:ಬುದ್ಧ ಕನ್ನಡ ಭಾಷೆಯಲ್ಲಿ ಬೋಧನೆ ಮಾಡಲಿಲ್ಲ. ಎರಡು: ನೀವು ಚರ್ಚಿಸುತ್ತಿರುವುದು ನೀವು ತಿಳಿದಂತೆ ಬುದ್ಧ ಹೇಳಿದ ಪ್ರಾಥಮಿಕ ಸತ್ಯ ಅಲ್ಲ.

ನನ್ನ ಮೊದಲನೆಯ ಸ್ಪಷ್ಟನೆ ಕೆಲವರಲ್ಲಿ ಲಘುವಾಗಿ ನಗೆಯುಕ್ಕಿಸಿದರೆ, ಮತ್ತೆ ಕೆಲವರನ್ನು ಯೋಚನೆಗೆ ಹಚ್ಚಿತು. ಬುದ್ಧನ ಈ ಸತ್ಯ ಆತ ಮಾತನಾಡುತ್ತಿದ್ದ ಪಾಲಿ ಭಾಷೆಯಲ್ಲಿ ದಾಖಲಾಗಿದ್ದು, ಅದರಲ್ಲಿರುವ 'ತನ್ಹಾ' ಎಂಬ ಶಬ್ದ ಕನ್ನಡದಲ್ಲಿ 'ಆಸೆ' ಎಂದು ಅನುವಾದಿತವಾಗಿ ಈ ಎಲ್ಲ ಚರ್ಚೆ–ಗೊಂದಲಗಳಿಗೆ ಕಾರಣವಾಗಿದೆ ಎಂದು ವಿವರಿಸಿದೆ. ಈ ತನ್ಹಾ ಎಂಬುದು ಸಂಸ್ಕೃತದಲ್ಲಿ 'ತೃಷ್ಣಾ'ಗೆ ಸಮಾನಾರ್ಥಕವಾದ ಶಬ್ದ. ಕನ್ನಡದಲ್ಲಿ ಇದಕ್ಕೆ ಹತ್ತಿರದ ಸಮಾನಾರ್ಥಕ ಶಬ್ದವೆಂದರೆ ದಾಹ. ದಾಹ ಎಂಬುದಕ್ಕೆ ಆಸೆ ಎಂಬುದು ಒಂದು ಅರ್ಥ ಛಾಯೆಯಷ್ಟೆ. ವಾಸ್ತವವಾಗಿ, ಬುದ್ಧನ ಉಪದೇಶಗಳ ಒಟ್ಟು ಹಿನ್ನೆಲೆಯಲ್ಲಿ ದಾಹ ಎಂದರೆ, ಇರುವಿಕೆಯ, ಬದುಕುವ, 'ಜೀವಿ'ಸುವ ದಾಹ. ಅಂದರೆ ದೇಹಭಾವಕ್ಕಾಗಿ ಮತ್ತು ನಂತರ ಅದು ಅನುಭವಿಸುವ ಕೊರತೆಗಳನ್ನು ನೀಗಿಸಿಕೊಳ್ಳುವ ದಾಹ. ಇದನ್ನು ಇಂಗ್ಲಿಷ್‌ನಲ್ಲಿ craving ಎಂದು ಕರೆಯಬಹುದು. ಪಾರಮಾರ್ಥಿಕ ಭಾಷೆಯಲ್ಲಿ ಇದನ್ನು ಭವರೋಗ ಎಂದು ಕರೆಯುವರು. ಈ ಭವರೋಗದ ಮೂಲ ನೆಲೆ, ಮಮಕಾರ–attachment. ಇದೇ ದುಃಖಕ್ಕೆ ಕಾರಣ ಎನ್ನುತ್ತಾನೆ ಬುದ್ಧ. ಆದರೆ ಇದು ಬುದ್ಧನ ಪ್ರಾಥಮಿಕ ಸತ್ಯವಲ್ಲ. ಇದು ಆತ ಹೇಳಿದ ನಾಲ್ಕು ಮುಖ್ಯ(ಆರ್ಯ) ಸತ್ಯಗಳಲ್ಲಿ ಎರಡನೆಯದು. ಮೊದಲ ಸತ್ಯ 'ಸಂಸಾರ ದುಃಖಮಯ' ಎಂಬುದು. ಇದನ್ನು ಅರಿಯದೆ ಎರಡನೇ ಸತ್ಯವನ್ನು ಅರ್ಥ ಮಾಡಿಕೊಳ್ಳಲೆಳಿಸಿದ್ದರಿಂದಲೇ ಈ ಎಲ್ಲ ಗೊಂದಲ. ಆದುದರಿಂದ ಬುದ್ಧನನ್ನು ಸಮಗ್ರವಾಗಿ ಅರ್ಥ ಮಾಡಿಕೊಳ್ಳಲು(ಹಾಗೆ ಮಾತ್ರ ಅರ್ಥಮಾಡಿಕೊಳ್ಳಲು ಸಾಧ್ಯ) ನಾವು ಆತ ಹೇಳಿದ ಮೊದಲ ಸತ್ಯದಿಂದಲೇ ಆರಂಭಿಸಬೇಕು.

ಈ ಮೊದಲನೇ ಸತ್ಯದಲ್ಲಿನ 'ಸಂಸಾರ' ಎಂದರೆ, ಕುಟುಂಬ ಅಥವಾ ಜಗತ್ತು ಎಂದರ್ಥವಲ್ಲ. ಅದು ಭವಚಕ್ರ–ಹುಟ್ಟು ಸಾವುಗಳ ಸುಳಿ. ಇದರಲ್ಲಿ ಸಿಕ್ಕಿ ಹಾಕಿಕೊಂಡಿರುವುದರಿಂದಲೇ ಇಡೀ ಜೀವ ಜಗತ್ತು ದುಃಖದಲ್ಲಿ ತೊಳಲಾಡುತ್ತಿದೆ ಎಂದ ಬುದ್ಧ. ಇದು ಕೆಲವರಿಗೆ

ವಿಚಿತ್ರ ಅನ್ನಿಸಬಹುದು. ಬುದ್ಧನ ಪ್ರಕಾರ ಹಾಗಾದರೆ, ಬದುಕಿನಲ್ಲಿ ಸುಖವೆಂಬುದೇ ಇಲ್ಲವೆ? ಹಾಗೆ ನೋಡಿದರೆ, ಬುದ್ಧನ ಪರಿಭಾಷೆಯಲ್ಲಿ ಸುಖವೆಂಬ ಶಬ್ದವೇ ಇಲ್ಲ! ಇಲ್ಲದ ಅದರ ಹುಡುಕಾಟದಲ್ಲೇ ಮನುಷ್ಯ ದುಃಖಿತನಾಗಿರುವುದು ಎನ್ನುತ್ತಾನೆ ಆತ. ಇಲ್ಲಿ ಇಲ್ಲ ಎಂದರೆ, ಶಾಶ್ವತವಲ್ಲ, ನಿತ್ಯವಲ್ಲ –ಎಲ್ಲ ಕ್ಷಣ ಭಂಗುರ ಎಂದರ್ಥವಷ್ಟೆ. ಹಾಗಾಗಿ ಅದು–ಸುಖವೆನಿಸುವುದು–ನಿಜವಲ್ಲ ಎಂದೂ ಅರ್ಥ. ಮನುಷ್ಯ ಈ ನಿಜವಲ್ಲದ್ದನ್ನು ಅರಸುತ್ತಾ, ಅದನ್ನು ತನ್ನ ಸಾವಿನಲ್ಲಿ ಕಳೆದುಕೊಳ್ಳುವ (ಅಶಾಶ್ವತತೆಯ)ಆತಂಕದಲ್ಲೇ ಜೀವನ ದೂಡುತ್ತಾ ಆತ್ಯಂತಿಕವಾಗಿ ದುಃಖಿಯೇ ಆಗಿರುತ್ತಾನೆ. ಈ ದುಃಖವನ್ನು, ಹುಟ್ಟು ಸಾವುಗಳನ್ನು ಮೀರುವ ಮೂಲಕ ನಿವಾರಿಸಿಕೊಳ್ಳಬಹುದು ಎಂಬುದು ಬುದ್ಧನ ಮೂರನೆಯ ಸತ್ಯ. ಈ ಮೀರುವಿಕೆಯನ್ನೇ ನಿರ್ವಾಣವೆನ್ನುವುದು. ಆ ಸ್ಥಿತಿಯನ್ನೇ ಶೂನ್ಯತಾ ಎನ್ನುವುದು. ಇದನ್ನು ಸಾಧಿಸಲು ಆತ ಹೇಳುವ ಅಷ್ಟಾಂಗ ಮಾರ್ಗವೇ ನಾಲ್ಕನೇ ಸತ್ಯ. ಜಗತ್ತೆಂಬುದು ಇದೆ ಮತ್ತು ಇಲ್ಲ ಎಂಬೆರಡು ಸ್ಥಿತಿಗಳಾಚೆಯ ಅನುಭವವೆಂಬ ಅರಿವನ್ನು ತಂದುಕೊಡುವ ಈ ಅಷ್ಟಾಂಗ ಮಾರ್ಗ, ಎಂಟು ಕುಶಲತೆಗಳನ್ನು ಒಳಗೊಂಡಿದೆ. ಸ್ಥೂಲವಾಗಿ ಹೇಳುವುದಾದರೆ ಅವು: ಸದಾಚಾರ, ಸದಾಶಯ, ಸನ್ನುಡಿ, ಸನ್ನಡತೆ, ಸಜ್ಜೀವನ, ಸತ್ಪ್ರಯತ್ನ, ಸದ್ಭಾವನೆ ಮತ್ತು ಸದ್ಧ್ಯಾನ.

ವೈರಾಗ್ಯ ಮತ್ತು ಭೋಗಗಳನ್ನು ಎರಡು ಅತಿಗಳೆಂದು ಬೋಧಿಸುವ ಪ್ರಜ್ಞೆಯನ್ನು ರೂಢಿಸುವುದೇ ಬುದ್ಧನ ಮಧ್ಯಮ ಮಾರ್ಗ. ಈ ಮಾರ್ಗ ಯಾರಿಗಾದರೂ ಒಂದು ಧರ್ಮ ಮಾರ್ಗವಾಗಿ ಅರ್ಥಪೂರ್ಣವೆನಿಸಿಕೊಳ್ಳುವುದು, ಈ ಧರ್ಮದ ಮೊದಲ ಸತ್ಯ–ಸಂಸಾರ ದುಃಖಮಯ ಎಂಬುದು–ಅವರಿಗೆ ಒಂದಲ್ಲ ಒಂದು ಸ್ತರದಲ್ಲಿ ಅನುಭವಕ್ಕೆ ಬಂದು, ಸತ್ಯವೆನಿಸಿದಾಗ ಮಾತ್ರ. ಆದರೆ ಇಂತಹ ಅನುಭವದ ಅಥವಾ ಸತ್ಯದ ಹತ್ತಿರಕ್ಕೂ ಸುಳಿಯದ ನಾವು ಬುದ್ಧನ ಬಗ್ಗೆ ಆತನ ಈ ಧರ್ಮದ ಬಗ್ಗೆ ಭಾವಾವೇಶದಿಂದ ಮಾತನಾಡತೊಡಗುತ್ತೇವೆ. ಸುಖದ ಬೆನ್ನು ಹತ್ತಿ, ಜಗತ್ತಿನ ಸಕಲ ಜಂಜಾಟಗಳಲ್ಲಿ ಸಿಲುಕಿಕೊಂಡು ಬದುಕಿನ 'ದಾಹ'ವನ್ನು ವಿವಿಧ ನೆಲೆಗಳಲ್ಲಿ ಹೆಚ್ಚಿಸಿಕೊಳ್ಳುತ್ತಿರುವಾಗಲೂ, ಬುದ್ಧನೇ ನಮ್ಮ ಆದರ್ಶ ಎಂದು ಘೋಷಿಸಿಕೊಳ್ಳುತ್ತೇವೆ! ಅಷ್ಟೇ ಅಲ್ಲ, ಬೌದ್ಧ ಧರ್ಮದ ದೀಕ್ಷೆಯನ್ನೂ ಪಡೆದು ನಿರಾಳವಾಗುತ್ತೇವೆ! ಇಂತಹ ಆತ್ಮದ್ರೋಹದ ಆವೇಶದಲ್ಲಿ ನಮ್ಮಲ್ಲಿ ಕೆಲವರು ಬುದ್ಧನನ್ನು ಭಾರತೀಯ ಧರ್ಮ ಪರಂಪರೆಯ ಪ್ರತಿನಾಯಕನಂತೆ ಪ್ರಸ್ತುತ ಪಡಿಸುತ್ತಾ, ಆತನ ಮತ್ತು ಆತನ ಧರ್ಮದ ಸ್ವಾಯತ್ತತೆಯನ್ನೇ ಅಲ್ಲಗಳೆಯುವ ಮೂರ್ಖತನಕ್ಕೂ ಕೈ ಹಾಕುತ್ತಿದ್ದೇವೆ. ವಿಶೇಷವಾಗಿ ವೈದಿಕ ಧರ್ಮದ ಅನ್ಯಾಯಗಳ ವಿರುದ್ಧ ಬಂಡೆದ್ದ ಧಾರ್ಮಿಕ ನಾಯಕನೆಂಬಂತೆ ಆತನ ಚಿತ್ರ ಕಟ್ಟುತ್ತಾ, ದೊಡ್ಡ ರಾಜಕೀಯ ಗೊಂದಲವನ್ನೇ ಸೃಷ್ಟಿಸುತ್ತಿದ್ದೇವೆ. ಆ ಮೂಲಕ ನಮ್ಮ ವರ್ತಮಾನವನ್ನು ಪುನಾರಚಿಸಿಕೊಳ್ಳಲು ಅಗತ್ಯವಾದ ಚರಿತ್ರೆಯ ಮರು ಓದಿಗೆ ನಾವೇ ಅಪಚಾರವೆಸಗಿಕೊಳ್ಳುತ್ತಿದ್ದೇವೆ. ಇದು ಇಂದು ಆರಂಭವಾದ ಗೊಂದಲ ಅಥವಾ ಅಪಚಾರದ ಪ್ರಯತ್ನವೇನೂ ಅಲ್ಲ. ಬೌದ್ಧ ಧರ್ಮದಲ್ಲಿ ಪುರೋಹಿತಶಾಹಿ ಸೃಷ್ಟಿಯಾದ ಕಾಲದಿಂದಲೂ ನಡೆಯುತ್ತಿರುವ ಧರ್ಮಕಾರಣವಿದು.

ಇಂದಿನ ಪುರೋಹಿತಶಾಹಿಯನ್ನು ಹಿಂದೂ ಎಂದು ಗುರುತಿಸುತ್ತಾ, ಅದರ ವಿರುದ್ಧದ ಹೋರಾಟದ ಆವೇಶದಲ್ಲಿ ನಾವು ಚರಿತ್ರೆಯ ನಿರಂತರತೆಯನ್ನೇ ಮರೆತು, ಇದಕ್ಕೆ ಕಾರಣವಾದ ಹಿಂದಿನ ಬೌದ್ಧ ಎಂದು ಕರೆಯಬಹುದಾದ ಪುರೋಹಿತಶಾಹಿಯ ಅನಾಚಾರಗಳನ್ನು ಮಾನ್ಯ ಮಾಡುತ್ತಿರುವಂತೆ ತೋರುತ್ತಿದೆ. ಭಾರತದ ಧಾರ್ಮಿಕ ಚರಿತ್ರೆ ಕುರಿತು ಅಂಬೇಡ್ಕರ್ ಕಟ್ಟಿರುವ ಸಂಕಥನಗಳಲ್ಲಿ ಈ ದೋಷವನ್ನು ಢಾಳಾಗಿ ಕಾಣಬಹುದು. ಈ ಹಿಂದೆ, ಗೆಳೆಯ ಎನ್.ಎಸ್.ಶಂಕರ್ ಅನುವಾದಿಸಿರುವ 'ಬ್ರಾಹ್ಮಣ ದಿಗ್ವಿಜಯ' ಎಂಬ ಅಂಬೇಡ್ಕರರ ಕಿರುಪುಸ್ತಕವೊಂದನ್ನು ಬಿಡುಗಡೆ ಮಾಡುತ್ತಾ ನಾನು ಪರೋಕ್ಷವಾಗಿ ಹೇಳಿದ್ದು ಇದನ್ನೇ: ವರ್ತಮಾನದ ಧರ್ಮಕಾರಣದ ಸಂಕಥನದಲ್ಲಿ ನಾವು ಸೃಷ್ಟಿಸಿಕೊಂಡಿರುವ ಈ 'ಬ್ರಾಹ್ಮಣ' ಎಂಬ ಶತ್ರು ಚಾರಿತ್ರಿಕವಾಗಿ ಎಷ್ಟು ನಿಜವಾದವನು? ನಿಜವಾಗಿ ಯಾರೀತ? ನಾವು ಈ ಬ್ರಾಹ್ಮಣರ ಮೂಲ ವಂಶಸ್ಥರೆಂದು ನಂಬಿರುವ ಆರ್ಯರಿಗೂ ಮುಂಚೆ ಬ್ರಾಹಣರೆಂಬುವರು ಇಲ್ಲಿದ್ದರು ಮತ್ತು ಅವರ ವಿರುದ್ಧವೇ ಈ ಆರ್ಯರ 'ಇಂದ್ರ'ರು ಯುದ್ಧ ಮಾಡಿದ್ದು ಎಂಬ ಚಾರಿತ್ರಿಕ ಸಂಶೋಧನೆಗಳು–ಅವೈದಿಕ ಧಾರೆಯ ಧರ್ಮಾನಂದ ಕೊಸಾಂಬಿಯವರಂತಹ ಚರಿತ್ರಕಾರರ ಮೂಲಕವೇ–ಅಸ್ಪಷ್ಟವಾಗಿಯಾದರೂ ಬೆಳಕಿಗೆ ಬಂದಿವೆಯಲ್ಲ? ಹಾಗಾದರೆ ಭಾರತದಲ್ಲಿ ಬೌದ್ಧ ಧರ್ಮದ ನಾಶಕ್ಕೆ ಕಾರಣನಾದನೆಂದು ಅಂಬೇಡ್ಕರ್ ಹೇಳುವ ಪುಷ್ಯಮಿತ್ರ ಯಾವ, ಎಂತಹ ಬ್ರಾಹ್ಮಣ? ಕ್ರಿ.ಪೂ. ಎರಡನೇ ಶತಮಾನದ ಈ ಬ್ರಾಹ್ಮಣ ರಾಜ ಮನುಧರ್ಮ ಶಾಸ್ತ್ರವನ್ನು ಬರೆಸಿ, ಅದನ್ನು ಜಾರಿಗೊಳಿಸುವ ಮೂಲಕ; ಆ ಮುನ್ನ ಒಂದೂವರೆ ಶತಮಾನಗಳ ಕಾಲ ಮೌರ್ಯ ಸಾಮ್ರಾಜ್ಯದ ರಾಜ ಧರ್ಮವಾಗಿದ್ದ ಬೌದ್ಧ ಧರ್ಮವನ್ನು ನಾಶ ಮಾಡಿ, ಅದರ ಜಾಗದಲ್ಲಿ ಬ್ರಾಹ್ಮಣ ಧರ್ಮವನ್ನು ಸ್ಥಾಪಿಸಿದನೆಂದು ಅಂಬೇಡ್ಕರ್ ಹೇಳುತ್ತಾರೆ.

ಆದರೆ ಹಾಗೆ ಹೇಳುವಾಗ ಅವರು ಎರಡು ಮುಖ್ಯ ಅಂಶಗಳನ್ನು ಗಮನಿಸಿದಂತೆ ಕಾಣುವುದಿಲ್ಲ. ಒಂದು: ಬೌದ್ಧ ಧರ್ಮವನ್ನು ರಾಜಧರ್ಮವೆಂದು ಘೋಷಿಸಿದನೆಂದು ಹೇಳಲಾಗುವ ಅಶೋಕನ ಶಾಸನಗಳಲ್ಲೆಲ್ಲೂ ನಿರ್ದಿಷ್ಟವಾಗಿ ಬೌದ್ಧ ಧರ್ಮದವೆಂದೇ ಹೇಳಬಹುದಾದ ಉಪದೇಶಗಳಿಲ್ಲವೇಕೆ? ಬದಲಿಗೆ ಅವು ಪ್ರಚಲಿತ ಎಲ್ಲ ಪಾಶಂಡ(ನಂಬಿಕೆ–ಸಂಪ್ರದಾಯ)ಗಳನ್ನೂ ಸಮಾನ ಗೌರವದಿಂದ ಕಾಣಬೇಕೆಂದು ಹೇಳುತ್ತ, ಸಾರ್ವತ್ರಿಕ ಸದಾಚಾರಗಳನ್ನಷ್ಟೆ ಪ್ರಚಾರ ಮಾಡುತ್ತವಲ್ಲ? ಸ್ವತಃ ಅಶೋಕನೇ ಬೌದ್ಧ ಧರ್ಮ ಪ್ರತಿಪಾದಿಸುವ ಅಜ್ಞೇಯತಾವಾದಕ್ಕೆ(ಇದನ್ನು ನಾಸ್ತಿಕವಾದ ಎಂದು ತಪ್ಪಾಗಿ ಕರೆಯುವುದೂ ಹಳೆಯ 'ಬೌದ್ಧ ಪುರೋಹಿತಶಾಹಿ'ಯ ರಾಜಕಾರಣವೇ.) ವಿರುದ್ಧವಾಗಿ ತನ್ನನ್ನು ತಾನು 'ದೇವನಾಂಪ್ರಿಯ'(ದೇವರಿಗೆ ಪ್ರಿಯನಾದವನು)ನೆಂದೇಕೆ ಕರೆದುಕೊಂಡಿದ್ದಾನೆ? ಎರಡು: ಅಂಬೇಡ್ಕರ್ ಹೇಳುವ ಬೌದ್ಧ ಧರ್ಮದ ನಾಶ ಮತ್ತು ಬ್ರಾಹ್ಮಣ ಧರ್ಮದ ಪುರ್ನಸ್ಥಾಪನೆಯ ನಂತರವೂ, ಬೌದ್ಧ ಧರ್ಮ ಕ್ರಿ.ಶ. ಎರಡನೇ ಶತಮಾನದ ಶಾತವಾಹನರ ಕಾಲದಲ್ಲೂ ರಾಜಾಶ್ರಯ ಪಡೆದು ವೈಭವದ ಬಾಳು ಬಾಳಿದ ಸ್ಪಷ್ಟ ಚರಿತ್ರೆಯೇ ಇದೆಯಲ್ಲ? ಕ್ರಿ.ಶ. ಒಂದನೇ ಶತಮಾನದ ಚಕ್ರವರ್ತಿ ಕಾನಿಷ್ಕ, ಸ್ವತಃ ತಾನೇ ಮೇಲ್ವಿಚಾರಣೆ ವಹಿಸಿಕೊಂಡು ಬೌದ್ಧ ಮಹಾಸಮ್ಮೇಳನವನ್ನು ನಡೆಸಿದ್ದರ ವಿವರಗಳನ್ನು ಹ್ಯೂನೆತ್ಸಾಂಗ್ ವರ್ಣಿಸಿದ್ದಾನಲ್ಲ?

ಹಾಗೆ ನೋಡಿದರೆ, ಕ್ರಿ.ಶ. ಏಳನೇ ಶತಮಾನದ ಅಂತ್ಯದವರೆಗೂ–ಇಂದು ವೈದಿಕ ಮಹಾಗುರು ಎಂದೇ ಮಾನ್ಯ ಮಾಡಲ್ಪಟ್ಟಿರುವ ಶಂಕರಾಚಾರ್ಯರನ್ನು ಧೃತಿಗೆಡಿಸುವಷ್ಟರ ಮಟ್ಟಿಗೆ– ಅದು ಬಾಳಿದ ಚರಿತ್ರೆ ಇದೆಯಲ್ಲ? ಇವರ ಗುರುಗಳ ಗುರುಗಳಾದ ಗೌಡಪಾದರ ಧರ್ಮ ಮೀಮಾಂಸೆಯೆಲ್ಲ ಬುದ್ಧನ ಶೂನ್ಯವಾದವನ್ನೇ(ನಾನೂ, ನೀನೂ, ಅವನೂ, ಯಾರೂ ಇಲ್ಲ! ಅದು, ಇದು ಯಾವುದೂ ಇಲ್ಲ! ಹಿಂದೆ, ಇಂದು, ಮುಂದೆ ಎಂಬುದೂ ಇಲ್ಲ!) ಅವಲಂಬಿಸಿ ಬೆಳೆದಿತ್ತಲ್ಲ? ಅಷ್ಟೇ ಅಲ್ಲ, ತಮ್ಮನ್ನು ಶುದ್ಧ ವೈದಿಕರು ಎಂದು ಕರೆದುಕೊಳ್ಳುವ ಆಚಾರ್ಯರೆಲ್ಲ ಶಂಕರರನ್ನು ಪ್ರಚ್ಛನ್ನ(ವೇಷ ಮರೆಸಿಕೊಂಡ) ಬುದ್ಧ ಎಂದು ಕರೆವರಲ್ಲ? ಹೋಗಲಿ, ಹತ್ತೊಂಭತ್ತನೇ ಶತಮಾನದ–ಹಿಂದೂ ಧರ್ಮದ ಪುನರುದ್ಧಾರಕರೆಂದೇ ಪ್ರಸಿದ್ಧರಾದ–ರಾಮಕೃಷ್ಣ ಪರಮಹಂಸರ ಮತ್ತು ನಮ್ಮದೇ ಇಪ್ಪತ್ತನೇ ಶತಮಾನದ ರಮಣ ಮಹರ್ಷಿಗಳ ಉಪದೇಶಗಳನ್ನು ಓದುತ್ತಿದ್ದಂತೆ, ಅವುಗಳ ಹಿನ್ನೆಲೆಯಲ್ಲಿ ಬುದ್ಧನೇ ಕಾಣತೊಡಗುತ್ತಾನಲ್ಲ? ಪರಮಹಂಸರು ವಿವೇಕಾನಂದರ ಬಾಯಲ್ಲಿ ಅವರ ಬುದ್ಧ ಗಯಾ ಯಾತ್ರೆಯ ವರ್ಣನೆ ಕೇಳಿ 'ಸಮಾಧಿ'ಗೆ ಹೋದರೆ, ಆತ್ಮವಾದಿಯಾದ ರಮಣರು ಬುದ್ಧನ 'ಅನಾತ್ಮವಾದ'ವೇ ತಮ್ಮ 'ನಾನು ಯಾರು?' ಎಂಬ ಪ್ರಶ್ನೆಯ ಮೀಮಾಂಸೆಯ ಹಿಂದೆಯೂ ಇರುವುದು ಎಂದು ಸೂಚಿಸುತ್ತಾರಲ್ಲ?

ಇದನ್ನೆಲ್ಲ ಗಮನಿಸಿದಾಗ ಬೌದ್ಧ ಧರ್ಮವನ್ನು ಯಾರೋ ನಾಶ ಮಾಡಿದರು ಅಥವಾ ಅದನ್ನು ಭಾರತದಿಂದ ಹೊರಕ್ಕೆ ಓಡಿಸಲಾಯಿತು ಎಂಬ ಮಾತುಗಳೇ ಅಸಂಗತವಾಗಿ ಕಾಣುತ್ತವೆ. ಏಕೆಂದರೆ ಬೌದ್ಧ ಧರ್ಮ ತನ್ನ ಉಚ್ಛ್ರಾಯ ಕಾಲದಲ್ಲೇ ಇತರೆ ದೇಶಗಳಿಗೆ ಹರಡಿತ್ತು. ಹಾಗೇ, ಬ್ರಾಹ್ಮಣ ಅಥವಾ ವೈದಿಕ ಧರ್ಮದ ಕಾರಣದಿಂದಲೇ ಅದು ಭಾರತದಲ್ಲಿ ನಾಶವಾಯಿತೆನ್ನುವವರು, ಮಧ್ಯ ಏಷ್ಯಾದುದ್ದಕ್ಕೂ ಬೇರೂರಿದ್ದ ಬೌದ್ಧ ಧರ್ಮ ಏಕೆ ಅಲ್ಲಿ ಕಾಣೆಯಾಯಿತು ಎಂಬುದಕ್ಕೂ ಉತ್ತರ ಹೇಳಬೇಕಾಗುತ್ತದೆ. ನಮ್ಮ ವರ್ತಮಾನದ ರಾಜಕಾರಣದ ಬೇಳೆ ಬೇಯಿಸಿಕೊಳ್ಳುವ ಆತುರದಲ್ಲಿ ನಾವು ಇತಿಹಾಸವನ್ನು ನಮ್ಮ ಅಗತ್ಯಗಳಿಗೆ ತಕ್ಕಂತೆ ಸರಳೀಕರಿಸಿಕೊಳ್ಳುವ, ನಮ್ಮದೇ ಇಕ್ಕಟ್ಟುಗಳಲ್ಲಿ ಸಂಕುಚಿತಗೊಳಿಸಿಕೊಳ್ಳುವ ತಪ್ಪು ಮಾಡುತ್ತಿದ್ದೇವೆ. ಇತಿಹಾಸದಲ್ಲಿ ಹಾಲು ಕುಡಿದ ಮಕ್ಕಳೇ ಬದುಕಿಲ್ಲ. ಇನ್ನು ವಿಷ ಕುಡಿಯುವ ಮಕ್ಕಳು ಬದುಕಿಯಾವೇ? ನಾವು ಕೇಳಿಕೊಳ್ಳಬೇಕಾದ ಮುಖ್ಯ ಪ್ರಶ್ನೆ ಇದು. (ಎರಡು ವರ್ಷಗಳ ಹಿಂದೆ ಶಿವಮೊಗ್ಗದಲ್ಲಿ ನಡೆದ ದಲಿತ ಲೇಖಕ ಮತ್ತು ಕಲಾವಿದರ ಸಮ್ಮೇಳನವನ್ನು ಅರ್ಧ ಆಳೆತ್ತರದ ಹಿತ್ತಾಳೆಯ ಬುದ್ಧನ ಪ್ರತಿಮೆಗೆ ದೀಪ ಬೆಳಗುವ ಮೂಲಕ ಉದ್ಘಾಟಿಸಲಾಯಿತಾದರೂ, ಈ ಸಮ್ಮೇಳನದ ಉಸ್ತುವಾರಿ ವಹಿಸಿದ್ದ ನಿವೃತ್ತ ದಲಿತ ಅಧಿಕಾರಿಯೊಬ್ಬರು ನಂತರ ನನ್ನಲ್ಲಿ ಈ ಬುದ್ಧ ಗಿದ್ಧರಲ್ಲಿ ತಮಗೆ ಕಿಂಚಿತ್ತೂ ನಂಬಿಕೆಯಿಲ್ಲ ಎಂದು ಹೇಳಿದ್ದು ಇಲ್ಲ ನೆನಪಾಗುತ್ತಿದೆ.) ಪ್ರಾಚೀನ ಭಾರತದ–ಬುದ್ಧಪೂರ್ವ ಭಾರತದ–ಇತಿಹಾಸ ಅನೇಕ ಗೊಂದಲಗಳ ಗೂಡಾಗಿದೆ. ರೂಪಕ ಭಾಷೆಯಲ್ಲಿ ಪುರಾಣವಾಗಿ ಮಾತ್ರ ದಾಖಲಾಗಿರುವ ಭಾರತದ ಇತಿಹಾಸವನ್ನು, ಆಧುನಿಕರಾದ ನಾವೀಗ 'ವಾಸ್ತವವಾದಿ ದಾಖಲೆ'ಗಳನ್ನು ಆಧರಿಸಿದ ಪಾಶ್ಚಿಮಾತ್ಯ ಇತಿಹಾಸ ದೃಷ್ಟಿಯನ್ನು ಆವಾಹಿಸಿಕೊಂಡು ನೋಡುತ್ತಾ, ಅನೇಕ ತಪ್ಪು ತೀರ್ಮಾನಗಳಿಗೆ ಬರುತ್ತಿದ್ದೇವೆ.

ಇದರಿಂದಾಗಿರುವ ದೊಡ್ಡ ತಪ್ಪೆಂದರೆ, ಭಾರತದ ಧಾರ್ಮಿಕ ಇತಿಹಾಸವನ್ನು ಅಚ್ಚುಕಟ್ಟಾಗಿ–ಗೆರೆ ಹೊಡೆದಂತೆ–ವೈದಿಕ ಮತ್ತು ಬೌದ್ಧ ಧರ್ಮಗಳ ಮುಖಾಮುಖಿ ಮಾತ್ರವೆಂಬಂತೆ ನೋಡುವ ಸರಳೀಕರಣ. ಬ್ರಾಹ್ಮಣ ಮತ್ತು ಶ್ರಮಣ ಪರಂಪರೆಗಳಿಗೆ ದೀರ್ಘ ಮತ್ತು ಸಂಕೀರ್ಣ ಇತಿಹಾಸವಿದ್ದು, ಇವುಗಳ ಮಧ್ಯೆ ಅನೇಕ ಸಂಕರಗಳು ನಡೆದು ಚರಿತ್ರೆಯ ಮೇಲೆ ಪ್ರಭಾವ ಬೀರಿದ ಅನೇಕಾನೇಕ ಧಾರ್ಮಿಕ–ಅತ್ತ ಆಸ್ತಿಕವೂ ಅಲ್ಲದ, ಇತ್ತ ನಾಸ್ತಿಕವೂ ಅಲ್ಲದ;ಈ ವಿಭಾಗೀಕರಣವೇ ಅಸಂಗತವೆನ್ನಸುವಂತಹ–ಸಂಪ್ರದಾಯಗಳು ಇಲ್ಲಿ ಬಾಳಿ ಹೋಗಿವೆ. ಅವುಗಳಲ್ಲಿ ಹಲವು ಇನ್ನೂ ನಮ್ಮ ಕಾಲದಲ್ಲೂ ವಿವಿಧ ರೂಪಗಳಲ್ಲಿ ಕ್ರಿಯಾಶೀಲವಾಗಿವೆ. ಇವೆಲ್ಲ ಸೇರಿ ಇಂದು ಜನಪ್ರಿಯ ಭಾಷೆಯಲ್ಲಿ ಹಿಂದೂ ಧರ್ಮವೆನಿಸಿಕೊಂಡಿದೆ. ಹೀಗಿರುವಾಗ ನಾವು ಶ್ರಮಣ ಪರಂಪರೆಯ ಅತ್ಯುತ್ಕೃಷ್ಟ ಉತ್ಪನ್ನವಾದ ಬುದ್ಧನನ್ನು ಬ್ರಾಹ್ಮಣ–ಅಂದರೆ, ಇಂದಿನ ಹಿಂದೂ–ಧರ್ಮದ ವಿರುದ್ಧ, ಅದರ ಜಾತಿ ಪದ್ಧತಿ ವಿರುದ್ಧ ಬಂಡಾಯ ಹೂಡಿದ ಹೋರಾಟಗಾರನೆಂದೂ, ನಾಸ್ತಿಕನೆಂದೂ, ಭೌತವಾದಿ ವೈಚಾರಿಕನೆಂದೂ ಪ್ರಸ್ತುತ ಪಡಿಸುತ್ತಾ–ನಮ್ಮ ಇಂದಿನ ಸಂಕಟಗಳಿಗೆ ಅವನ ಈ ಚಿತ್ರದಲ್ಲಿ ಉತ್ತರಗಳನ್ನು ಹುಡುಕುವ ಪ್ರಯತ್ನದಲ್ಲಿ–ಅವನ ವ್ಯಕ್ತಿತ್ವ ಹಾಗೂ ಬೋಧನೆಗಳನ್ನು ವಿರೂಪಗೊಳಿಸುತ್ತಿದ್ದೇವೆ.

ಬುದ್ಧ ಎಂದೂ ಯಾವುದರ ಬಗೆಯೂ ಋಣಾತ್ಮಕವಾಗಿ ಮಾತಾಡಿದ ದಾಖಲೆಗಳಿಲ್ಲ. ಕೊನೆಗೆ ದೇವರ ಬಗೆಗಿನ ಪ್ರಶ್ನೆಗೂ ಅವನ ಉತ್ತರ ಅರ್ಥಪೂರ್ಣ ಮೌನವಾಗಿತ್ತೇ ಹೊರತು, ನಿರಾಕರಣೆಯದಾಗಿರಲಿಲ್ಲ. ಅನೇಕ 'ಸುತ್ತ'ಗಳಲ್ಲಿ ಅವನು ಶ್ರಮಣರೊಂದಿಗೆ, ಬ್ರಾಹ್ಮಣರನ್ನೂ ಗೌರವಿಸಿರಿ ಎಂದು ಹೇಳುತ್ತಾನೆ. ಆದರೆ ಬಹುಶಃ ವರ್ಣಧರ್ಮ ಜಾತಿ ಪದ್ಧತಿಯಾಗಿ ಮಾರ್ಪಾಡುಗೊಳ್ಳುತ್ತಿದ್ದ ಆ ಸಂದರ್ಭದಲ್ಲಿ, ಬ್ರಾಹ್ಮಣನನ್ನು ಹುಟ್ಟಿನಿಂದ ಗುರುತಿಸುವ ಪೃವೃತ್ತಿ ಹೇಗೆ ಅಸಂಗತವೆಂದೂ ಆತ ವಿವರಿಸುತ್ತಿದ್ದ. ಬುದ್ಧನ ಪ್ರಕಾರ ಬ್ರಾಹ್ಮಣನೆನಿಸಿಕೊಳ್ಳಲು ಒಂದು ಕಡ್ಡಾಯ ಅರ್ಹತೆ ಎಂದರೆ, ಆತನಿಗೆ ಶ್ರಮಣರಂತೆ ತನ್ನದೆನ್ನುವ ಆಸ್ತಿಯಿರಕೂಡದು. 'ಬ್ರಾಹ್ಮಣ ಧಮ್ಮಿಕ ಸುತ್ತ'ದಲ್ಲಿ ಬುದ್ಧ, ಮೊದಲು ಸರಳ ಜೀವಿಗಳಾಗಿದ್ದ ಬ್ರಾಹ್ಮಣರು ಹೇಗೆ ಲೋಕರುಚಿಗಳ ಮೋಹಕ್ಕೆ ಸಿಕ್ಕಿ, ರಾಜನೊಬ್ಬನಿಗೆ ಮಹಾ ಯಜ್ಞ ಮಾಡಿಸುವಂತೆ ದುಂಬಾಲು ಬಿದ್ದು ಅವನತಿಗೊಂಡರು ಎಂಬುದನ್ನು ಸಾಂಕೇತಿಕವಾಗಿ ವಿವರಿಸುತ್ತಾನೆ.

ಅನುಭವ ಮತ್ತು ವಿಚಾರಗಳ ಆಧಾರವಿಲ್ಲದೆ ಯಾವುದನ್ನೂ, ಯಾರು ಹೇಳಿದ್ದನ್ನೂ ನಂಬಬಾರದೆಂದು ಹೇಳುತ್ತಿದ್ದ ಬುದ್ಧ, ಸಹಜವಾಗಿಯೇ ವೇದ ಪ್ರಾಮಾಣ್ಯವನ್ನು ಒಪ್ಪದ ಶುದ್ಧ ಪ್ರಜ್ಞಾವಾದಿ. ಹಾಗಾಗಿಯೇ ಬೌದ್ಧ ಧರ್ಮ ಶುದ್ಧ ಮಾನವ ಧರ್ಮವೆನಿಸಿ, ಅವನ ಕಾಲದಲ್ಲೇ ಅನೇಕ 'ವೈದಿಕ' ಬ್ರಾಹ್ಮಣರು ಅವನಿಗೆ ಶರಣಾಗಿ ಬೌದ್ಧರಾದರು. ಇದರ ಒಂದು ಅದ್ಭುತ ಮತ್ತು ಅರ್ಥಪೂರ್ಣ ಚಿತ್ರವೊಂದನ್ನು ಇಂದಿನ ಹಲವು ಆಧುನಿಕ 'ಬಂಡಾಯಗಾರ'ರಿಂದ ಹಿಂದೂ ಸನಾತನಿ ಎಂದು ಕರೆಸಿಕೊಂಡ ಮಾಸ್ತಿ ತಮ್ಮ 'ಸಾರಿಪುತ್ತನ ಕೊನೆಯ ದಿನಗಳು' ಎಂಬ ಕಥೆಯಲ್ಲಿ ಕಟ್ಟಿಕೊಡುತ್ತಾರೆ. ಈ ಕಥೆಯಲ್ಲಿ ಮಾಸ್ತಿ ಬುದ್ಧನನ್ನು, ಕತ್ತಲ ದಾರಿ ಹಿಡಿದಿದ್ದ ಸನಾತನ ಧರ್ಮವನ್ನು ಮತ್ತೆ ಬೆಳಕಿನ ದಾರಿಗೆ ಕೊಂಡೊಯ್ದ ಮಹಾ ಪುರುಷನಂತೆ ಚಿತ್ರಿಸುತ್ತಾರೆ. ಈ ಚಿತ್ರಣದಲ್ಲಿ, ತನ್ನ ಬ್ರಾಹ್ಮಣ ಶಿಷ್ಯ ಸಾರಿಪುತ್ತನ ಪೂರ್ವಾಶ್ರಮದ ಪ್ರವೃತ್ತಿಯೊಂದಿಗೆ ಸಹಾನುಭೂತಿ ತೋರಿಸುವ ಬುದ್ಧ, ಆತನಿಗೆ ತನ್ನನ್ನು ದೇವರೆಂದು ಪೂಜಿಸಲು ಅನುಮತಿಯನ್ನೂ ನೀಡುತ್ತಾನೆ!

ಇದು ನಮ್ಮ ಕಾಲದ ಮಾಸ್ತಿಯವರ ಕಥಾ ಕಲ್ಪನೆ ಮಾತ್ರವಲ್ಲವೆಂಬುದನ್ನು ತಿಳಿಯಲು, ಬುದ್ಧನ ನಂತರದ ಐದು ನೂರು ವರ್ಷಗಳಲ್ಲಿ–ಕ್ರಿ..ಶ. ಒಂದನೇ ಶತಮಾನದ ಹೊತ್ತಿಗೆ–ನಾಗಾರ್ಜುನನಿಂದ ರೂಪುಗೊಂಡ ಬೌದ್ಧ ಮಹಾಯಾನದ ಆಕಾರಗಳನ್ನು ಗಮನಿಸಬೇಕು. ತನ್ನ ಧರ್ಮ ಮೀಮಾಂಸೆಗೆ ಪಾಲಿ ಭಾಷೆಗೆ ಬದಲಾಗಿ ಸಂಸ್ಕೃತವನ್ನು ಅಳವಡಿಸಿಕೊಂಡ ಈ ಮಹಾಯಾನ, ಲೋಕ ಮಾಯೆ ಎಂಬ 'ಅವಿದ್ಯೆ'ಯನ್ನು ದಾಟಲು ಜೀವ ಕರುಣೆಯನ್ನು ಊರುಗೋಲಾಗಿಸಿಕೊಂಡ 'ಪ್ರಜ್ಞೆ'ಯನ್ನು ರೂಢಿಸಿಕೊಳ್ಳುವ ಪ್ರಜ್ಞಾಶಾಸ್ತ್ರವೊಂದನ್ನು ಅನಾವರಣಗೊಳಿಸಿತು. ಇದರ ಅಂಗವಾಗಿ ಧ್ಯಾನವನ್ನೂ ಒಂದು ಆಚರಣೆಯನ್ನಾಗಿ ಮಾರ್ಪಡಿಸಿದ ಅದು, ಆ ಹೊತ್ತಿಗೆ ಪುನರುಜ್ಜೀವನಗೊಳ್ಳತೊಡಗಿದ್ದ ಯಜ್ಞ–ಯಾಗಗಳ ವೈದಿಕ ಧರ್ಮವನ್ನು ಸಾಮಾನ್ಯ ಜನತೆಯ ನೆಲೆಯಲ್ಲಿ ಎದುರಿಸಲೋ ಎಂಬಂತೆ, ಕ್ರಮೇಣ ಮೂರ್ತಿ ಪೂಜೆಯ ದೊಡ್ಡ ಆಂದೋಲನವಾಗಿ ಮಾರ್ಪಾಡಾಯಿತು! ಇದರೊಂದಿಗೆ ಗಾಂಧಾರ ಶಿಲ್ಪವೂ ವಿಕಾಸಗೊಂಡು, ಬೌದ್ಧ ಧರ್ಮವನ್ನು ಒಂದು ಸಂಸ್ಕೃತಿಯನ್ನಾಗಿ ಹರಡುವಲ್ಲಿ ಸಹಾಯಕವಾಯಿತು. ಇದರ ಫಲವಾಗಿ ಅನೇಕ ತಂತ್ರ–ಮಂತ್ರಗಳ, ಪೂಜೆ–ಆಚರಣೆಗಳ ಮತಲೋಕವೊಂದು ರೂಪುಗೊಂಡು, 'ಸಿದ್ಧಿ'ಯನ್ನರಸುವ ಅನೇಕ–ತಾಂತ್ರಿಕ–ಪಂಥಗಳು ಸೃಷ್ಟಿಯಾಗುವುದನ್ನು ನಾವು ಕಾಣುತ್ತೇವೆ. ಬೋಧಿ ಸತ್ವರ ಕಲ್ಪನೆ ಜಾತಕ 'ಕಥೆ'ಗಳಿಗೆ ದಾರಿ ಮಾಡಿಕೊಟ್ಟು, ಬುದ್ಧ ಪೂಜಾರ್ಹ ದೇವರೇ ಆಗುತ್ತಾನೆ. ಅವನ ಪರಿವಾರವಾಗಿ ಅನೇಕ ಹೆಣ್ಣು ದೇವತೆಗಳೂ, ಗಂಡು ದೇವತೆಗಳೂ, ಯಕ್ಷ–ಕಿಂಪುರುಷರೂ ಸೇರಿಕೊಂಡು, ಕಾಲ ಕ್ರಮೇಣ ಒಂದು 'ಅಭಯ' ಲೋಕವೇ ಸೃಷ್ಟಿಯಾಗುತ್ತದೆ.

ಬೌದ್ಧ 'ಶೂನ್ಯತೆ'ಯ ಜಿಜ್ಞಾಸೆಯೇ ಕಾರಣವಾಗಿ ಮುಂದೆ ರೂಪು ತಾಳಿದ ಕಾಶ್ಮೀರಿ ಶೈವವಾದ, ಅದರ ವೈವಿಧ್ಯಮಯ ಟಿಸಿಲುಗಳು ಕ್ರಿಯೆ–ಪ್ರತಿಕ್ರಿಯೆಗಳಿಗೆ ಸಿಕ್ಕಿ ವೈಷ್ಣವ ಪಂಥಗಳು ಹುಟ್ಟಿ (ವೈಷ್ಣವ ಗುರು ಚೈತನ್ಯ ಮಹಾಪ್ರಭುವಿನ ಮೊಮ್ಮಗ ವೀರಭದ್ರ! ಆತ ಮದೀನಾಬಾಯಿಯೆಂಬ ಸೂಫಿಯಿಂದ ಕಲಿತು ರೂಪಿಸಿದ ಭೌಲ್ ಗಾಯನ ಪಂಥದ ಸ್ಫುಟವಾದ ಬೌದ್ಧ ಚಹರೆಗಳನ್ನು ನಾವು ಗಮನಿಸಬೇಕು) ಹಿಂದೂ ಧರ್ಮವೆಂಬುದು (ಅಂದರೆ ಸಿಂಧೂ ನದಿಯಾಚೆಯ ಧಾರ್ಮಿಕ ನಂಬಿಕೆಗಳು) ಒಂದು ಹೊಸ ಒಕ್ಕೂಟ






ಧರ್ಮವಾಗಿ ಗುರುತಿಸಲ್ಪಟ್ಟಿತೆಂದು ತೋರುತ್ತದೆ. ಈ ಅರ್ಥದಲ್ಲಿ ಹಿಂದೂ ಎಂಬುದು ಒಂದು ಧರ್ಮವಲ್ಲ. ಅದು ರಾಜಕಾರಣ! (ಕಾಬಾ-ಪೂಜನೀಯ ಕಲ್ಲು-ಪ್ರದಕ್ಷಿಣೆಯನ್ನು ಆಚರಣೆಯನ್ನಾಗುಳ್ಳ ಇಸ್ಲಾಂ ಕೂಡಾ ಇದರ ಒಂದು ದೂರದ ಟಿಸಿಲು ಎಂದೂ ಹೇಳಲಾಗುತ್ತದೆ. ಅಲ್ಲದೆ, ಈ ಹಿಂದೆ ಏಸು ಕೂಡ ಕಾಶ್ಮೀರಕ್ಕೆ ಬಂದು ಬೌದ್ಧ ಧರ್ಮದ ಆ ಟಿಸಿಲುಗಳಿಂದ ಪ್ರಭಾವಿತನಾಗಿ ಹೋದ ಎಂಬ 'ಕಥೆ'ಯೂ ಇದೆ)

ಇದೆಲ್ಲದರ ಪರಿಣಾಮವಾಗಿ ಬೌದ್ಧ ಭಿಕ್ಷು-ಭಿಕ್ಷುಣಿಯರಿಗೆ ಸಾಮಾನ್ಯ ಜನತೆಯಲ್ಲದೆ, ಶ್ರೀಮಂತರ ಮತ್ತು ರಾಜ-ರಾಣಿಯರ ಅಪಾರ ಸಂಪತ್ತಿನ ದಾನ-ದತ್ತಿಗಳೂ ದೊರೆತು, ವಿಹಾರಗಳು ಕ್ರಮೇಣ ವಿಶಾಲವೂ, ವೈಭವೋಪೇತವು ಆಗತೊಡಗಿ; ಬೌದ್ಧ ಪುರೋಹಿತಶಾಹಿಯೊಂದು ಸೃಷ್ಟಿಯಾಗುವುದರ ಸೂಚನೆಗಳನ್ನು ಶಾತವಾಹನರ ಕಾಲದ ಅನೇಕ ದತ್ತಿ-ದಾನಗಳ ಶಾಸನಗಳಲ್ಲಿಯೇ ನಾವು ಕಾಣತ್ತೇವೆ. ಹಾಗೇ, ನಂತರದ ಕಾಲದ 'ಮೃಚ್ಛಕಟಿಕ', '-ಮತ್ತ ವಿಲಾಸ' ಇತ್ಯಾದಿ ನಾಟಕಗಳು ಮತ್ತು ಅನೇಕ ಕಥಾನಕಗಳಲ್ಲಿ ನೂರಾರು ಆನೆಗಳ ಸರದಾರರಾದ ಭಿಕ್ಷು ಮಹಾರಾಜರ ಮತ್ತು ಮೈ ತುಂಬಾ ವಜ್ರಾಭರಣಗಳಿಂದ ಅಲಂಕೃತರಾಗಿದ್ದ ಭಿಕ್ಷುಣಿ ಮಹಾರಾಣಿಯರ ವಿಹಾರ-ವಿಲಾಸಗಳು ಹಾಗೂ ಕಳ್ಳ-ಸುಳ್ಳ-ಖದೀಮರೆಲ್ಲ ಬೌದ್ಧ ಸಂನ್ಯಾಸಿಗಳ ವೇಷ ತೊಟ್ಟು ಸಂಕಷ್ಟದಿಂದ ಪಾರಾಗುವ ಅನೇಕ ಪ್ರಸಂಗಗಳು ವಿಡಂಬನಾತ್ಮಕವಾಗಿ ನಿರೂಪಿತವಾಗಿರುವುದನ್ನು ನಾವು ಗಮನಿಸಬಹುದು. ಹೀಗೆ ತನ್ನದೇ ಪುರೋಹಿತಶಾಹಿಯನ್ನು ನಿರ್ಮಿಸಿಕೊಂಡ ಬೌದ್ಧ ಧರ್ಮ ತನ್ನ ಅನನ್ಯ ಗುರುತನ್ನು ಕಳೆದುಕೊಂಡು, ಭಾರತದ ಅಂದಿನ ಧಾರ್ಮಿಕ ಕೋಲಾಹಲದಲ್ಲಿ ಅನೇಕ ಸಂಪ್ರದಾಯಗಳ ಮಧ್ಯೆ ಲೀನವಾಗುತ್ತಾ, ಕ್ರಮೇಣ ಕಳೆದು ಹೋಯಿತಷ್ಟೇ.

ಆದರೆ ಸಂಪೂರ್ಣವಾಗಿಯೇನೂ ಕಳೆದು ಹೋಗಿಲ್ಲ. ಏಕೆಂದರೆ ಅದು, ನಾಗಾರ್ಜುನ ತನ್ನ 'ಮೂಲ ಮಾಧ್ಯಮಕಾರಿಕಾ'ದಲ್ಲಿ 'ಪ್ರಜ್ಞಾ ಪಾರಮಿತ'(ಪ್ರಜ್ಞೆಯ ಪರಿಪೂರ್ಣತೆ)ದ ಸಾಧನೆಯ ಅಂಗವಾಗಿ ನಿರೂಪಿಸಿರುವ 'ಜಗತ್ತು ಒಂದು ಸಂಕೀರ್ಣ ಕಾರ್ಯ ಕಾರಣ ಸಂಬಂಧಗಳ ಜಾಲವಾಗಿದ್ದು, ಪ್ರತಿಯೊಂದು ಜೀವಿಯೂ ಪ್ರತಿ ಇನ್ನೊಂದು ಜೀವಿಯ ಸಂಬಂಧದಲ್ಲಷ್ಟೇ ತನ್ನ ಅಸ್ತಿತ್ವದ ಅರ್ಥಪೂರ್ಣತೆಯನ್ನು ಕಂಡುಕೊಳ್ಳಬಹುದು' ಎಂಬರ್ಥದ 'ಪ್ರತೀತ್ಯ ಸಮುತ್ಪಾದ ತತ್ವ' ಅನೇಕ ರೂಪಗಳಲ್ಲಿ ನಮ್ಮ ಮಧ್ಯೆ ಇನ್ನೂ ಜೀವಂತವಾಗಿದೆ. ಪುರಾತನ ಮೌಢ್ಯಗಳು ಮತ್ತು ಆಧುನಿಕ ಬದುಕಿನ ಜಂಜಾಟಗಳ ನಡುವೆಯೂ ಇನ್ನೂ ನಮ್ಮಲ್ಲಿ ಸಂಪೂರ್ಣ ಬತ್ತಿ ಹೋಗಿರದ 'ಸಕಲ ಜೀವಿಗಳಿಗೆ ಲೇಸನ್ನೇ ಬಯಸುವ' ಮತ್ತು 'ದಯೆಯೇ ಧರ್ಮದ ಮೂಲವಯ್ಯ' ಎಂಬ ಆಳದ ಸಾರ್ವತ್ರಿಕ ಅರಿವಿನ ಹಿಂದಿನ 'ಕರುಣಾ'ವಾಗಿ, ಅದು ಭಾರತದ ಜನಮನದ ಹೃದಯದಲ್ಲಿ ಇಂದೂ ಅನುರಣಿಸುತ್ತಿದೆ. ಈ ದೃಷ್ಟಿಯಿಂದ ನೋಡಿದಾಗ ಇಂದು ಜನಪ್ರಿಯ ನೆಲೆಯಲ್ಲಿ ಹಿಂದೂ ಎಂದು ಕರೆಸಿಕೊಳ್ಳುವ ಹಲವು ಸಂಪ್ರದಾಯ-ನಂಬಿಕೆಗಳ ಕಲಸು ಮೇಲೋಗರದಂತಿರುವ 'ಧರ್ಮ'ಕ್ಕೆ, ಜೀವ ಕೇಂದ್ರವಾಗಿರುವುದು ಬೌದ್ಧ ಧರ್ಮವೇ. ಹಾಗಾಗಿಯೇ ಈ 'ಹಿಂದೂ ಧರ್ಮ', ಕುವೆಂಪು ಅವರ 'ಮಲೆಗಳಲ್ಲಿ ಮದುಮಗಳು'ವಿನಲ್ಲಿ ಪುರಾತನ ವೈದಿಕ ಪುರೋಹಿತಶಾಹಿಯ ಮೌಢ್ಯ ಮತ್ತು ಆಧುನಿಕ ಕ್ರಿಶ್ಚಿಯನ್ ಮತದ ಲೌಕಿಕ ಆಕರ್ಷಣೆಗಳೆರಡನ್ನೂ 'ಮಧ್ಯಮ ಮಾರ್ಗ'ದಲ್ಲಿ ಎದುರಿಸಿ ನಿಲ್ಲುತ್ತಾ,

**ಇಲ್ಲಿ**
**ಯಾರೂ ಮುಖ್ಯರಲ್ಲ**
**ಯಾರೂ ಅಮುಖ್ಯರಲ್ಲ**
**ಯಾವುದೂ ಯಃಕಶ್ಚಿತವಲ್ಲ.**
**ಇಲ್ಲಿ**
**ಯಾವುದಕ್ಕೂ ಮೊದಲಿಲ್ಲ,**
**ಯಾವುದಕ್ಕೂ ತುದಿಯಲ್ಲ**
**ಯಾವುದೂ ಎಲ್ಲಿಯೂ ನಿಲ್ಲುವುದಿಲ್ಲ**
**ಕೊನೆ ಮುಟ್ಟುವುದೂ ಇಲ್ಲ.**

**ಇಲ್ಲಿ,**
**ಅವಸರವೂ ಸಾವಧಾನದ ಬೆನ್ನೇರಿದೆ.**

**ಇಲ್ಲಿ**
**ಎಲ್ಲದಕ್ಕೂ ಇದೆ ಅರ್ಥ**
**ಯಾವುದೂ ಅಲ್ಲ ವ್ಯರ್ಥ**
**ನೀರೆಲ್ಲ ಊ ತೀರ್ಥ.**

ಎಂಬ ಬೌದ್ಧ 'ಪ್ರತೀತ್ಯ ಸಮುತ್ಪಾದ' ತತ್ವವೇ ಆದ ಈ ಬೀಜವಾಕ್ಯವನ್ನು ತನ್ನ ಜೀವನ ದರ್ಶನವನ್ನಾಗಿ ಅದ್ಭುತ ರೀತಿಯಲ್ಲಿ ಘೋಷಿಸಿಕೊಳ್ಳಲು ಸಾಧ್ಯವಾಗಿರುವುದು. ಆದರೆ ತನ್ನ ಜೀವನ ದರ್ಶನಕ್ಕೆ ವಿರುದ್ಧವಾದ ಇದನ್ನು ಸಹಿಸಲಾಗದ ಹೊಸ ವೈದಿಕ ಪುರೋಹಿತಶಾಹಿಯು ಇಂದು ವಿಭಿನ್ನ ತಾತ್ವಿಕ ಹಾಗೂ ಸಾಮಾಜಿಕ ನೆಲೆಗಳಲ್ಲಿ ಪುನರ್ಸಂಘಟಿತಗೊಂಡು, 'ಹಿಂದುತ್ವ'ವೆಂಬ ಹೊಸ ಹೆಸರಲ್ಲಿ ಹಿಂದೂ ಧರ್ಮದ ಈ ಬೌದ್ಧ ಹೃದಯ ಕೇಂದ್ರವನ್ನು ನಾಶ ಪಡಿಸುವ ಪ್ರಯತ್ನದಲ್ಲಿ ತೊಡಗಿದೆ. ಇದನ್ನು ಇಂದಿನ ಪರಿಸ್ಥಿತಿಯಲ್ಲಿ ನಾವು 'ಹಿಂದೂ'ವಾಗಿ ಇದ್ದುಕೊಂಡೇ ಬುದ್ಧನಿಗೆ ನಮಸ್ಕರಿಸುವ ಮೂಲಕ ಮಾತ್ರ ಪರಿಣಾಮಕಾರಿಯಾಗಿ ಎದುರಿಸಬಹುದು. ಆ ಮೂಲಕ ಮಾತ್ರ ಹಿಂದೂ ಧರ್ಮ ತನ್ನ ಬಹುಮುಖಿ ಸಂಸ್ಕೃತಿಯನ್ನು ಉಳಿಸಿಕೊಂಡು ಬುದ್ಧನಿಂದ ಸ್ಫೂರ್ತಿಯನ್ನು ಪಡೆಯಬಹುದು.

ನಮ್ಮ ಕಾಲದ ಗಾಂಧಿ ಕಂಡುಕೊಂಡ ತಮ್ಮ ಉನ್ನತ ಚಿಂತನ ಮತ್ತು ಅದರಿಂದ ಹುಟ್ಟುವ ಸರಳ ಜೀವನದ ಮಾರ್ಗ ಮತ್ತು ಆನಂತರ ಮಿತಿಗಳುಳ್ಳ ಬದುಕಿನ ಕಲ್ಪನೆಯ ಭಾಗವಾಗಿ ಲೋಹಿಯಾ ಪ್ರತಿಪಾದಿಸಿದ ಸರಳ ಸಭ್ಯ ಜೀವನ ಮಾರ್ಗ ಬುದ್ಧನ ಚಿಂತನೆಯ ಮುಂದುವರೆದ ರೂಪಗಳೇ ಎಂದೂ ನಾವು ಭಾವಿಸಬಹುದಾಗಿದೆಯಲ್ಲವೇ? ಕಾಲ ಧರ್ಮಕ್ಕನುಸಾರವಾಗಿ ಬುದ್ಧನ ಕರುಣಾ, ಗಾಂಧಿಯಲ್ಲಿ ಅಹಿಂಸೆಯ ರೂಪ ತಾಳಿತು. ಲೋಹಿಯಾರಲ್ಲಿ ಸಾತ್ವಿಕ ಸಿಟ್ಟಿನ ರೂಪ ತಾಳಿತು(ಇದು ಚರ್ಚಾರ್ಹವೇ ಆದರೂ) ಎಂಬುದನ್ನು ನಾವು ಗಮನಿಸಬೇಕು. *



# ಬುದ್ಧ: ನನಗೆ ಕಂಡಂತೆ...



ಸಮಕಾಲೀನ ಬದುಕಿನ ವಿವಿಧ ಕ್ಷೇತ್ರಗಳ ಮತ್ತು ವಿವಿಧ ವಯೋಮಾನಗಳ ಜನ ಬುದ್ಧನನ್ನು ತಮ್ಮ ಬದುಕಿನಲ್ಲಿ ಕಂಡುಕೊಂಡ ಪರಿ ಇಲ್ಲಿದೆ. ಈ ಮೂಲಕ ಬುದ್ಧ ಹೇಗೆ ವಿವಿಧ ರೀತಿಗಳಲ್ಲಿ ಪ್ರಸ್ತುತನಾಗಬಲ್ಲ ಎಂಬುದರ ಒಂದು ಇಣುಕು ನೋಟವೂ ಇಲ್ಲಿ ದೊರಕೀತು–ಸಂ.

## ಬುದ್ಧ ಎಂಬ ಬಿಸುಟ ಒಗಟು...



ಬುದ್ಧನನ್ನು ಕುರಿತ ರೊಮ್ಯಾಂಟಿಕ್ ಗ್ರಹಿಕೆಯ ಆಚೆಗೆ ಜಗತ್ತು ಚಲಿಸಬೇಕೆಂದು ತೋರುತ್ತದೆ. ಧ್ಯಾನಮಗ್ನ ಬುದ್ಧನ ಮಂಗಳ ಮೂರ್ತಿಯ ಆರಾಧನೆಯಲ್ಲಿ ಸ್ಥಗಿತಗೊಂಡಿರುವ ಗ್ರಹಿಕೆಯ ಆಚೆಗೆ ಈ ಪಯಣ ಆರಂಭವಾಗಬೇಕು.

ಆಧುನಿಕ ಜಗತ್ತು, ಬುದ್ಧ ಗುರುವಿಗೆ ಮುಖ ತಿರುಗಿಸಿ ನಡೆಯುತ್ತಿರುವುದನ್ನು ಹೇಳುವ ಹಲವು ಐತಿಹಾಸಿಕ ಘಟನೆಗಳಿವೆ. ಈ ಘಟನೆಗಳು ಬುದ್ಧ ಒಂದು ಬಿಡಿಸಲಾಗದೆ ಬಿಸುಟ ಒಗಟೋ ಎನ್ನುವುದನ್ನು ಸೂಚಿಸುವಂತಿವೆ. ಉದಾ: ಬೌದ್ಧ ರಾಷ್ಟ್ರಗಳೆನಿಸಿದ ಚೀನಾ, ಜಪಾನ್, ಶ್ರೀಲಂಕಾ ಮತ್ತು ಕೊರಿಯಾಗಳ ಆಕ್ರಮಣಶೀಲತೆಯ ಇತಿಹಾಸ ಮತ್ತು ವರ್ತಮಾನದ ಘಟನೆಗಳು. ಈ ಹಿನ್ನೆಲೆಯಲ್ಲಿ ಬುದ್ಧನ ಕುರಿತ ಲೋಕಗ್ರಹಿಕೆ ಬದಲಾಗಬೇಕಿದೆ.

ಜಗತ್ತು ಬುದ್ಧನನ್ನು ದಾಟಿ ಅಥವ ನಿವಾರಿಸಿಕೊಂಡು ತನ್ನಷ್ಟಕ್ಕೆ ತಾನು ಹುಚ್ಚು ಹಿಡಿದು ಸಾಗುತ್ತಿರುವಂತೆ ಭಾಸ ವಾಗುತ್ತಿರುವ ಇಂದಿನ ದಿನಗಳಲ್ಲಿ ಬುದ್ಧನನ್ನು ಹೊಚ್ಚ ಹೊಸದಾಗಿ ಎದುರುಗೊಳ್ಳುವ ತುರ್ತು ನಮ್ಮೆದುರಿಗಿದೆ. ಹಾಗಾಗಿ ನನ್ನ ಪ್ರಾರ್ಥನೆ:

೧. ನೂರಾರು ಮೈಲಿ ದೂರವನ್ನು ಬರಿಗಾಲಲ್ಲಿ ಕ್ರಮಿಸಿ, ಹಲವು ಸಾಮಾಜಿಕ ನೆಲೆಯ ಜನರ ಜೊತೆ ನಿರಂತರವಾಗಿ ಮಾತನಾಡಿದ ಉತ್ಸಾಹಿ ಬುದ್ಧ ನಮ್ಮ ಮನಸ್ಥಲಕ್ಕೆ ಬರಲಿ.

೨. "ಆನಂದ, ನಾನು ಭೂಮಿಯನ್ನು ಭೂಮಿಯನ್ನಾಗಿಯೇ ಗುರುತಿಸುತ್ತೇನೆ. ಆದರೆ ಅದನ್ನು ಪಡೆಯಬೇಕೆಂಬ ಲೋಭ ನನಗಿಲ್ಲ" ಎಂದು ಲೋಭದ ಅನಾಹುತವನ್ನು ಜಗತ್ತಿಗೆ ಮನದಟ್ಟು ಮಾಡಿದ ಬುದ್ಧ ನಮ್ಮ ಮನಸ್ಥಲಕ್ಕೆ ಬರಲಿ.

೩. "ಸುಂದರವಾದದ್ದರ, ಮನೋಹರವಾದದ್ದರ ಸಂಸರ್ಗದಲ್ಲಿರಿ" ಎಂದ ಬುದ್ಧ ನಮ್ಮ ಮನಸ್ಥಲಕ್ಕೆ ಬರಲಿ.



೪. "ಸೋದರರೆ, ರಾಜ ಮಹಾರಾಜರ ಕೃಪೆ, ಹೊಗಳಿಕೆ, ಲಾಭಗಳಿಂದ ದೂರವಿರಿ" ಎಂದು ಎಚ್ಚರಿಸಿದ ಬುದ್ಧ ನಮ್ಮ ಮನಸ್ಥಲಕ್ಕೆ ಬರಲಿ.

೫. ಭೂಮಿ ಮತ್ತು ಆಕಾಶ ವಲಯಗಳನ್ನೂ, ದೇವಾನುದೇವತೆಗಳನ್ನೂ ಪೂಜಿಸುವ, ಭಜಿಸುವ, ಬಲಿ ಅರ್ಪಿಸುವ ಮತಾಚರಣೆ ಮತ್ತು ಕ್ರಿಯೆಗಳು ತರ್ಕಹೀನವೆಂದು ಹೇಳಿದ ಬುದ್ಧ ನಮ್ಮ ಮನಸ್ಥಲಕ್ಕೆ ಬರಲಿ.

೬. "ಪ್ರಜ್ಞೆ ಮತ್ತು ಕರುಣೆಯ ಒಂದು ವಿಶಿಷ್ಟ ಸಂಯೋಜನೆಯೇ ಧರ್ಮ" ಎಂದು ಹೇಳಿದ ಬುದ್ಧ ನಮ್ಮ ಮನಸ್ಥಲಕ್ಕೆ ಬರಲಿ.

೭. ಪದಾರ್ಥಗಳ ಹುಟ್ಟು, ದೇವರು ಆತ್ಮಗಳ ಅಸ್ತಿತ್ವ, ಜನನ ಮರಣಗಳ ರಹಸ್ಯಗಳ ಬಗ್ಗೆ ಮಾತಾಡುವುದು ನಿರರ್ಥಕ ಎಂದು ಹೇಳಿದ ಬುದ್ಧ ನಮ್ಮ ಮನಸ್ಥಲಕ್ಕೆ ಬರಲಿ.

೮. ಭಿಕ್ಷಾಟನೆಯನ್ನು ಕಠಿಣ ವ್ರತವನ್ನಾಗಿ ವಿಧಿಸಿ, ತಾನೂ ಭಿಕ್ಷಾನ್ನದಿಂದ ಜೀವಿಸಿ, ಎಲ್ಲವನ್ನು ನೀಡುವ ಪ್ರಕೃತಿಗೆ ನಿತ್ಯ ಕೃತಜ್ಞರಾಗಿರಿ ಎಂಬ 'ಹೊಳಹ'ನ್ನು ಜಗತ್ತಿಗೆ ನೀಡಿದ ಬುದ್ಧ ನಮ್ಮ ಮನಸ್ಥಲಕ್ಕೆ ಬರಲಿ.

೯. ತಾನು 'ಶಾಂತ ಸ್ಥಿತ'ನಾಗಿ, ನಿರ್ಭೀತನಾಗಿದ್ದಂತೆ, ಜಗತ್ತೂ ಶಾಂತವೂ, ನಿರ್ಭೀತವೂ ಆಗಲೆಂದು ಆಶಿಸುತ್ತಿರುವಂತಿರುವ ಧ್ಯಾನ ಬುದ್ಧನ ನಿಲುವು ನಮ್ಮ ಮನಸ್ಥಲಕ್ಕೆ ಬರಲಿ.

೧೦. ಪ್ರತಿಕ್ಷಣವೂ ದು:ಖ ಮತ್ತು ಮೃತ್ಯುವಶವಾಗುವ ಮಾನವ ಚೇತನವನ್ನು ಪ್ರತಿಕ್ಷಣವೂ ಬಿಡುಗಡೆಗೊಳಿಸುವ ಅಗತ್ಯ ಮತ್ತು ಮಾರ್ಗವನ್ನು ಬೋಧಿಸಿದ ಬುದ್ಧ ನಮ್ಮ ಮನಸ್ಥಲಕ್ಕೆ ಬರಲಿ.

**–ಕೆ.ಪಿ. ನಟರಾಜ** (ಉಪನ್ಯಾಸಕ, ಕವಿ)

---

## ಬಿಸಿಲ ಬೇಗೆಯಲ್ಲಿ ಬುದ್ಧನೆಂಬ ನೀರ ಸೆಲೆ



ಬಿಸಿಲ ಬೇಗೆಯಲ್ಲಿ ನಾವೆಲ್ಲಾ ಪರಿತಪಿಸುತ್ತಿದ್ದೇವೆ. ಹೊಸ ಚಿಗುರಿನ ಚೈತ್ರವಾಸ ಬಂದರೂ ಮಳೆಗಾಗಿ ಹಾತೊರೆಯುತ್ತಿದ್ದೇವೆ. ಇಂತಹ ಸಂದರ್ಭದಲ್ಲಿ ಬುದ್ಧನ ಕರುಣಾಭರಿತ ರೂಪ ಕಣ್ಮುಂದೆ ಬರುತ್ತಿದೆ. ಈ ಸಂದರ್ಭದಲ್ಲಿ ರಾಮ ಬಹೂದ್ದೂರ್ ಎಂಬ ನೇಪಾಳಿ ಹುಡುಗ ೧೫ ವರ್ಷಗಳ ವಯಸ್ಸಿನಲ್ಲಿ ಡೆಹ್ರಾಡೂನಿನ ಬೌದ್ಧ ಸಮಣರನ್ನು ಭೇಟಿಯಾಗಿ ಹಿಂದಿರುಗಿ ತನ್ನೂರು ರತ್ನಗಿರಿಯಲ್ಲಿ ಒಂದು ವೃಕ್ಷದ ಕೆಳಗೆ ಸುಮಾರು ೧೦ ತಿಂಗಳು ಅನ್ನ ನೀರಿಲ್ಲದೆ ಧ್ಯಾನಿಸಿದ್ದು ನೆನಪಿಗೆ ಬರುತ್ತಿದೆ. ಈಗ ಆತನಿಗೆ ೨೫ ವರ್ಷ ತುಂಬಿದೆ. ಆತ ಈಗ ಬುದ್ಧ ಸಮಣ ಸಂಘವನ್ನು ಸ್ಥಾಪಿಸಿ ಎಲ್ಲಾ ಜೀವಿಗಳ ಮೇಲೆ ತೋರಿಸಬಹುದಾದ ದಯೆಯ ಬಗ್ಗೆ, ತ್ಯಾಗದ ಬಗ್ಗೆ, ವಿಶ್ವಮಾನವತೆಯ ಬಗ್ಗೆ ಮಾತನಾಡುತ್ತಿದ್ದಾನೆ. ನಾನು ಬುದ್ಧನ ಅವತಾರವಲ್ಲ ಆ ನಿರ್ವಾಣವನ್ನು ಪಡೆಯಲು ಬಹಳ ಸಾಧಿಸುವುದಿದೆ ಎಂದು ಹೇಳುತ್ತಿದ್ದಾನೆ.

೧೫ ವರ್ಷದ ಎಳೆಯ ಮನಸ್ಸಿನಲ್ಲಿ ಅಂಥಹ ಧೃಡಸಂಕಲ್ಪ ಮೂಡಿ ಆತ ಇಷ್ಟು ದೂರ ಕ್ರಮಿಸಿದ್ದಾದರೂ ಏಕೆ ಮತ್ತು ಹೇಗೆ, ಆತನೊಳಗೆ ಹುಟ್ಟಿರುವ ಬುದ್ಧ ಪ್ರಭೆಯಾದರೂ ಎಂಥದ್ದು? ಇದು ನನ್ನ ಕುತೂಹಲವಷ್ಟೇ ಅಲ್ಲ, ಡಿಸ್ಕವರಿ ಚಾಲನ್‌ನಂತಹ ವಿಜ್ಞಾನದ ಕಾರ್ಯಕ್ರಮಗಳನ್ನು ನೀಡುವ ವಾಹಿನಿಗಳು ಆತನ ಉಪವಾಸದ ಮತ್ತು ಒಂದೇ ಭಂಗಿಯಲ್ಲಿನ ಆತನ ಧ್ಯಾನ ಕ್ರಮಗಳ ಬಗ್ಗೆ ವಿಶ್ಲೇಷಿಸುತ್ತಿವೆ.



ಇದೆಲ್ಲದರ ಮಧ್ಯೆ ಜಗತ್ತಿನಲ್ಲಿ ಹತಾಶೆ, ಒತ್ತಡ, ಆತ್ಮಹತ್ಯೆಗಳು ನಮ್ಮ ಕಣ್ಣೆದುರಿಗೆ ರುದ್ರ ನರ್ತನ ಮಾಡುತ್ತಿವೆ. ವಿಜ್ಞಾನದ ಅಭಿವೃದ್ಧಿಯಂತೂ ನಾಗಾಲೋಟದಿಂದ ಮುಂದೆ ಸಾಗಿದೆ. ಕೃತಕ ಹೃದಯ. ಕೃತಕ ರಕ್ತ, ಕೃತಕ ಜೀವಕೋಶಗಳು ಮುಂದೆ ಸೂಪರ್ ಮೈಂಡುಗಳನ್ನು ಸೃಷ್ಟಿಸುವ ಮಾತಾಡುತ್ತಿದೆ. ಒಂದು ಕಡೆ ಶಾಂತಿಗಾಗಿ ಆಧ್ಯಾತ್ಮದೆಡೆಗೆ ಮನುಷ್ಯ ವಾಲುತ್ತಿದ್ದರೆ, ಮತ್ತೊಂದೆಡೆ ಅಶಾಂತಿಯನ್ನು ಉಂಟುಮಾಡುವ ಕೊಲೆ, ಸುಲಿಗೆ, ಅತ್ಯಾಚಾರದಂತ ಘೋರ ಘಟನೆಗಳು ಜರುಗುತ್ತಿವೆ.

ಈ ಎರಡು ವೈರುಧ್ಯಗಳ ಮೂಲ ಯಾವುದು? ಬಹಳ ಹಿಂದೆ ಬೌದ್ಧ ಭಿಕ್ಷು ಒಬ್ಬರ 'ಹಾರ್ಟ್ ಸೂತ್ರ' ಎನ್ನುವ ಪುಸ್ತಕ ಕೊಂಡುಕೊಂಡಿದ್ದೆ. ಅದರಲ್ಲಿ ಆ ಭಿಕ್ಷುಗಳು ಮಾರನಿರುವ ಕಾರಣಕ್ಕೆ ಬುದ್ಧನಿದ್ದಾನೆ. ವೇಶ್ಯೆ ಇರುವ ಕಾರಣಕ್ಕೆ ಪತಿವ್ರತೆ ಇದ್ದಾಳೆ ಎಂಬ ಮಾತನ್ನು ಹೇಳಿದ್ದರು. ಇದು ಬಹಳ ದಿನ ನನ್ನನ್ನು ಕಾಡುತಿತ್ತು.

ವಿಜ್ಞಾನ ಹೇಳುತ್ತಿದೆ, ನಮ್ಮ ದೇಹದಲ್ಲಿನ ಅಣುಗಳು ಹೊರಹೋಗಿ ಹೊಸ ಅಣುಗಳು ಸೇರ್ಪಡೆಯಾಗುತ್ತಿರುವೆ ಅಂತ. ಮಾರ ಬುದ್ಧನಾದುದನ್ನು ಅಂಗುಲಿಮಾಲನಲ್ಲಿ ನೋಡಿದರೆ ವೇಶ್ಯೆ ಸಾಧುವಾಗಿದನ್ನು ಅಮ್ರಪಾಲಿಯಲ್ಲಿ ನೋಡಬಹುದು. ವಿಜ್ಞಾನದ ಮ್ಯಾಟರ್-ಆ್ಯಂಟಿಮ್ಯಾಟರ್‌ನಂತೆ

ಬ್ರಹ್ಮಾಂಡದ ಮ್ಯಾಟರ್‌ನಲ್ಲಿ ಶಕ್ತಿ ಸಂಚಯ ನಿರ್ದಿಷ್ಠ ರೂಪದಲ್ಲಿ ಚಲಿಸುತ್ತಿದ್ದಂತೆ ಅದಕ್ಕೆ ಪ್ರತಿಸ್ಪರ್ಧಿಸುವ, ದಿಕ್ಕು ತಪ್ಪಿಸುವ ಆ್ಯಂಟಿಮ್ಯಾಟರ್‌ಗಳೂ ಚಲಿಸುತ್ತಿರುತ್ತವೆ. ಇವೆರಡೂ ಒಟ್ಟುಗೂಡಿ ಶಕ್ತಿ ಸ್ಪೋಟವಾಗುವುದನ್ನು ವಿಜ್ಞಾನ ಹೇಳುತ್ತಿದೆ. ಸನಾತನಿಯಂತೆ ಪಿಳ್ಳೆಜುಟ್ಟು ಬಿಟ್ಟ; ಅಪ್ಪನ ಅನಾರೋಗ್ಯದ ಸಂದರ್ಭದಲ್ಲಿ ಇಂದ್ರಿಯ ಸುಖಕ್ಕೆ ಹಾತೊರೆಯುವ ಗಾಂಧಿ ಕ್ರಮೇಣ ಬ್ರಹ್ಮಚರ್ಯ ಹೇಳಿದ್ದು, ಸನಾತನ ಧರ್ಮದ ಕೊಳಕನ್ನೆಲ್ಲಾ ಹೊರಹಾಕುವ ಕಾಯಕ ಮಾಡುತ್ತಾ ಕ್ರಾಂತಿಕಾರಕ ಬದಲಾವಣೆಗೆ ಹಾತೊರೆದದನ್ನು ನೋಡಬಹುದು.

ಬುದ್ಧನ ಮಧ್ಯಮ ಮಾರ್ಗ ಇಂತಹ ಎರಡು ಅತಿಗಳ ಉಯ್ಯಾಲೆಯನ್ನು ಅಲ್ಲಗಳೆಯುತ್ತದೆ. ಹಾಗೆಯೇ ಈ ಮಾರ್ಗ ಎರಡು ಅತಿಗಳನ್ನು ನೋಡುವ, ಪರಿಶೀಲಿಸುವ ಅದರಿಂದ ಆಚೆ ಬರುವ ಮಾರ್ಗವಾಗಿದೆ. ಇದು ಎರಡು ಅತಿಗಳ ನಡುವೆ ಮಿತಿಯನ್ನು ಅಂದರೆ. ಸಂಯಮ, ಶಾಂತಿಯನ್ನು ಆಯ್ಕೆ ಮಾಡುತ್ತದೆ. ಈ ಸಂಯಮ, ಮಿತಿ, ಶಾಂತಿ ಮನುಷ್ಯನ ಯಾವುದೇ ಚಲನಶೀಲ ಗುಣಗಳನ್ನು ತಡೆಯುವುದಿಲ್ಲ. ಕಾರ್ಯ ಕಾರಣಕ್ಕೆ ಒಳಗಾಗಿ ದುಃಖಕ್ಕೆಡೆ ಮಾಡುವುದಿಲ್ಲ.

ಮಳೆ ಇಲ್ಲದ ಈ ಬಿಸಿಲ ಬೇಗೆಯಲ್ಲಿ ಇಂತಹ ಹೊಳಹುಗಳೇ ನಮ್ಮನ್ನು ತಂಪಾಗಿಡುತ್ತವೆ. ನಮ್ಮೊಳಗೆ ಹಸಿರನ್ನು ಚಿಗುರಿಸುತ್ತವೆ. ಅದೇ ಈ ಲೋಕದ ಹಸಿರಾಗಿ ಈ ಲೋಕದ ತಂಪಾಗಿ ನಮ್ಮನ್ನು ಕಾಪಾಡುವಂತಹದ್ದು.

**-ಅಪೂರ್ವ ಡಿ'ಸಿಲ್ವ** (ವ್ಯಾಪಾರಿ, ಯುವ ಸಮಾಜವಾದಿ)

## ಬುದ್ಧನೆಂದರೆ ಎಲ್ಲ, ಬುದ್ಧನೆಂದರೆ ಏನೂ ಇಲ್ಲ!



**ಮಾ**ಧ್ಯಮಿಕ ಶಾಲೆಯಲ್ಲಿ ಕಲಿಯುತ್ತಿದ್ದಾಗ ಬುದ್ಧ ಮತ್ತು ಮಹಾವೀರ ಇಬ್ಬರ ಬಗ್ಗೆಯೂ, ಪಾಠಗಳಿದ್ದವು. ಆಗ ಬುದ್ಧನಗಿಂತ ಮಹಾವೀರ ಇಷ್ಟವಾಗಿ, ಹೆಂಡತಿ ಮತ್ತು ಮಗನನ್ನು ರಾತ್ರೋರಾತ್ರಿ ಬಿಟ್ಟು ಹೋದ ಬುದ್ಧನ ಬಗ್ಗೆ ಸಿಟ್ಟು ಬರ್ತಿತ್ತು. ಹೈಸ್ಕೂಲಿನಲ್ಲಿದ್ದಾಗ, ಕಿಸಾಗೌತಮಿ, ಅಂಗುಲಿ ಮಾಲಾ ಕತೆ ಕೇಳಿದ ಮೇಲೆ ಮಹಾವೀರನ ಜೊತೆಗೆ ಬುದ್ಧನೂ ಇಷ್ಟವಾದ. ಕಾಲೇಜಿಗೆ ಬಂದ ನಂತರ ಅಣ್ಣನ ಮೂಲಕ ಪರಿಚಯವಾದ ಬುದ್ಧ ಮತ್ತು ಅಣ್ಣನೇ ತಂದು ಕೊಟ್ಟ, ಕೆ.ವಿ. ಸುಬ್ಬಣ್ಣನವರ 'ಝೆನ್' ಪುಸ್ತಕದ ಓದು ಮಹಾವೀರನನ್ನು ಮಸುಕಾಗಿಸಿ, ಬುದ್ಧನನ್ನು ಮಾತ್ರ ಮನಸ್ಸಿನಲ್ಲುಳಿಸಿದವು.

ಮದುವೆಯಾಗಿ ತುಮಕೂರಿನಲ್ಲಿ ಸಂಸಾರ ಹೂಡಿದ ಹೊಸತರಲ್ಲಿ ನಮ್ಮ ಸುತ್ತಮುತ್ತ ಬುದ್ಧನದೇ ಗಾಳಿ. ಮೇಷ್ಟ್ರ ಮನೆಯಲ್ಲಿನ ಪ್ರತಿ ವರ್ಷದ ಬುದ್ಧ ಪೂರ್ಣಿಮೆ ಆಚರಣೆ, ಗುರುಗಳೆಂದು ನಾವು ಒಪ್ಪಿಕೊಂಡ ಕೆ. ಎಂ. ಶಂಕರಪ್ಪನವರು ಮನೆಗೆ ಬಂದಾಗ ಬುದ್ಧನ ಬಗ್ಗೆ ತಿಳಿಸ್ತಾ ಇದ್ದದ್ದು, "ಭೋದಿ ಮಂಡಲ"ದ ಒಡನಾಟ, ಗೆಳತಿಯರ ಜೊತೆಗಿನ ಮಾತುಕತೆ, ಹರಟೆ ಮತ್ತು ಬುದ್ಧನನ್ನು ಸದಾ ಧ್ಯಾನಿಸುವ ನನ್ನ ಪತಿಯ 'ಸಹವಾಸ'ದಿಂದ ಬೌದ್ಧ ಧರ್ಮದ ಬಗ್ಗೆ, ಬುದ್ಧನ ವಿಚಾರದ ಬಗ್ಗೆ ಹೆಚ್ಚು ಹೆಚ್ಚು ಅರಿಯಲು ಸಾಧ್ಯವಾಯಿತು.

ಮೊದ ಮೊದಲು, ಬುದ್ಧನ ಕರುಣೆ, ಮೈತ್ರಿ, ಸಹನೆ, ಪ್ರೀತಿ ಅನುಸರಿಸಲು ಕಷ್ಟ ಎನಿಸಿ, "ನಿನ್ನ ಬುದ್ಧನ ಸಹವಾಸ ಸಾಕು ಮಾರಾಯ" ಎಂದು ಪತಿಯ ಮೇಲೆ ರೇಗಾಡಿದ್ದು ಉಂಟು. ಸಿಟ್ಟು ಬಂದು ಸಾಕು ಎಂದಷ್ಟು ಸಲೀಸಾಗಿ ಬುದ್ಧನನ್ನು ಬಿಡುವ ಹಾಗಿರಲಿಲ್ಲ. ಒಲವಿನ ವಿವಾಹವಾದ ನಮಗೆ ಬುದ್ಧನ ಪ್ರೇಮ, ಕರುಣೆ. ಮೈತ್ರಿಯ ಹೊರತು ಬೇರೆ ದಾರಿ ಇರಲಿಲ್ಲ. ನೆಮ್ಮದಿಯ ಬದುಕಿಗೆ ಬುದ್ಧನ ಮಧ್ಯಮ ಮಾರ್ಗ ಅನಿವಾರ್ಯವೆನಿಸಿತ್ತು. ಬುದ್ಧನ ವಿಚಾರ ಚಿಂತನೆಗಳಿಂದ ಸ್ವಲ್ಪಮಟ್ಟಿಗಾದರೂ ದಕ್ಕಿದ ಅರಿವು ಮತ್ತು ಎಚ್ಚರ, ದೈನಂದಿನ ಬದುಕಿನ ಕಷ್ಟಗಳನ್ನು, ಸಂಕಟಗಳನ್ನು ನಿಭಾಯಿಸುವ ಮನೋಸ್ಥೈರ್ಯ ಕೊಟ್ಟಿತ್ತು. ಬುದ್ಧನ ಬಗ್ಗೆ ಅರಿಯುತ್ತಾ, ಅರಿಯುತ್ತಾ ಅರಿವನ್ನು ವಿಸ್ತರಿಸಿಕೊಳ್ಳುತ್ತಾ ನಡೆದಂತೆ, ಅರಿವಾದದ್ದು ಬೌದ್ಧ ಧರ್ಮ ಬರೀ ಧರ್ಮವಲ್ಲ, ಅದೊಂದು ಜೀವನ ವಿಧಾನ. ಅದೊಂದು Spiritual Journey ಎಂದು. ನಡೀತಾ ನಡೀತಾ ಅನುಭವದ, ಮೂಲಕ ಅರಿವು ಪಡೆಯುವ ಬುದ್ಧ ನನಗೆ ದೇವರಾಗಿ ಕಾಣಲ್ಲ, ಹಾಗಾಗೇ, ನನ್ನೊಳಗೆ ನಾನು ಕಂಡು ಕೊಂಡ ಬುದ್ಧನಿಗೆ ಯಾವುದೇ ಬೌದ್ಧ ವಿಹಾರಗಳಲ್ಲಿ ಜಾಗವಿಲ್ಲ.



ಬೌದ್ಧರಾಗಿ ನನ್ನ ಕಣ್ಣಿಗೆ ಕಾಣುವ ಎಷ್ಟೋ ಜನಕ್ಕೆ ಬುದ್ಧನ ಪರಿಚಯವೇ ಇಲ್ಲ. ಬಾಲ್ಯದಲ್ಲಿ ಕಂಡ ಬೆಕ್ಕಿನ ಮರಿಗೆ ಹಾಲುಣಿಸುವ ನಾಯಿ, ನಾಯಿಮರಿ ಎತ್ತಿಕೊಂಡು ಮರವೇರಿ ಕುಳಿತು ಮುದ್ದಿಸುತ್ತಿದ್ದ ಕೋತಿ, ಪೈರು ಪಚ್ಚೆ ದನಕರುಗಳನ್ನೆಲ್ಲಾ ಮುಟ್ಟಿ, ತಟ್ಟಿ ತಡವಿ ಮಾತಾಡಿಸೋ ಅಮ್ಮಂದಿರು, ಎರಡು ಹನಿ ಮಳೆ ಬಿದ್ದ ನೆಲಕ್ಕೆ ಬೀಜ ಬಿತ್ತಿ ಮುಗಿಲಿಗೆ ಮುಖ ಒಡ್ಡಿ ಕುಳಿತ ರೈತರು, ಜಾತಿಬಿಟ್ಟ ಮಗ, ಸೊಸೆ, ಮಗಳು ಮೊಮ್ಮಕ್ಕಳ ಜೊತೆ ನಿಂತು ತುತ್ತು ತಿನಿಸಿ ಪೊರೆವ ಅಮ್ಮಂದಿರು, ಅತ್ತೆ ಅಜ್ಜಿಯರು ನನಗೆ ನಿಜ ಬೌದ್ಧರಾಗಿ ಕಾಣಿಸುತ್ತಾರೆ. ಹೀಗೆ ನನ್ನ ಸುತ್ತಲಿನ ಜೀವಿಗಳಲ್ಲಿ ನಮ್ಮ ಪರಂಪರೆಯಲ್ಲಿ ಜೀವ ಕಾರುಣ್ಯದ ಸೆಲೆಯನ್ನು ಗ್ರಹಿಸಲು ಸಾಧ್ಯವಾಗಿದ್ದು ಬುದ್ಧನಿಂದ.

ಬುದ್ಧನೆಂದರೆ ನನಗೆ ಕಡಲು, ಬಯಲು, ಮಡಿಲು, ಪ್ರೀತಿ, ಕರುಣೆ, ಮಮತೆ, ಮೈತ್ರಿ..., ಅರಿವಿಗೆ ಸಿಕ್ಕಿದಷ್ಟೂ..., ಗ್ರಹಿಕೆಗೆ ಎಟುಕಿದಷ್ಟೂ..., ಬುದ್ಧನೆಂದರೆ ಎಲ್ಲಾ, ಬುದ್ಧನೆಂದರೆ ಏನೂ ಇಲ್ಲ.

**-ಮಲ್ಲಿಕಾ ಬಸವರಾಜು**(ಗೃಹಿಣಿ, ಸಾಮಾಜಿಕ ಕಾರ್ಯಕರ್ತೆ)

## ಆಶ್ರಯಿತ ಬುದ್ಧಿಗೆ ನಿಲುಕಲಾರದ ಬುದ್ಧ

**ಬು**ದ್ಧ ಆಶ್ರಯಿತ ಬುದ್ಧಿಗೆ ದಕ್ಕಲಾರದ ಲೋಕದ ವಿಸ್ಮಯ. ನನ್ನ ಅಲ್ಪ ಅರಿವಿನಿಂದ ಕಂಡದ್ದು, ಬುದ್ಧನ ದಾರಿ ವ್ಯಕಿಗತ್ತವಾದುದಲ್ಲಾ. ಲೋಕದಲ್ಲಿ ಮಾನವಜೀವಿ ಅಜ್ಞಾನ, ಅಸಹಾಯಕತೆಯಿಂದ ಹಲವಾರು ಮತ, ಧರ್ಮ, ದೈವಗಳನ್ನು ಮತ್ತು ಇವುಗಳು ವಿಧಿಸಿರುವ ಕಟ್ಟಳೆ ಸಂಪ್ರದಾಯಗಳನ್ನು ಆಶ್ರಯಿಸಿ ಪೂರ್ಣ ನೆಮ್ಮದಿ ಕಾಣದೆ ಆತಂಕಿತನಾಗಿರುವನು. ಆತಂಕಿತ ಮಾನವನನ್ನು ಸ್ವತಂತ್ರಗೊಳಿಸಿ ಸರಳ, ಶೀಲಯುತ, ಸ್ವತಂತ್ರ ಬದುಕಿಗೆ ಪ್ರೇರೇಪಿಸುವುದರ ಮೂಲಕ ತನ್ನೊಳಗಿನ ಬೆಳಕನ್ನು ಅರಿಯುವ ದಾರಿಯೇ ಬುದ್ಧನ ಸಂದೇಶದ ತಿರುಳು.



ಸುಖೀದ ಬದುಕನ್ನು ತೊರೆದ ಸಿದ್ಧಾರ್ಥನು ಲೋಕದಲ್ಲಿ ಸಕಲ ಮಾನವರು, ಹುಟ್ಟು, ಮುಪ್ಪು, ವ್ಯಾದಿ, ಮರಣಗಳ ಬಂಧನಕ್ಕೊಳಗಾಗಿದ್ದು ಇದರಿಂದ ಪಾರಾಗುವ ಬಗೆಯನ್ನು ಅರಸುತ್ತಾ ಚಿಂತಿತನಾಗುವನು. ಪಾರಂಪರಿಕ ವಿಧಾನಗಳಾದ ವ್ರತ, ಯೋಗ,

ಧ್ಯಾನ ತಪಸ್ಸುಗಳನ್ನು ರೂಢಿಸಿಕೊಂಡು ಪ್ರಯತ್ನಿಸಿದರೂ ಉತ್ತರ ಕಾಣದೆ ಶಾರೀರಿಕವಾಗಿ ದೌರ್ಬಲ್ಯ ಹೊಂದಿ ನಿರಾಶನಾಗುತ್ತಾನೆ. ಹಲವಾರು ಜ್ಞಾನಿಗಳನ್ನು ಮುನಿಗಳನ್ನು ಸಂಧಿಸಿ ಚರ್ಚಿಸುವನು. ನೋವನ್ನು ಅನುಭವಿಸುವುದೇ ಪುಣ್ಯದ ಬೀಜ ಎಂಬ ಸಾಧುಗಳ ಮಾತನ್ನು ಹಾಗೂ ಸ್ವರ್ಗಕ್ಕಾಗಿ ದೇಹ ದಂಡನೆಯ ಪ್ರವೃತ್ತಿಯನ್ನು ಮತ್ತು ಸುಖ ಲಾಭಗಳಿಗಾಗಿ "ಪ್ರಾಣಿ ಬಲಿ" ಕೊಡುವ ಯಜ್ಞ-ಯಾಗ ಆಚರಣೆಗಳನ್ನು ಅಜ್ಞಾನ ಎಂದು ತಿರಸ್ಕರಿಸುತ್ತಾ ಮುಂದೆ ಸಾಗುವನು.

ಹೀಗೆ ಮುಂದಡಿಯಿಟ್ಟ ಸಿದ್ಧಾರ್ಥ ತನ್ನ ಸಂಗಡಿಗರಿಂದ ಸಂಶಯಿಸಲ್ಪಟ್ಟು ಏಕಾಂಗಿಯಾಗುವನು. ಎಲ್ಲ ಆಶ್ರಯ ಬಂಧನಗಳಿಂದ ಮುಕ್ತನಾಗಿ 'ಸ್ವತಂತ್ರ ಸರಳ ಶೀಲಯುತ ಜೀವನ ಕ್ರಮ ಪ್ರಾರಂಭಿಸಿ ಪ್ರಕೃತಿಯ ಮಡಿಲಿಗೆ ಪ್ರವೇಶ ಪಡೆಯುತ್ತಾನೆ. ತಾನಿರುವಂತೆ ತನ್ನನ್ನು ಪ್ರಕೃತಿಗೆ ಸಮರ್ಪಿಸಿಕೊಂಡಾಗ, ಕಷ್ಟ-ಸುಖಃಗಳ ಸಮ್ಮಿಶ್ರಣದ ನೈಸರ್ಗಿಕ ಸತ್ಯದ ದಾರಿಗೆ ಪ್ರವೇಶ ದಕ್ಕಿಸಿಕೊಳ್ಳುತ್ತಾನೆ. ಹೀಗೆ ಪ್ರಕೃತಿಯಲ್ಲಿ ಒಂದಾದ ಸಿದ್ಧಾರ್ಥನು ಪ್ರಕೃತಿಯಲ್ಲಿ ಜರುಗುವ ಸಂಕೀರ್ಣ ಕ್ರಿಯೆಗಳನ್ನು ಗ್ರಹಿಸಲು ಶಕ್ತನಾಗಿ ತನ್ನ ಸಂದೇಹಗಳಿಗೆ, ನಿಸರ್ಗದ ಸಂದೇಶ ಆಗುವುದಕ್ಕಾಗಿ ಕಾಯುತ್ತ ಸಾಗಿದಾಗ ಪ್ರಕೃತಿಯಿಂದ ಬೋಧಿಯನ್ನು ಪಡೆದು ಸಿದ್ಧಾರ್ಥ ಬುದ್ಧನಾಗಿ ಪರಿವರ್ತನೆ ಹೊಂದುವನು.



ಲೋಕದ ಸಕಲ ಮಾನವರ ದುಃಖ ದುಮ್ಮಾನಗಳಿಗೆ ಮನಸಿನ ಆಳದಲ್ಲಿರುವ ವಿಕಾರಗಳೆ ಕಾರಣ, ಇವುಗಳನ್ನು ನಾಶಪಡಿಸಿ ಕೊಂಡಾಗಲೆ ಸುಖ-ದುಖಃಗಳ ಮಿಶ್ರಣದ ನೈಸರ್ಗಿಕ ಪ್ರತ್ಯಕ್ಷಜ್ಞಾನವನ್ನು ಪಡೆಯಲು ಸಾಧ್ಯವೆಂದು ಸಾರಿದ ಬುದ್ಧ ಮಾನವ ಜನಾಂಗಕ್ಕೆ ಬೆಳಕಿನ ದಾರಿ ತೋರಿಸಿದನು. ಬುದ್ಧನನ್ನು ಹೊರದಬ್ಬಿ ಬೆಳಕಿಗೆ ಬೆನ್ನು ತೋರಿಸಿದ ಭಾರತ ಸ್ವಾಯತ್ತತೆಯನ್ನು ಕಳೆದುಕೊಂಡು ನರಳುವಂತಾಗಿದೆ. ಜಗತ್ತಿನ ಬಹುಪಾಲು ದೇಶಗಳು ಬುದ್ಧನ ಬೆಳಕನ್ನು ಆಶ್ರಯಿಸಿ ಉಜ್ವಲ ಭವಿಷ್ಯದತ್ತ ಸಾಗಿವೆ. ಕಾರಣ ಇಂದು ಭಾರತ ದೇಶದಲ್ಲಿ ಧಾರ್ಮಿಕ ಮೌಢ್ಯದ ಜ್ವಾಲೆಯಿಂದ ಹೊತ್ತಿ ಉರಿಯುತ್ತಿದ್ದು, ಕರುಣಾಮಯಿ ಬುದ್ಧನೆಡೆಗೆ ಮುಖ ಮಾಡಿ ಆತನ ಸಂದೇಶದ ಸಾಂತ್ವನದ ಮಹಾಮೌನದ ತಂಪಿನಿಂದ ಅದನ್ನು ನಂದಿಸಬೇಕಾಗಿದೆ.

**-ಅಜ್ಜಪ್ಪ ಬಿರಡಿ** (ಕೃಷಿ ಬ್ಯಾಂಕಿಗ, ಸಮಾಜವಾದಿ)

## ನನ್ನ ಕಾವ್ಯದಲ್ಲಿ ನನ್ನ ಬುದ್ಧ...



**ಗೌ**ತಮ ಬುದ್ಧನನ್ನು ಅರಿಯುವುದಕ್ಕೆ ಅಧಿಕೃತ ದಾಖಲೆಗಳೆನಿಸಿರುವ ವಿನಯ ಪಿಟಕ, ಪುರಾಣ ಕಾವ್ಯವೆನಿಸಿದ ಅಶ್ವಘೋಷನ 'ಬುದ್ಧ ಚರಿತೆ' ಮುಖ್ಯವಾದ ಆಕರ ಗ್ರಂಥಗಳು. ಕವಲೊಡೆದ ಹೀನಯಾನ ಮಹಾಯಾನಗಳು ಬೌದ್ಧಧ'ರ್ಮದ ಇಳಿಮುಖಕ್ಕೆ ಕಾರಣವಾದಂತೆ ಕಾಣುತ್ತದೆ. ೧೨ನೇ ಶತಮಾನದ ನಾಗಾರ್ಜುನ ಬುದ್ಧನ ಬೋಧನೆಯ ಪರಿಭಾಷೆಯನ್ನು ವ್ಯಾಖ್ಯಾನಿಸಿದ ಅನುಭಾವಿ. ಇಂದು ಆಚರಣೆಯಲ್ಲಿರುವ ಬುದ್ಧಧರ್ಮ, 'ಧಮ್ಮಂ' ಅನ್ನು ವಿರೂಪಗೊಳಿಸಿದೆ ಎಂಬುದು ಬಹುಜನರ ಅಭಿಪ್ರಾಯ.

ಕಳೆದ ಶತಮಾನದಲ್ಲಿ ಲೆಫ್ಟಿಷ್ಟ್, ಸೋಶಿಯಲಿಸ್ಟ್ ರಾಜಕಾರಣಗಳು ಬೌದ್ಧಧರ್ಮವನ್ನು ಜನಪರವಾದ ಚಿಂತನೆಗೆ ಒಳಪಡಿಸಿವೆ. ಆದರೆ ಇವು ವರ್ಗ ಮತ್ತು ಜಾತಿ ರಾಜಕಾರಣದೊಂದಿಗೆ ತಳುಕು ಹಾಕಿಕೊಂಡು ಸಹಜವೂ, ಜೀವ ಪರವೂ ಆದ ಧರ್ಮವನ್ನು ವಿರೂಪಗೊಳಿಸುತ್ತಿರುವಂತೆ ಭಾಸವಾಗುತ್ತಿದೆ. ಇನ್ನು ಯಾತ್ರಾಸ್ಥಳಗಳಾದ ಬೋಧಗಯ, ಸಾರನಾಥ್, ಸಿಕ್ಕಿಮ್‌ಗಳಲ್ಲಿ ಧರ್ಮಾಚರಣೆ ವಿರೂಪಗೊಂಡು ನನ್ನಂಥ ಯಾತ್ರಾರ್ಥಿಗಳ ಉಸಿರುಕಟ್ಟಿಸಿ ಹೊರದೂಡುತ್ತವೆ.

ಕನ್ನಡದಲ್ಲಿ ಬುದ್ಧನನ್ನು ಕುರಿತಾದ ಕಾವ್ಯ ನಾಟಕಗಳು, ಜಾತಕ ಕಥೆ ಕೃತಿಗಳು ಕಳೆದ ಶತಮಾನದಲ್ಲಿ ಹೇರಳವಾಗಿವೆ. ಹೆಚ್ಚಿನವು ಬುದ್ಧಚರಿತೆ ಪುರಾಣ ಕಾವ್ಯದ ನೆರಳುಗಳೇ ಆಗಿವೆ. ಕಳೆದೆರಡು ದಶಕಗಳಲ್ಲಿ ನಾಗಾರ್ಜುನನನ್ನು ಕುರಿತ ಲೇಖನ, ಕೃತಿಗಳು ಬುದ್ಧಿಜೀವಿಗಳ ಗಮನ ಸೆಳೆದಿವೆ. ಲೌಕಿಕ ಲಾಭಕ್ಕಾಗಿ ಬೌದ್ಧಧರ್ಮ ಮತಾನುಯಾಯಿಗಳು ಹೆಚ್ಚುತ್ತಿದ್ದಾರೆ.

ಇವುಗಳನ್ನೆಲ್ಲಾ ಸ್ವಲ್ಪಮಟ್ಟಿಗೆ ಅಧ್ಯಯನಮಾಡುತ್ತಾ, ಅವಲೋಕಿಸುತ್ತಾ ಬಂದಿರುವ ನನ್ನ ಸಂವೇದನೆ ಪರಿಭಾವಿಸಿದ ಬುದ್ಧನನ್ನು, ನಾಲ್ಕಾರು ಕವಿತೆಗಳಲ್ಲಿ ಕಾಣಿಸಿರುವುದು ಹೀಗೆ: *'ಕಪಿಲವಸ್ತುವನು ಬಿಟ್ಟ ಮೊದಲ ದಿನ/ಬೊಗಸೆ ಬೊಗಸೆ ಕುಡಿದು ನದಿಯ ಜಲ/ಹಸಿವನೆದುರಿಸಿದ ಮೊದಲದಿನ'*. ಇದಕ್ಕೂ ಮುಂಚೆ ಚನ್ನಜ್ಜನೊಡನೆ ಕಂಡಿರಬಹುದಾದ ಬದುಕಿನ ಕ್ರೂರ ವಾಸ್ತವ ಚಿತ್ರಗಳ ಜೊತೆಗೆ ನಿಸರ್ಗ, ಪ್ರಾಣಿ ಪಕ್ಷಿಗಳೊಂದಿಗಿನ ಅನುಸಂಧಾನದಿಂದ ಪಡೆದ ಸಹಜ ಲೋಕಾನುಭವವೇ ಅವನ ಬೋಧಿಗೆ ಜೀವಪರವಾದ ನಿಲುವು ಬರಲು ಸಾಧ್ಯವಾಯಿತು. ಸುಮಾರು ಏಳು ವರ್ಷ ಕಾಡು ಮೇಡಿನಲ್ಲಿ ನಿರಾಹಾರ-ಧ್ಯಾನ-ತಪಸ್ಸಿನಿಂದ ದೊರೆಯದ ಬೋಧಿ ಸುಜಾತೆ ನೀಡಿದ ಅಂತಃಕರಣದ ಊಟದ ನಂತರ ಸಿದ್ಧಿಸಿತು. ಭವಜೀವ ಪರವಾದ ಬೋಧಿಯನ್ನು ಪಡೆದನು. ರಾಜಧಾನಿಯ ಅಂಚಿನ ಕೇರಿಯ ಜಲಗಾರ *'ಕಾಯಕದಲ್ಲಿ ನಿರತನಿರುವ'* ಕೊಳಕು ಮೈಯ್ಯ ಸುನೀತನನ್ನು *'ಮಯ್ಯ ಬೆವರ ಜಳಕದಿಂದ ಬಡಿವ ಎದೆಗೆ ಎದೆಕೊಟ್ಟು ಕಣ್ಣಲ್ಲಿ ಕಣ್ಣಿಟ್ಟು/ನೀನು ಪುನೀತ'* ಎಂದು ಬುದ್ಧನಾಡಿದ ಮಾತಿಗೆ *'ಹಕ್ಕಿಯುಲಿ ಓಗೊಟ್ಟಿತು/ಕೇರಿ ಹುಂಜವು ಕೊ ಕ್ಕೋ ಕೂಗುತ ಜಗಕೆ ಸೋಜಿಗ ಸಾರಿತು/ಮಗಧದೆದೆಯಲ್ಲಿ ನೆಟ್ಟ ಮಾತು ಮಹಲುಗಳಲಿ ಚಿಟಗುಟ್ಟಿತು/ ನಗರದಂಚಿನ ಕೇರಿಗಳಲಿ ಮೂಡಿದ ಮುಂಬೆಳಕಿಗೆ ಕಣ್ಣು ಫಳ ಫಳ ಹೊಳೆದವು, ಮೂಕ ಎದೆಗಳು ಮಿಡಿದವು'*.



ಬುದ್ಧನ ನಗು, ಮಹಾಮೌನ, ಶೂನ್ಯದ ಪರಿಕಲ್ಪನೆ , ಹುಟ್ಟು - ಬದುಕು- ಸಾವಿನ ಪ್ರಾಕೃತಿಕ ಪರಿಜ್ಞಾನ ಬುದ್ಧ ದರ್ಶನದ ರೂಪಕ ಕಾವ್ಯದಂತಿದೆ. ಅದ್ದರಿಂದಲೇ *'ಬೋಧಿ ಪಲ್ಲವದಿಂದ/ಪುಟಿದ ಪ್ರೀತಿಯ ನಗು/ ಹುಣ್ಣಿಮೆಯ ಹಾಲು ಹೊಳೆ/ ಹೊನಲಾದ ಜೀವ ನಗು/ ಅಂಗುಲಿಯ ಮಾಲನಗೆ/ ಮಲ್ಲಿಗೆಯ ಮಾಲೆ ನಗು/ ವಸಂತದ ಹಸಿರು ನಗು/ ಸಂತನ ಕರುಣೆ ನಗು/ ಎದೆ ಹಾಲು ಹುಣ್ಣಿಮೆ ಶಾಖ'* ದಂತಿದೆ. ಇನ್ನು ಅವನ ಮೌನ: *'ಗಿಡ ಬೆಡಗಲಿ ಮಿಂದೆದ್ದವು/ಮೌನದ ಈ ಸದ್ದಿನಲಿ / ಜಗದೆದೆಯೊಳು ಜಾಗರವು/ ಮುಗಿಲ ಹಕ್ಕಿಯ ಮುಂಗೊರಳಲಿ'* ಆಗಿದೆ. ಸಾವಿಲ್ಲದ ಮನೆಯ ಸಾಸುವೆಯ ತರಲು ಹೇಳಿದ ಪ್ರಸಂಗ ಹುಟ್ಟು- ಸಾವಿನ ಬಗ್ಗೆ ತಿಳಿಯಹೇಳಿದ ಪ್ರಕೃತಿ ಧರ್ಮವಾಗಿದೆ. ವೀಣಾವಿಶಾರದ ಶ್ರೋಣನಿಗೆ ವಿರಕ್ತ ಬದುಕಿನ ಅಸಾರ್ಥಕತೆಯಬಗ್ಗೆ ತಿಳಿಯಹೇಳಿದಾಗ: *'ವೀಣೆಯ ತಂತಿಯನ್ನು ಸಡಿಲಗೊಳಿಸಿದರು/ಬಿಗಿಗೊಳಿಸಿದರೂ ಸುನಾದಹೊರಡುವುದಿಲ್ಲವೋ ಹಾಗೆ ನನ್ನ ಜೀವನಕ್ಕು ಅನ್ವಯಿಸುವುದಾದರೆ'* ಎಂದಾಗ *'ಭಾವ ದೇದೀಪ್ಯವಾಗಿ/ ಉತ್ಸಾಹ ಮರಳಿ/ವೀಣೆಯನ್ನು ಶೃತಿಮಾಡಿ ನುಡಿಸುತ್ತಾ/ ನಾದ ಜೀವದಲಿ ತೆರದು ಅಂತಃಕರಣ/ಅನುರಾಗಿಯಾದಶ್ರೋಣ'*ನ ಅನುಭವದಂತೆ ಜೀವಪರವಾದ 'ಮಾನುಷಿ ಬುದ್ಧನ' 'ಮಧ್ಯಮಮಾರ್ಗ'ದಲ್ಲಿರುವವನು ನಾನು.

**-ಸತ್ಯನಾರಾಯಣ ರಾವ್ ಅಣತಿ**(ಕವಿ, ನಾಟಕಕಾರ)

## ಸಾಹಿತ್ಯ-ಸಂಸ್ಕೃತಿ-ನಾಟಕ ಇತ್ಯಾದಿ

# ರಂಗದ ಮೇಲೆ ಮೆರೆದ ಕಡಿದಾಳು ಶಾಮಣ್ಣ !



**ಬಿ.**ಚಂದ್ರೇಗೌಡ ನಮ್ಮ ನಡುವಿನ ಒಂದು ವಿಶಿಷ್ಟ ಪ್ರತಿಭೆ. ಹಲವಾರು ವರ್ಷಗಳಿಂದ ಸರ್ಕಾರಿ ಸೇವೆಯ ಮೇಲೆ ಅಜ್ಜಂಪುರ, ಚಿಕ್ಕಮಗಳೂರು ಶಿವಮೊಗ್ಗ ಇತ್ಯಾದಿ ಪಟ್ಟಣಗಳಲ್ಲಿ ವಾಸವಿದ್ದರೂ, ನಾಗಮಂಗಲದ ಕಡೆಯ ತಮ್ಮ ಮೂಲ ಹಳ್ಳಿಯೊಂದಿಗೆ ನಿರಂತರ ಮತ್ತು ಜೀವಂತ ಸಂಪರ್ಕವಿಟ್ಟುಕೊಂಡು ಬಂದವರು. ಬಯಲು ಸೀಮೆಯ ಬದುಕಿನ ಎಲ್ಲ ಬಣ್ಣ ಬೆಡಗುಗಳನ್ನೂ ಅಲ್ಲಿನ ಭಾಷೆಯ ಎಲ್ಲ ಇನಿ-ಬನಿಗಳನ್ನೂ ಕಾಪಾಡಿಕೊಂಡು ಬರುತ್ತಾ, 'ಲಂಕೇಶ್ ಪತ್ರಿಕೆ'ಯಲ್ಲಿ ಸತತವಾಗಿ ಇಪ್ಪತ್ತು ವರ್ಷಗಳ ಕಾಲ 'ಬಯಲುಸೀಮೆ ಕಟ್ಟೆ ಪುರಾಣ' ಬರೆದು ರಾಜ್ಯಾದ್ಯಂತ ಮನೆ ಮಾತಾದವರು.

ಚಂದ್ರೇಗೌಡರೀಗ ನಾಟಕಕಾರರೂ ಹೌದು. ಅವರ ಈವರೆಗಿನ ಐದು ನಾಟಕಗಳ ಪೈಕಿ ಮೂರನ್ನು ಕಳೆದ ಏಪ್ರಿಲ್ ೫, ೬ ಹಾಗೂ ೭ರಂದು ಶಿವಮೊಗ್ಗದ ಕುವೆಂಪು ರಂಗ ಮಂದಿರದಲ್ಲಿ ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದಲ್ಲಿ 'ಚಂದ್ರೇಗೌಡ ನಾಟಕೋತ್ಸವ' ಎಂಬ ಹೆಸರಿನಲ್ಲಿ ಪ್ರದರ್ಶಿಸಲಾಯಿತು. ಶಿವಮೊಗ್ಗಾದ ಉತ್ಸಾಹಿ ರಂಗಕರ್ಮಿ ಸಾಸ್ವೆಹಳ್ಳಿ ಸತೀಶರ 'ಹೊಂಗಿರಣ' ನಾಟಕ ತಂಡ 'ಹೊಂಗಿರಣೋತ್ಸವ' ಎಂದು ಇದನ್ನು ಆಯೋಜಿಸಿತ್ತು.

ಮೊದಲ ನಾಟಕ ಪಿ. ಲಂಕೇಶರ 'ಕಲ್ಲು ಕರಗುವ ಸಮಯ' ಕಥೆಯನ್ನು ಆಧರಿಸಿದ್ದು, ಪ್ರಸ್ತುತಿ: ಸಾಗರದ ಸ್ಪಂದನ ರಂಗತಂಡದ್ದು. ನಿರ್ದೇಶನ ಅದೇ ತಂಡದ ಪ್ರತಿಭಾ ರಾಘವೇಂದ್ರ ಅವರದ್ದು. ಲಂಕೇಶರ ಈ ಕಥೆ ಮನುಷ್ಯನ ಪ್ರೀತಿ ಮತ್ತು ಕ್ರೌರ್ಯಗಳ ಹಿಂದಿನ ಸಂಕೀರ್ಣತೆಗಳನ್ನು ಸೂಕ್ಷ್ಮವಾಗಿ ಹಿಡಿದಿಡುತ್ತದೆ. ಅದನ್ನು ನಾಟಕ ಮಾಡಲು ಲಂಕೇಶರ ಪ್ರತಿಭೆಗೆ ಮಾತ್ರ ಸಾಧ್ಯವೇನೋ! 'ಕುರುಡು ಕಾಂಚಾಣ' ಕಥೆ ಅವರಿಂದ 'ಗಿಳಿಯು ಪಂಜರದೊಳಿಲ್ಲ' ನಾಟಕವಾದ ಹಾಗೆ. ಆದರೆ ಇಲ್ಲಿ ನಾಟಕ, ರೂಪಾಂತರ ಮತ್ತು ಅದರ ರಂಗಾವತರಣ ಈ ಎರಡೂ ನೆಲೆಗಳ ಕಸುಬುದಾರಿಕೆ ಜನಪ್ರಿಯ ಮಾರ್ಗಗಳನ್ನು ಹಿಡಿದು ಸೋತಿದೆ ಎಂದೇ ಹೇಳಬೇಕು. ಲಂಕೇಶರ ಕಥೆ ವ್ಯಕ್ತಿ ಮತ್ತು ಸಮಾಜ ಈ ಎರಡರ ಅಂತರಂಗಗಳನ್ನೂ ಒಟ್ಟಿಗೇ ಶೋಧಿಸುವ ಪ್ರಯತ್ನ ಮಾಡಿದರೆ, ನಾಟಕ ರೂಪ ಅದರ ಪರಿಣಾಮಗಳನ್ನಷ್ಟೇ ಸಮಾಜದ ಹೊರ ಚಹರೆಗಳ ನೆಲೆಯಲ್ಲಿ, ಅದೂ ಲಘುಶೈಲಿಯಲ್ಲಿ ಹಿಡಿದಿಡಲು ಯತ್ನಿಸಿ ಕಥೆಯ ಒಟ್ಟು ಘನತೆಯನ್ನೇ ಕಳೆದಿದೆ. ಪ್ರತಿಭಾ ಅವರು ಭಾವಗೀತಾತ್ಮಕ ರಾಗಾಲಾಪನೆಗಳ ಮೂಲಕ ಈ ದೌರ್ಬಲ್ಯ ನೀಗಲು ಹೋಗಿ ಕಥೆಯ ಸೂಕ್ಷ್ಮಗಳನ್ನು ಇನ್ನಷ್ಟು ಸ್ಥೂಲಗೊಳಿಸಿಬಿಟ್ಟಿದ್ದಾರೆ.

ಆದರೆ ಎರಡನೇ ದಿನದ ನಾಟಕ 'ಕಡಿದಾಳು ಶಾಮಣ್ಣ' ಈ ಎಲ್ಲ ವೈಫಲ್ಯ ಮತ್ತು ನಿರಾಶೆಗಳನ್ನು ನೀಗುವಂತಹ ಸಫಲ ಪ್ರಯತ್ನವಾಗಿತ್ತು. ನಾಟಕ ರಚನೆ ಮತ್ತು ನಿರ್ದೇಶನ ಈ ಎರಡೂ





ನೆಲೆಗಳಲ್ಲಿ. ಸಮಾಜವಾದಿ ರೈತ ನಾಯಕ ಕಡಿದಾಳು ಶಾಮಣ್ಣ ಅವರ ಸಾರ್ವಜನಿಕ ಬದುಕನ್ನು ಕುರಿತು ಚಂದ್ರೇಗೌಡರು ಶಾಮಣ್ಣ ಮತ್ತು ಅವರ ಒಡನಾಡಿಗಳ ಬರಹಗಳನ್ನು ಆಧರಿಸಿ ರೂಪಿಸಿರುವ ಈ ನಾಟಕ ಅವರ ವ್ಯಕ್ತಿತ್ವವನ್ನು, ಅವರು ಕೇಂದ್ರದಲ್ಲಿದ್ದ ಸಮಾಜವಾದಿ ಮತ್ತು ರೈತ ಚಳುವಳಿಯ ಸಂದರ್ಭಗಳ ಎಲ್ಲ ಸೂಕ್ಷ್ಮ ಮತ್ತು ಸ್ವಾರಸ್ಯಗಳೊಂದಿಗೆ ನಾಟಕೀಯವಾಗಿ ಕಟ್ಟಿಕೊಡುತ್ತದೆ. ನಮ್ಮ ಕಣ್ಣ ಮುಂದೆ ಇರುವ ವ್ಯಕ್ತಿ ಮತ್ತು ನಮ್ಮ ಕಣ್ಣ ಮುಂದೆ ನಡೆದ ಚಳುವಳಿಗಳನ್ನು ರಂಗದ ಮೇಲೆ ಜೀವಂತಗೊಳಿಸುವುದು ಸಾಹಸದ ಕೆಲಸವೇ ಸರಿ. ಅದಿಲ್ಲಿ ಸಾಕಷ್ಟು ಯಶಸ್ವಿಯಾಗಿದ್ದರೆ ಅದಕ್ಕೆ ಚಂದ್ರೇಗೌಡರಷ್ಟೇ ಅದನ್ನು ರಂಗದ ಮೇಲೆ ಬಹು ಪರಿಣಾಮಕಾರಿಯಾಗಿ ತಂದ ನಿರ್ದೇಶಕ ಹೊನ್ನಾಳಿ ಚಂದ್ರಶೇಖರ್ ಕೂಡ ಕಾರಣರಾಗಿದ್ದಾರೆ. ಮೂಲ ನಾಟಕವನ್ನು ನಾನು ಕೆಲ ವರ್ಷಗಳ ಹಿಂದೆ ಬಿಡುಗಡೆ ಮಾಡಿದವನಾಗಿ ಹೇಳುವುದಾದರೆ, ಮೂಲದಲ್ಲಿದ್ದ ಚಂದ್ರೇಗೌಡರ ಎಂದಿನ ಜನಪ್ರಿಯ ಪಟ್ಟುಗಳನ್ನು ಚಂದ್ರಶೇಖರ್ ಹಿನ್ನೆಲೆಗೆ ಸರಿಸಿ ವಸ್ತುವನ್ನು ಕುರಿತ ತಮ್ಮದೇ ಒಂದು ಸಮಗ್ರ ನೋಟ ಮತ್ತು ರಂಗ ಕೌಶಲ್ಯಗಳ ಮೂಲಕ ಒಟ್ಟಾರೆ ಈ ಪ್ರಯೋಗವನ್ನು ಒಂದು ಹೊಸ ಎತ್ತರಕ್ಕೆ ಕೊಂಡೊಯ್ದಿದ್ದಾರೆ. ಆದರೂ ಇಲ್ಲಿ ಶಾಮಣ್ಣನವರ ವ್ಯಕ್ತಿತ್ವ (ಬಹುಶಃ ಶಾಮಣ್ಣನವರಿಗೇ ಮುಜುಗರ ತರುವಷ್ಟು) ವೈಭವೀಕೃತವಾಗಿದೆ ಮತ್ತು ಎಂಡಿಎನ್ ಅವರ ವ್ಯಕ್ತಿತ್ವ, ಅವರ ಪಾತ್ರ ನಿರೂಪಣೆಯ ಸಮಗ್ರತೆಯ ಕೊರತೆಯಿಂದಾಗಿ ಒಂದು ವಾರೆ ನೋಟಕ್ಕೆ ಸಿಕ್ಕಿದೆಯೇನೋ ಎಂಬ ಅಭಿಪ್ರಾಯ ಮೂಡದಿರದು.



ಇನ್ನು ಮೂರನೇ ದಿನದ 'ಬಯಲು ಸೀಮೆ ಕಟ್ಟೆ ಪುರಾಣ'ವನ್ನು ಯಾವುದೇ ರೀತಿಯಲ್ಲಿ ನಾಟಕವೆಂದು ಕರೆಯುವುದು ಕಷ್ಟ. ಚಂದ್ರೇಗೌಡರು ತಮ್ಮ ಜನಪ್ರಿಯ ಅಂಕಣಗಳಲ್ಲಿನ ತಮ್ಮ ಸಾಮಾಜಿಕ ಮತ್ತು ರಾಜಕೀಯ ವಿಡಂಬನೆಗಳನ್ನು ಸಮಕಾಲೀನ ರಾಜಕೀಯ ಸಂದರ್ಭಗಳ ಜನಪ್ರಿಯ 'ಜೋಕು'ಗಳೊಂದಿಗೆ ಬೆರಕೆ ಮಾಡಿ ಒಂದು ದೃಶ್ಯಾವಳಿಯನ್ನು ಕಟ್ಟಿಕೊಟ್ಟಿದ್ದಾರೆ. ಆ ಮೂಲಕ ಮಹಾ ಜನತೆಯು ಇಲ್ಲಿ ವಿಡಂಬನೆಗೆ ಒಳಗಾಗಿರುವ ದುಷ್ಟ ಮತ್ತು ಭ್ರಷ್ಟ ಸಾಮಾಜಿಕ ಮತ್ತು ರಾಜಕೀಯ ಸಂದರ್ಭಗಳಲ್ಲಿನ ತಮ್ಮ ಸಕ್ರಿಯ ಪಾತ್ರವನ್ನು ತಾವೇ ಉದಾರವಾಗಿ ಕ್ಷಮಿಸಿಕೊಂಡು ನಕ್ಕು ನಲಿದು ಹೋಗಲು ಅವರು ಇಲ್ಲಿ ಅವಕಾಶ ಮಾಡಿಕೊಟ್ಟಿದ್ದಾರೆ. ಪ್ರಸ್ತುತಿ: 'ನಮ್ ಟೀಮ್', ಶಿವಮೊಗ್ಗ. ನಿರ್ದೇಶನ ಅದೇ ತಂಡದ ಎಸ್.ಆರ್. ಗಿರೀಶ್ ಎಂದಷ್ಟೇ ಹೇಳಿದರೆ ಸಾಕೆಂದು ಕಾಣುತ್ತದೆ. ಚಂದ್ರೇಗೌಡರ ಹಾಸ್ಯ ಬರವಣಿಗೆಯ ಹಿಂದೆ ಇರುವುದೆಂದು ಹೇಳಲಾಗುವ 'ಆತ್ಮಶೋಧನೆ'ಯ ಆಯಾಮ ಸಂಪೂರ್ಣ ಮರೆಯಾಗಿರುವುದು ಈ ಪ್ರಯತ್ನದ ಒಂದು ವಿಷಾದನೀಯ ಸಂಗತಿ ಎಂಬುದನ್ನೂ ಇಲ್ಲಿ ಕಾಣಿಸಬೇಕು.

**-ಡಿ.ಎಸ್.ನಾಗಭೂಷಣ**

## ಪುಸ್ತಕಾವಲೋಕನ

**ಪು: ಹುಳಿ ಮಾವು ಮತ್ತು ನಾನು ಲೇ: ಇಂದಿರಾ ಲಂಕೇಶ್**
**ಪ್ರ: ಲಂಕೇಶ್ ಪ್ರಕಾಶನ ಪು : ೧೯೦ ಬೆಲೆ : ರೂ.೧೫೦/-**

### ಪ್ರೀತಿ ಪರಿತಾಪಗಳ ಸ್ತ್ರೀಸಂಕಥನ




**ಗೌ**ರಿಯವರ ಲಂಕೇಶ್ ಪತ್ರಿಕೆಯಲ್ಲಿ 'ಹುಳಿ ಮಾವು ಮತ್ತು ನಾನು' ಧಾರಾವಾಹಿಯಾಗಿ ಬಂದಾಗಲೇ ಕುತೂಹಲದಿಂದ ಪ್ರತಿವಾರವೂ ಬಿಡದೆ ಓದಿ, 'ಅರೆ! ಎಷ್ಟು ಸೊಗಸಾಗಿ ಬರೆದಿದ್ದಾರಲ್ಲಾ... ಅವರಿಗೆ ಅಭಿನಂದನೆ ಹೇಳಬೇಕು' ಅಂದುಕೊಂಡಿದ್ದೆ. ಇದೀಗ ಅವರ ಆತ್ಮ ಕಥಾನಕ ಪುಸ್ತಕ ರೂಪದಲ್ಲಿ ಬಂದಿದೆ. ಮತ್ತೆ ಮತ್ತೆ ಓದಿದೆ. ನನ್ನ ಪರಿಚಯದವರಿಗೂ ಓದಿ(ಕೊಂಡು ಓದಿ) ಎಂದು ಶಿಫಾರ್ಸು ಮಾಡಿದೆ. ನನ್ನ ಗೆಳತಿಯರು ಅದರಲ್ಲೂ ಸಾಮಾನ್ಯ ಗೃಹಿಣಿಯರು ಪುಸ್ತಕ ಓದಿ 'ಪಾಪ! ಎಷ್ಟು ಕಷ್ಟಪಟ್ಟಿದ್ದಾರೆ' ಎಂದು ನೊಂದುಕೊಂಡರು. 'ಪುಸ್ತಕ ಕೆಳಗಿಡಲು ಮನಸ್ಸೇ ಬರಲಿಲ್ಲ. ಪೂರಾ ಓದಿದೆ' ಎಂದು ಒಬ್ಬರು ಹೇಳಿದರೆ, ಮತ್ತೊಬ್ಬ ಗೆಳತಿ 'ನಾನು ಸಾಮಾನ್ಯವಾಗಿ ಪುಸ್ತಕ ಓದುವುದಿಲ್ಲ. ಆದರೆ ಈ ಪುಸ್ತಕ ನೀವು ಹೇಳಿದಿರಿ ಎಂದು ಓದಿದೆ. ಓದಿ ಗಾಬರಿಯಾದೆ!' ಎಂದರು. ಮತ್ತೊಬ್ಬ ಗೆಳತಿ 'ಇಂದಿರಾ ಅವರಲ್ಲಿ ನನ್ನನ್ನೇ ಕಂಡೆ' ಎಂದಳು.

ಹೀಗೆ ಸಾಮಾನ್ಯ ಓದುಗರನ್ನೂ ಇಂದಿರಾ ಅವರು ಮುಟ್ಟಿರುವುದಕ್ಕೆ ಕಾರಣ, ಬಹುಶಃ ಅವರ ನೇರ, ಪ್ರಾಮಾಣಿಕ, ಬಡಿವಾರವಿಲ್ಲದ ಸರಳ ಬರವಣಿಗೆ. 'ನಾನೊರ್ವ ಹಳ್ಳಿಯ ಹುಡುಗಿ, ಸಾಮಾನ್ಯ ಹೆಂಗಸು' ಎಂದು ಮುಚ್ಚು ಮರೆಯಿಲ್ಲದೆ ತಮ್ಮ ಅಂತರಂಗವನ್ನು ಸೀದಾ ಸೀದಾ ಆಗಿ ಬಿಚ್ಚಿಡುವುದರಿಂದ ಮತ್ತವರ ಬರವಣಿಗೆ ಎದುರು ಬದುರು ಕೂತು ಮಾತನಾಡಿದಂತೆ;ಅಂದರೆ ಕಷ್ಟ ಸುಖ ಹೇಳಿಕೊಳ್ಳುವಂತೆ ಇರುವುದರಿಂದ ಒಂದು ಸರಳ ಸ್ವಾಭಿಮಾನಿ ಹೆಣ್ಣು ಜೀವದೊಂದಿಗೆ ಒಡನಾಡಿದ ಅನುಭವ ಓದುಗರಿಗೆ ದೊರೆಯುತ್ತದೆ.

ಇದು, ಹುಳಿ ಮಾವಿನ ಘಮಕ್ಕೆ ಮಾರು ಹೋಗಿ ಅದನ್ನು ಪಡೆದೂ ಪಡೆದಿಲ್ಲದವಳಾಗಿ; ಇತ್ತ ಸವಿಯಲಾಗದೆ, ಅತ್ತ ಎಸೆಯಲಾಗದೆ ಕೊನೆ ತನಕ ಉಪ್ಪಿನ ಜಾಡಿಯಲ್ಲಿ ಹಾಕಿಟ್ಟು ಜತನದಿಂದ ಕಾಪಾಡಿಕೊಂಡ ಜಾಣ ಹೆಣ್ಣೊಬ್ಬಳ ಕುತೂಹಲಕಾರಿ ಕಥಾನಕವಾಗಿದೆ. ಈ ಕಥಾನಕವನ್ನು ಎರಡು ರೀತಿಯಲ್ಲಿ ಓದಬಹುದಾಗಿದೆ. ಇಂದಿರಾ ಅವರನ್ನೇ ಈ ಕಥಾನಕದ ಕೇಂದ್ರವಾಗಿಟ್ಟುಕೊಂಡು ಓದಿದರೆ ಹಳ್ಳಿಯ ಹುಡುಗಿಯೊಬ್ಬಳು ತನ್ನ ಮನೆ ಮಂದಿಯ ಹಿತೋಪದೇಶಗಳನ್ನು ಕಡೆಗಣಿಸಿ ಒರಟು ಸ್ವಭಾವದ ವಿದ್ಯಾವಂತ ಹುಡುಗನೊಬ್ಬನನ್ನು ಅವನ ಮನೆ ಮಂದಿ ಆಕೆಯನ್ನು ಇಷ್ಟಪಡದಿದ್ದರೂ ವರಿಸಿ ಬಾಳಿನೊಂದಿಗೆ ಬಡಿದಾಡಿ ಆ ಬದುಕಿನಿಂದಲೇ ಪಾಠ ಕಲಿತು, ದಾಂಪತ್ಯ ಹಳಿ ತಪ್ಪಿದಾಗ ಗೋಳಾಡುತ್ತಾ ಕೂರದೆ ದೃಢವಾಗಿ ನಿಂತು ತನ್ನ ದಾರಿ ಅರಸಿಕೊಂಡು ಯಶಸ್ವಿ ಉದ್ಯಮಿಯಾಗಿ ಅರಳಿ ಕುಟುಂಬ ಕಟ್ಟಿಕೊಳ್ಳುವ ಯಶೋಗಾಥೆ ಎನಿಸುವುದು.

ಲಂಕೇಶರನ್ನೇ ಈ ಕಥಾನಕದ ಕೇಂದ್ರವನ್ನಾಗಿ ಇಟ್ಟುಕೊಂಡು ಓದಿದರೆ, ಇಡೀ ತನ್ನ ಜೀವನವನ್ನೇ ಬರವಣಿಗೆಗೆ ತೆತ್ತುಕೊಂಡ ಪ್ರತಿಭಾವಂತ ಅರೆಹುಚ್ಚನೊಬ್ಬ ಸಾರ್ವಜನಿಕ ಜೀವನದಲ್ಲಿ ಯಶಸ್ವಿಯಾದರೂ, ಒಳ್ಳೆ ಸಂಸಾರಸ್ಥನಾಗದೆ ಹೆಂಡತಿ, ಮಕ್ಕಳ ಪ್ರೀತಿ, ಪರಿತಾಪಗಳೆರಡಕ್ಕೂ ಈಡಾಗುತ್ತಾ ಸಾಂಪ್ರದಾಯಿಕ ಕುಟುಂಬದ ಎಲ್ಲೆಗಳನ್ನು ಮೀರಿ ಸ್ವಚ್ಛಂದವಾಗಿ ಬದುಕಿದ ಕಥೆಯಾಗಿ ತೋರುವುದು.

'ನನ್ನ ಹೆಸರು ಇಂದಿರಾ' ಎಂದು ಕಥಾನಕ ಶುರು ಮಾಡುವ ಲೇಖಕಿ, 'ಅವರ ಮುಂದೆ ನಾನೇನೂ ಅಲ್ಲ. ಅವರು ನನ್ನನ್ನು ಮದುವೆಯಾಗಲು ಒಪ್ಪಿದ್ದೇ ನನ್ನ ಅದೃಷ್ಟ' ಎಂದು ಹೇಳವವರಾದರೂ, ಮದುವೆಯ ಆಮಂತ್ರಣ ಪತ್ರ ಸಿದ್ಧಪಡಿಸುವಾಗ 'ಎಲ್ಲರೂ ಲಂಕೇಶಪ್ಪ ಅಂದರೆ ರಾವಣ ಎಂತೆಲ್ಲ ಅಂತಾರೆ. ನನ್ನ ಹೆಸರು ಬದಲಾಯಿಸಲೇ?' ಎಂದು ದುಗುಡದಿಂದ ಗಂಡ ಕೇಳಿದಾಗ 'ಏನೂ ಬೇಡ ನಿಮಗೆ ಈ ಹೆಸರೇ ಚೆನ್ನಾಗಿದೆ' ಎಂದು ಹೇಳಿ ಲಂಕೇಶ್‌ರನ್ನು ಲಂಕೇಶ್ ಆಗಿಯೇ ಉಳಿಸಿ ಅವರ ವಿಭಿನ್ನ ವಿಲಕ್ಷಣ ಪ್ರಯೋಗಗಳಿಗೆ ತಾವೂ ಸೇರಿದಂತೆ ಇಡೀ ಕುಟುಂಬ ಬೆನ್ನೆಲುಬಾಗಿ ನಿಂತುದನ್ನು ತಣ್ಣಗಿನ ಭಾಷೆಯಲ್ಲಿ ಚಿತ್ರಿಸುತ್ತಾ, ಕಥಾನಕವನ್ನು ಕುತೂಹಲಕಾರಿಗೊಳಿಸುತ್ತಾ ವಿಸ್ತರಿಸುವರು.

ಮೊಟ್ಟ ಮೊದಲಿಗೆ ಸಂಸಾರ ಹೂಡಿದಾಗಿನ ರಸ ನಿಮಿಷಗಳನ್ನು ಸ್ವಾರಸ್ಯಕರವಾಗಿ ನಿರೂಪಿಸುವ ಇಂದಿರಾ, ನಂತರದ ದಿನಗಳಲ್ಲಿನ ಲಂಕೇಶರ ಓಡಾಟ, ಖರ್ಚು, ಇಸ್ಪೀಟು, ಸಾಲ, ಜೂಜು-ಮೋಜು ಎಲ್ಲವನ್ನೂ ಬಣ್ಣಿಸುತ್ತಾ ಅದನ್ನೆಲ್ಲ ಸಹಿಸಿಕೊಂಡರೂ ಕೊನೆಗೊಂದು ದಿನ ಅವರು 'ನಿನ್ನನ್ನು ಬಿಟ್ಟಿರಲು ನನ್ನಿಂದ ಸಾಧ್ಯವಿಲ್ಲ. ನಾವಿಬ್ಬರೂ ಎಲ್ಲಿಗಾದರೂ ಹೋಗಿಬಿಡೋಣ. ನನಗೆ ಹೆಂಡತಿ ಮಕ್ಕಳು ಯಾರೂ ಬೇಡ. ನಾವಿಬ್ಬರೂ ಬಹು ದೂರ ಹೋಗೋಣ.' ಎಂದು ಯಾರೋ ವಯ್ಯಾರಿಗೆ ಬರೆದ ಪತ್ರದ ಚೂರು ಸಿಕ್ಕಿ ತಲ್ಲಣಗೊಳ್ಳುತ್ತಾರೆ. ಲಂಕೇಶರು ತಮಗೆ ಬರೆದಿದ್ದ ಪತ್ರ ಫೋಟೋ ಎಲ್ಲವುಗಳಿಗೆ ಬೆಂಕಿ ಹಚ್ಚಿ ತಾಳಿಯನ್ನು ಕಿತ್ತೊಗೆಯುತ್ತಾರೆ. ತನ್ನ ಕಾಲ ಮೇಲೆ ತಾನೇ ನಿಂತುಕೊಳ್ಳುವ ಪ್ರಯತ್ನದ ಫಲವಾಗಿ ಅವರು ಚಿಕ್ಕದಾಗಿ ಸೀರೆ ವ್ಯಾಪಾರ ಶುರು ಮಾಡಿ ಮನೆಯನ್ನೂ, ಮಕ್ಕಳನ್ನೂ ಸಂಭಾಳಿಸುತ್ತಾ ತಮ್ಮ ನಲವತ್ತೈದನೆಯ ವಯಸ್ಸಿನಲ್ಲಿಯೇ ನಿರುದ್ಯೋಗಿಯಾದ ಲಂಕೇಶರಿಗೆ ಊಟ ಕಾಣಿಸುವುದನ್ನು ನಿರ್ಲಿಪ್ತವಾಗಿ ಚಿತ್ರಿಸುತ್ತಾರೆ. ಇಂದಿರಾ ಅವರ ಕನಸು 'ಮಯೂರ ಟೆಕ್ಸ್‌ಟೈಲ್ಸ್' ರೂಪುಗೊಂಡ ಪರಿ, 'ಲಂಕೇಶ್ ಪತ್ರಿಕೆಯ ಉಬ್ಬರದ ದಿನಗಳು, ಸ್ಕೂಟರ್, ಕಾರ್ ಖರೀದಿಸಿ ಓಡಿಸಿದ್ದು, ತನ್ನಿಚ್ಛೆಯಂತೆ, ಆಸಕ್ತಿಗೆ ತಕ್ಕಂತೆ ಸ್ವಂತ ಮನೆ ಕಟ್ಟಿಸಿದ್ದು, ಮಕ್ಕಳನ್ನು ಸ್ವತಂತ್ರ ಮನೋಭಾವದೊಡನೆ ಬೆಳಸಿದ್ದು ಎಲ್ಲವನ್ನೂ ನಿರುದ್ವಿಗ್ನ ಭಾಷೆಯಲ್ಲಿ ಹೇಳುವರು

ಲಂಕೇಶ್ ತಮ್ಮ ಹೊಸ ಮನೆಯ ಗೃಹಪ್ರವೇಶದ ದಿನ ಹೋಮ ಹವನದ ಬದಲು 'ಗುಂಡು ಪಾರ್ಟಿ' ಏರ್ಪಡಿಸಿದ್ದನ್ನು ಹೇಳುವ ಮೂಲಕ, 'ಇತ್ತ ಬುದ್ಧಿಯೂ ಇಲ್ಲ, ಅತ್ತ ಸೌಂದರ್ಯವೂ ಇಲ್ಲ ಏನೆಂದು ಮೆಚ್ಚಿಕೊಂಡರೋ!' ಎಂದು ಲಂಕೇಶ್ ತಮ್ಮ ಗೆಳತಿಯರನ್ನು ಆರಿಸಿಕೊಂಡ ಬಗ್ಗೆ ಕಾಮೆಂಟ್ ಮಾಡುವ ಮೂಲಕ ಲಂಕೇಶರ ಮತ್ತು ತಮ್ಮ ಅಭಿರುಚಿ ತೀರಾ ಭಿನ್ನವಾದದ್ದು ಎಂಬುದನ್ನು ಸೂಚಿಸುವುದರ ಜೊತೆ ಜೊತೆಯಲ್ಲೇ, ಹಬ್ಬ ಹರಿದಿನಗಳಲ್ಲಿ ತುಪ್ಪ-ಸೀಕರಣೆ ಜೊತೆ ಅವರ ಪ್ರೀತಿಯ ಹೋಳಿಗೆಯನ್ನು ಉಣಿಸುವ ರೀತಿ-ನೀತಿಗಳಲ್ಲೇ ತಮ್ಮಲ್ಲಿ ಲಂಕೇಶರ ಬಗ್ಗೆ ಹುದುಗಿದ್ದ ಆಳವಾದ ಪ್ರೀತಿಯನ್ನು ಕಾಣಿಸುವರು. ಲಂಕೇಶರ ಪ್ರತಿ ಹುಟ್ಟು ಹಬ್ಬದ ದಿನ ಅವರಿಗೆ ಇಂದಿರಾ ಹೊಸ ಬಟ್ಟೆ ಹೊಲಿಸಿ ಕಪಾಟಿನಲ್ಲಿ ಇಡುವ ಸಂದರ್ಭವನ್ನೂ ಇಲ್ಲಿ ಉಲ್ಲೇಖಿಸಬಹುದು.

ಮಗನಾಗಿ, ಗಂಡನಾಗಿ, ತಂದೆಯಾಗಿ, ಎಲ್ಲಕ್ಕಿಂತ ಹೆಚ್ಚಾಗಿ ಒಬ್ಬ ಮನುಷ್ಯ ಮಾತ್ರನಾಗಿ ಲಂಕೇಶ್ ಅವರು ಹೇಗಿದ್ದರು ಎಂಬುದನ್ನು ಸರಳ, ಪಾರದರ್ಶಕ ಶೈಲಿಯಲ್ಲಿ ಚಿತ್ರಿಸಿರುವುದೇ ಈ ಆತ್ಮ ಕಥಾನಕದ ಹೆಚ್ಚುಗಾರಿಕೆಯಾಗಿದೆ. ಹಾಗಾಗಿ 'ನನ್ನ ಹುಳಿ ಮಾವು ಮಾತ್ರ ತನ್ನ ಪ್ರೀತಿಯ ಹುಳಿ ಮಾವಿನ ಮರದಡಿ ಚಿರನಿದ್ರೆಯಲ್ಲಿದ್ದಾರೆ' ಎಂಬ ಪುಸ್ತಕದ ಕೊನೆಯ ವಾಕ್ಯವನ್ನು ಮುಗಿಸಿದಾಗ ಅರಿವಿಲ್ಲದಂತೆಯೇ ನಮ್ಮ ಮನಸ್ಸು ಆರ್ದ್ರಗೊಳ್ಳುವುದು. 'ಅರೆ! ಇಷ್ಟು ಬೇಗ ಎಲ್ಲ ಮುಗಿದು ಹೋಯಿತೇ!' ಎಂದೆನ್ನಿಸದಿರದು.

**-ಸವಿತಾ ನಾಗಭೂಷಣ**

ಪತ್ರಿಕೆಗೆ ಶುಭವನ್ನು ಕೋರುವ,

ಕರ್ಣಾಟಕ ಬ್ಯಾಂಕ್,
ಸಾಗರ

ನಿಮ್ಮ ಕುಟುಂಬದ ಬ್ಯಾಂಕ್
ಭಾರತದಾದ್ಯಂತ!

'ಹೊಸ ಮನುಷ್ಯ'ಕ್ಕೆ ಶುಭಾಶಯಗಳು

ದಿ ಬೆಂಗಳೂರು ಕಮರ್ಶಿಯಲ್
ಟ್ರಾನ್ಸಪೋರ್ಟರ್ಸ್ ಕ್ರೆಡಿಟ್
ಕೋ–ಆಪರೇಟೀವ್ ಸೊಸೈಟಿ ಲಿ.

ನಂ. ೧, ೧ನೇ ಕ್ರಾಸ್,
ಚಿಕ್ಕಣ್ಣ ಗಾರ್ಡನ್ಸ್, ಶಂಕರಪುರಂ
ಬೆಂಗಳೂರು-೫೬೦೦೦೪





## ತಿಂಗಳ ಸಾಲುಗಳು...



ತಿಳಿದದ ಅಂದ ಕೂಡಲೇ ಸೊಕ್ಕು ತಲೆಗೇರ್ತದ... ಮತ್ತ ತಿಳಕಂಬೋದು ಇನ್ನೂ ಅದ ಅನ್ನಿಸಿದಾಗ ಸೊಕ್ಕು ತಲೆಯಿಂದ ಕೆಳಗ ಇಳೀತದ... ತಲೆಗೆ ಏರೋದು ಮತ್ತ ಇಳಿಯೋದು ಇದರ ಮಧ್ಯದಾಗ ಇರ್ತದ ತಿಳಕಂಬೋದು. ತಿಳಕಂಬೋದು ಇನ್ನೂ ಅದ ಅಂತ ಅನಸೋದೇ ನಿಜವಾದ ತಿಳುವಳಿಕೆ ಮಟ್ಟ!

**–ದ.ರಾ. ಬೇಂದ್ರೆ**

**ಪತ್ರಿಕೆಗೆ ಶುಭವನ್ನು ಕೋರುವ...**

**ಬಿ.ಸುರೇಶ**
**ಡಾ. ವಿಜಯಾ**

HOSA MANUSHYA, a kannada monthly solely owned, edited, published and printed by D. S. Nagabhushana, at HIG-5, Kallahally Extn.,Vinoba Nagara, SHIVAMOGGA-577204. Printed at Ila Printers, Bengaluru-560 026 Ph. No:080-26757159

**Regd. News Paper** RNI No. KARKAN/2012/47568
Rgd No. KA/SK/SMG-1209/2013-15

ಇವರಿಗೆ \ To

If undelivered, please return to D.S. Nagabhushana, Editor,
'Hosa Manushya', 'HIG-5, 'Nudi', Kallahalli Extesion.
Vinoba Nagara, Shivamogga - 577204 (Karnataka)